

ಂಪುಟ 24 ಸಂಚಿಕೆ 1
ನವರಿ 6, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ





ಕೊಡಗಿಗೆ ಕೊಳ್ಳಿ ಇಟ್ಟ ಖಾವಿಪಡೆ




ಜನ ದಮನಕ್ಕೆ ಕೃಷ್ಣ ಸಜ್ಜು

ಭಯೋತ್ಪಾದನ ಸರ್ಕಾರಕ್ಕೀಗ ಅಗ್ನಿ ಪರೀಕ್ಷೆ





ಮೌಲ್ಯ ಸಂಘರ್ಷದ 'ಕಭಿ ಖುಷಿ ಕಭಿ ಗಮ್'



ವಿ.ಪಿ.ಸಿಂಗ್ ಸರ್ಕಾರ ಪತನ : ರಾಜೀವ್ ಹತ್ಯೆ

ಹಿಂದಿನ ಸಂಚಿಕೆಯಲ್ಲಿ ಜ್ಯೋತಿಬಸುರವರ ವಿಯೆಟ್ನಾಂ ಪ್ರವಾಸ, ನಗರಪಾಲಿಕೆಯಲ್ಲಿ ಎಡರಂಗದ ಗೆಲುವು, ನೆಲ್ಸನ್ ಮಂಡೇಲಾರಿಗೆ ಕಲ್ಕತ್ತಾದಲ್ಲಿ ಸನ್ಮಾನ, ಬಿಜೆಪಿಯ ಕೋಮುವಾದಿ ಆಟ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಚಂದ್ರಶೇಖರ್ ಮತ್ತು ಅವರ ಸಂಗಡಿಗರ ವಿಶ್ವಾಸ ದ್ರೋಹ, ವಿ.ಪಿ.ಸಿಂಗ್ ಪ್ರಧಾನಿ ಪಟ್ಟಕ್ಕೆ ರಾಜಿನಾಮೆ, ಉತ್ತಮ ಕೆಲಸಗಳಿಗೆ ಹಿನ್ನಡೆ, ಪ್ರಧಾನಿಯಾಗಿ ಚಂದ್ರಶೇಖರ್, ಭಾರತ ಅಲಿಪ್ತ ನೀತಿಗೆ ತಿಲಾಂಜಲಿ, ಚಂದ್ರಶೇಖರ್ ಸರ್ಕಾರ ಪತನ, ಚುನಾವಣೆ ಘೋಷಣೆ, ತ್ರಿಕೋನ ಸ್ಪರ್ಧೆ ಮತ್ತು ರಾಜೀವ್ ಗಾಂಧಿ ಭೀಕರ ಹತ್ಯೆ ಈ ಬಗ್ಗೆ ಓದಿರಿ

ಚಂದ್ರಶೇಖರ್ ಮತ್ತು ಅವರ ಬೆಂಬಲಿಗರ ವಿಶ್ವಾಸದ್ರೋಹ ರಾಷ್ಟ್ರೀಯ ರಂಗ ಸರಕಾರದ ಶವಪೆಟ್ಟಿಗೆಯ ಕೊನೆಯಮೊಳೆಯಾಯಿತು. ಒಂದು ನಿರ್ಣಾಯಕ ಕಾಲಘಟ್ಟದಲ್ಲಿ ರಂಗದಿಂದ ಹೊರಬಂದ ಅವರು ಪ್ರಧಾನಿ ಮೇಲೆ ಕಟುವಾದ ವೈಯಕ್ತಿಕ ಧಾಳಿ ಆರಂಭಿಸಿದರು. ಇನ್ನೊಂದೆಡೆ ತನ್ನನ್ನು ಪ್ರಧಾನಮಂತ್ರಿ ಮಾಡಿ ಎಂದು ಹೇಳಿ ಕಾಂಗ್ರೆಸ್‌ನ ಬಾಗಿಲು ತಟ್ಟಿದರು. ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಅಕ್ಟೋಬರ್ 23 ರಂದು ಬಿಜೆಪಿ ವಾಪಸ್ ಪಡೆಯಿತು.

ವಿ.ಪಿ.ಸಿಂಗ್ ರಾಜಿನಾಮೆ

ಇದರ ಪರಿಣಾಮವಾಗಿ ನವೆಂಬರ್ 7 ರಂದು ವಿ.ಪಿ.ಸಿಂಗ್ ರಾಜಿನಾಮೆ ಕೊಟ್ಟರು. ಸರಕಾರ ಪತನವಾಯಿತು. ಕಾಂಗ್ರೆಸ್ ಮತ್ತು ಬಿಜೆಪಿ ಕೈಜೋಡಿಸಿದವು. ಆದರೆ ಅಧಿಕಾರದಾಟದಲ್ಲಿ ವಿ.ಪಿ.ಸಿಂಗ್ ಸರಕಾರ ರಾಜಿ ಮಾಡಿಕೊಳ್ಳಲಿಲ್ಲ ಅಥವಾ ತನ್ನನ್ನು ತಾನು ಮಾರಿಕೊಳ್ಳಲಿಲ್ಲ ಎಂಬುದನ್ನು ಜನರು ಅರಿತರು. 1990 ನವೆಂಬರ್ 10 ರಂದು ಚಂದ್ರಶೇಖರ್ ಪ್ರಧಾನಿಯಾದರು.

ಪಕ್ಷಾಂತರಿಗಳ ಅಲ್ಪಸಂಖ್ಯಾತ ಸರಕಾರದ ಮುಖ್ಯಸ್ಥರ ನೆಲೆಯಲ್ಲಿ ಚಂದ್ರಶೇಖರನ್ನು ಪ್ರಧಾನಿಯಾಗಿ ಪ್ರತಿಷ್ಠಾಪಿಸಿದ್ದು ಪ್ರಜಾಪ್ರಭುತ್ವಕ್ಕೆ ಕಳಂಕವಾಗಿದೆ. ಈ ಘಟನಾವಳಿಗಳಿಗೆ ರಾಜೀವ್ ಗಾಂಧಿ ಮತ್ತು ಅವರ ಪಕ್ಷದವರನ್ನು ದೂರಬೇಕಾಗಿದೆ.

ಉತ್ತಮ ಕ್ರಮಗಳು

ವಿ.ಪಿ.ಸಿಂಗ್ ಸರಕಾರ ಕೆಲವು ಉತ್ತಮ ಕ್ರಮಗಳನ್ನು ಕೈಗೊಳ್ಳುತ್ತಿದ್ದಾಗಲೇ ಅದನ್ನು ಉರುಳಿಸಲಾಯಿತು. ಅಂತರರಾಜ್ಯ ಮಂಡಳಿಯನ್ನು ರಚಿಸಲಾಯಿತು. ಅದರ ಪ್ರಥಮ ಸಭೆಯಲ್ಲಿ ನಾನು ಭಾಗವಹಿಸಿದೆ. ರಾಷ್ಟ್ರೀಯ ಸಮಗ್ರತೆ ಮಂಡಳಿಯನ್ನು ಪುನರಚಿಸಲಾಯಿತು. ಕೇಂದ್ರ-ರಾಜ್ಯ ಸಂಬಂಧಗಳು ಸುಧಾರಿಸ್ತಿದವು. ಉದ್ಯೋಗವನ್ನು ಮೂಲಭೂತ ಹಕ್ಕನ್ನಾಗಿ ಮಾಡುವ ದಿಸೆಯಲ್ಲೂ ಕೇಂದ್ರ ಕ್ರಮಗಳನ್ನು ಆರಂಭಿಸಿತ್ತು. 59ನೇ ತಿದ್ದುಪಡಿಯನ್ನು ರದ್ದು ಪಡಿಸಲಾಯಿತು.

ಪಂಜಾಬ್ ಮತ್ತು ಕಾಶ್ಮೀರ ವಿಷಯದ ಮೇಲೆ ಸರ್ವ ಸಮ್ಮತಿ ರೂಪುಗೊಳ್ಳುತ್ತಿತ್ತು. ದೂರದರ್ಶನ ಮತ್ತು ಆಕಾಶವಾಣಿಗೆ ಸ್ವಾಯತ್ತೆ ನೀಡುವ ಪ್ರಸಾರ ಭಾರತಿ ಮಸೂದೆಯನ್ನು ಮಂಡಿಸಿತು. ಅದನ್ನು ಅನುಷ್ಠಾನಗೊಳಿಸುವ ಅವಕಾಶ ಸರಕಾರಕ್ಕೆ ಸಿಗಲಿಲ್ಲ ಎನ್ನುವುದು ಬೇರೆ ವಿಷಯ.

ಏನಿದ್ದರೂ ಸರಕಾರದ ಬಜೆಟ್ ಮತ್ತು ಆರ್ಥಿಕ ನೀತಿಗಳನ್ನು ನಾವು ಟೀಕಿಸಿದೆವು. ಆಡಳಿತದ ಉತ್ತಮ ಅಂಶಗಳನ್ನು ಬೆಂಬಲಿಸಿದೆವು. ಎರಡೂ ಅಗತ್ಯವಾಗಿತ್ತು.


1990 ನವೆಂಬರ್‌ನಲ್ಲಿ ಬಿಜೆಪಿ ಬಗ್ಗೆ ರಾಷ್ಟ್ರೀಯರಂಗದ ನಾಯಕರು ತಮ್ಮ ಧೋರಣೆಯನ್ನು ಸ್ಪಷ್ಟಪಡಿಸಿದಾಗ ರಂಗದ ಜತೆಗಿನ ನಮ್ಮ ಸಮೀಕರಣ ಹೊಸ ಆಯಾಮ ಪಡೆಯಿತು. ಬಂಡವಾಳಶಾಹಿ ಪ್ರಜಾಸತ್ತಾತ್ಮಕ ಕೂಟವೊಂದು ಬಹಿರಂಗವಾಗಿ ಕಮ್ಯುನಿಸ್ಟರ ಜತೆ ಕೈಜೋಡಿಸಿದ್ದು

ಆದರೆ ರಂಗ ಮತ್ತು ಅದರ ಮುಖ್ಯ ಅಂಗಪಕ್ಷಗಳಾದ ಜನತಾದಳ ಉದ್ದಕ್ಕೂ ಒಗ್ಗಟ್ಟಿನ ನಿಲುವನ್ನು ತೋರ್ಪಡಿಸಲಿಲ್ಲ ಎನ್ನುವುದು ವಾಸ್ತವ ಸಂಗತಿ. ಮಂಡಲ್‌ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡಲು ಇದ್ದಕ್ಕಿದ್ದಂತೆ ನಿರ್ಧರಿಸಲಾಯಿತು. ನಾವು ಯಾವತ್ತೂ ಮೀಸಲಾಗಿಗೆ ವಿರೋಧಿಗಳಲ್ಲ, ಆದರೆ ಮೀಸಲಾತಿಯೊಂದೇ ಪರಿಹಾರವಲ್ಲ. ಆರ್ಥಿಕ ಪರಿಸ್ಥಿತಿಯ ಬದಲು ಜಾತಿಗಳ ಆಧಾರದಲ್ಲಿ ಸೂತ್ರಗಳನ್ನು ರೂಪಿಸುತ್ತ ಹೋದರೆ ಬಿಕ್ಕಟ್ಟು ಹೆಚ್ಚಾಗುತ್ತದೆ. ಆದದ್ದು ಅದುವೇ. ಕಾಂಗ್ರೆಸ್ ಮತ್ತು ಬಿಜೆಪಿ ಅದನ್ನು ತಮ್ಮ ಲಾಭಕ್ಕೆ ಬಳಸಿಕೊಂಡವು.

ಕೊಲ್ಲಿ ಯುದ್ಧ

1991 ಜನವರಿ 17 ರಂದು ಆರಂಭವಾದ ಕೊಲ್ಲಿಯುದ್ಧ ಫೆಬ್ರವರಿ 28 ರಂದು ಇರಾಕ್ ಶರಣಾಗುವುದರೊಂದಿಗೆ ಅಂತ್ಯವಾಯಿತು. ಇದು ಅಮೆರಿಕದ ಅತ್ಯಂತ ಕ್ರೂರ ದೌರ್ಜನ್ಯವಾಗಿತ್ತು. ವಿವೇಕವುಳ್ಳ ಯಾರೂ ಕುವೇತ್ ಮೇಲಿನ ಆಕ್ರಮಣವನ್ನು ಒಪ್ಪುವುದಿಲ್ಲ; ಆದರೆ ಇರಾಕ್ ಜನರ ಮೇಲೆ ನಡೆದ ಅತಿಕ್ರಮಣ ತೀರ ಅನಾಗರೀಕವಾಗಿತ್ತು. ಶ್ರೀಮಂತ ದೇಶಗಳು ಮೂರನೇ ಜಗತ್ತನ್ನು (ಬಡದೇಶಗಳನ್ನು) ಶೋಷಿಸುವುದು ಹಾಗೂ ಅವುಗಳ ಮೇಲೆ ಹೆಚ್ಚು ನಿಯಂತ್ರಣ ಸಾಧಿಸುವುದು ವಿವಾದದ ಮೂಲದಲ್ಲಿತ್ತು.

ಪಕ್ಷದ 14ನೇ ಮಹಾಧಿವೇಶನ ರೂಪಿಸಿದ ಕರಡುರಾಜಕೀಯ ಗೊತ್ತುವಳಿಯಲ್ಲಿ ನಾವು ಈ ವಿಷಯವನ್ನು ಚರ್ಚಿಸಿದ್ದೆವು. ಇರಾಕ್ ಮತ್ತು


ಚಂದ್ರಶೇಖರ್

ಲ್ಯಾಟಿನ್ ಅಮೆರಿಕದ ಅನೇಕ ಇತರ ದೇಶಗಳು ಶ್ರೀಮಂತ ರಾಷ್ಟ್ರಗಳ ಧೋರಣೆಯ ಬಲಿಪಶುಗಳಾಗಿದ್ದವು. ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಕೂಡ ವಿಷಯಗಳನ್ನು ಕಾಮಾಲೆ ಕಣ್ಣಿನಿಂದ ನೋಡುತ್ತಿತ್ತು. ಇಂಥ ಅಪಾಯಗಳಿಂದ ನಮ್ಮ ದೇಶ ಕೂಡ ಹೊರತಲ್ಲ ಎಂಬುದನ್ನು ನಾವು ಮನಗಂಡೆವು. ಆಗ ಚಂದ್ರಶೇಖರ್ ಪ್ರಧಾನಿಯಾಗಿದ್ದರು. ಅವರು ದೇಶವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅಮೆರಿಕದ ಯುದ್ಧ ವಿಮಾನಗಳು ಇಂಧನ ತುಂಬಿಕೊಳ್ಳಲು ಮುಂಬಯಿ ವಾಯುನೆಲೆಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. ನಮ್ಮ ಅಲಿಪ್ತ ನೀತಿಗೆ ಇದು ದೊಡ್ಡ ಹೊಡೆತವಾಗಿತ್ತು. ಆದರೆ ಪ್ರಧಾನಿ ಆ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ.

ದೇಶೀಯ ರಂಗವನ್ನು ಗಮನಿಸಿದರೆ, ತಮಿಳುನಾಡು ಮತ್ತು ಅಸ್ಸಾಮಿನ ಚುನಾಯಿತ ಸರಕಾರಗಳನ್ನು ಚಂದ್ರಶೇಖರ್ ವಜಾ ಮಾಡಿದರು. ಮಂದಿರ, ಹಾಗೆಯೇ ಮಂಡಲ್ ವರದಿ ಪ್ರಶ್ನೆ ಪರಿಸ್ಥಿತಿಯನ್ನು ಆಗಲೇ ಉದ್ವಿಗ್ನಗೊಳಿಸಿತ್ತು. ರಾಷ್ಟ್ರೀಯ ಏಕತೆಗೆ ಅಪಾಯ ಒದಗಿತ್ತು. ಚಂದ್ರಶೇಖರ್ ಖಲಿಸ್ತಾನಿಗಳೊಂದಿಗೆ ಒಂದು ರಹಸ್ಯ ಒಪ್ಪಂದಕ್ಕೆ ಬಂದರು. ಬಿಜೆಪಿ ಮತ್ತು ಕಾಂಗ್ರೆಸ್ ಮಂಡಲ್ ವರದಿಯನ್ನು ವಿರೋಧಿಸಿದವು. ಭಾರತ ದಿವಾಳಿಯ ಅಂಚಿನಲ್ಲಿತ್ತು. ಇವೆಲ್ಲದರ ಮಧ್ಯೆ, ರಾಜೀವ್ ಗಾಂಧಿ ತಮ್ಮ ಮನೆಯ ಹೊರಗೆ ಕಣ್ಗಾವಲು ಇಡಲಾಗಿದೆ ಎಂಬ ಕ್ಷುಲ್ಲಕ ಆರೋಪವನ್ನು ಮುಂದೊಡ್ಡಿ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆದರು. ಕೇವಲ ನಾಲ್ಕು ತಿಂಗಳು ಅಧಿಕಾರದಲ್ಲಿದ್ದ ಚಂದ್ರಶೇಖರ್ 1991 ಮಾರ್ಚ್ ಆರರಂದು ರಾಜಿನಾಮೆ ನೀಡಿದರು. ಸಂಸತ್ ಸದಸ್ಯರನ್ನು ಖರೀದಿಸಿ ಸರಕಾರ ರಚಿಸುವ ರಾಜೀವಗಾಂಧಿ ಯತ್ನ ವಿಫಲವಾಯಿತು. ದೇಶ 10ನೇ ಸಾರ್ವತ್ರಿಕ ಚುನಾವಣೆಯನ್ನು ಎದುರಿಸಿತು.

ತ್ರಿಕೋನ ಸ್ಪರ್ಧೆ

ಕಾಂಗ್ರೆಸ್(ಐ), ಬಿಜೆಪಿ ಮತ್ತು ರಾಷ್ಟ್ರೀಯರಂಗದ ನಡುವೆ ತ್ರಿಕೋನ ಸ್ಪರ್ಧೆಗೆ ರಂಗ ಸಜ್ಜಾಯಿತು. ಚುನಾವಣೆಯ ಹಿನ್ನೆಲೆಯನ್ನು ವಿಶ್ಲೇಷಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ, ಪಕ್ಷಾಂತರಿಗಳ ಸರಕಾರ ಅನುಸರಿಸಿದ ಸಾಮ್ರಾಜ್ಯಶಾಹಿ ಪರ ನೀತಿಗಳಿಂದಾಗಿ ದೇಶದ ಭದ್ರತೆಗೆ ಅಪಾಯ ಒದಗಿದೆ ಎಂದು ಜನತೆಯನ್ನು ಎಚ್ಚರಿಸಿತು. ಸಮಾಜವಾದಿ ದೇಶಗಳು ಅನುಭವಿಸಿದ ಹಿನ್ನಡೆ ಹಾಗೂ ಕೊಲ್ಲಿ ಯುದ್ಧದಲ್ಲಿ ಅಮೆರಿಕ ಜಯಗಳಿಸಿದ್ದು ತೃತೀಯ ಜಗತ್ತಿನ ಮೇಲೆ ಆಕ್ರಮಣ ಹೆಚ್ಚಲು ಕಾರಣವಾಯಿತು. ಅಲಿಪ್ತ ಚಳುವಳಿಯ ಮುಖ್ಯ ಪ್ರತಿಪಾದಕ ರಾಷ್ಟ್ರವಾದ ಭಾರತಕ್ಕೆ ಕೂಡ ಅಪಾಯ ಇತ್ತು.

ಕಾಂಗ್ರೆಸ್(ಐ) ಮತ್ತು ಬಿಜೆಪಿಯನ್ನು ಸೋಲಿಸಲು ಕೇಂದ್ರ ಸಮಿತಿ ಕರೆ ನೀಡಿತು. 'ಕಾಂಗ್ರೆಸ್ ಮತ್ತು ಜನತಾದಳದ (ಸಮಾಜವಾದಿ) ಬಣ್ಣವನ್ನು ಬಹಿರಂಗಪಡಿಸಬೇಕು. ಕೋಮುವಾದದ ರಾಜಕೀಯದ ಆಧಾರದಲ್ಲಿ ದೇಶವನ್ನು ಒಡೆಯಲು ಬಿಜೆಪಿ ಯತ್ನಿಸುತ್ತಿದೆ. ರಾಷ್ಟ್ರೀಯರಂಗವೊಂದೇ ಅವುಗಳಿಗೆ ಪರ್ಯಾಯ' ಎಂದು ಸಿಪಿಐ(ಎಂ) ಹೇಳಿತು.

ಈ ನಿಲುವಿನ ಆಧಾರದಲ್ಲಿ ಸಿಪಿಐ(ಎಂ) ಪ್ರಣಾಳಿಕೆಯನ್ನು ರೂಪಿಸಲಾಯಿತು. ಏಪ್ರಿಲ್ 20 ರಂದು ಅದನ್ನು ಬಿಡುಗಡೆ ಮಾಡಿದೆವು. ಚುನಾವಣೆ ಪ್ರಣಾಳಿಕೆ ಹೊರಡಿಸಿದ್ದು ಆಗ ತಾನೇ ಮೊದಲು. ಕಾಂಗ್ರೆಸ್ಸೇತರ, ಬಿಜೆಪಿಯೇತರ ಪಕ್ಷಗಳ ಜತೆಗಿನ ಸ್ಥಾನ ಹೊಂದಾಣಿಕೆ ಪ್ರಕಾರ ನಾವು 67 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆವು.

ಲೋಕಸಭೆ ಚುನಾವಣೆ ಜತೆಯಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯೂ ನಡೆಯಿತು. ಕೋಮು ಸೌಹಾರ್ದದ ರಕ್ಷಣೆಗೆ ರಾಜ್ಯ ಮಾದರಿ ಹಾಕಿಕೊಟ್ಟಿತ್ತು. ಈ ವಿಚಾರದಲ್ಲಿ ಎಡರಂಗ ಸರಕಾರ ವಿಶೇಷ ಕ್ರಮಗಳನ್ನು ಕೈಗೊಂಡಿತ್ತು. ರಂಗವನ್ನು ಬಲಪಡಿಸುವುದು ಹಾಗೂ ದೇಶದಲ್ಲಿ ಭಯದ ಅಲೆಯನ್ನು ಎಬ್ಬಿಸಿರುವ ಪ್ರತಿಗಾಮಿ ಶಕ್ತಿಗಳನ್ನು ಸೋಲಿಸುವುದು ನಮ್ಮ ಆದ್ಯ ಕರ್ತವ್ಯವೆಂದು ನಾವು ಭಾವಿಸಿದೆವು.

1991 ಏಪ್ರಿಲ್ 16 ರಂದು ಎಡರಂಗ ಚುನಾವಣೆ ಪ್ರಣಾಳಿಕೆಯನ್ನು ಪ್ರಕಟಿಸಿತು. 1991 ಮೇ 21 ರಂದು ತಮಿಳುನಾಡಿನ ಪೆರಂಬೂರಿನಲ್ಲಿ ರಾಜೀವಗಾಂಧಿಯವರ ಹತ್ಯೆಯಾಯಿತು. ಎಲ್‌ಟಿಟಿಇ ಭಯೋತ್ಪಾದಕರು ರಾಜೀವರನ್ನು ಕೊಂದ ರೀತಿ ಭಯಾನಕ ಹಾಗೂ ಖಂಡನೀಯವಾಗಿತ್ತು. ದೇಶವಿಡೀ ಭೀತಿಯಿಂದ ಕಂಪಿಸಿತು. ಒಬ್ಬ ಯುವ ನೇತಾರನ ಇಂಥ ಅಂತ್ಯ ತೀರಾ ಬೇಸರದ ಸಂಗತಿ. ಚುನಾವಣೆ ಸಂದರ್ಭದಲ್ಲಿ ನಡೆದ ಈ ಹತ್ಯೆ ರಾಜಕೀಯ ದೃಶ್ಯವನ್ನೇ ಬದಲಾಯಿಸಿತು. ಎರಡನೇ ಹಾಗೂ ಮೂರನೇ ಹಂತದ ಮತದಾನ ಇನ್ನೂ ನಡೆದಿರಲಿಲ್ಲ. ಕಾಂಗ್ರೆಸ್ ಪರವಾಗಿ ಅನುಕಂಪದ ಅಲೆಯೇ ಎದ್ದಿತು. ಅಷ್ಟಾಗಿಯೂ ಸ್ಪಷ್ಟ ಬಹುತಮ ಗಳಿಸಲು ಕಾಂಗ್ರೆಸ್ ವಿಫಲವಾಯಿತು. ಅದಕ್ಕೆ 218 ಸ್ಥಾನಗಳು ದೊರೆತವು. ಒಂದು ವೇಳೆ ರಾಜೀವ ಗಾಂಧಿ ಹತ್ಯೆ ಆಗದಿದ್ದರೆ ಕಾಂಗ್ರೆಸ್‌ಗೆ ಅಷ್ಟು ಬೆಂಬಲ ಗಳಿಸುವುದು ಕೂಡಾ ಕಷ್ಟವಾಗುತ್ತಿತ್ತು. ಬಿಜೆಪಿ ತನ್ನ ಬಲವನ್ನು 86 ರಿಂದ 116 ಕ್ಕೆ ಏರಿಸಿಕೊಂಡಿತು. ಆ ಪಕ್ಷ ಉತ್ತರ ಪ್ರದೇಶದಲ್ಲಿ ಸ್ಪಷ್ಟ ಬಹುಮತಗಳಿಸಿ ಸರಕಾರವನ್ನು ರಚಿಸಿತು. ಆ ರಾಜ್ಯವೊಂದರಿಂದಲೇ ಬಿಜೆಪಿ 50 ಲೋಕಸಭಾ ಸ್ಥಾನಗಳನ್ನು ಗೆದ್ದಿತು. ಜನತಾದಳ ಕೇವಲ 59 ಸ್ಥಾನ ಪಡೆಯಿತು; ಯಾವ ದೃಷ್ಟಿಯಿಂದ ನೋಡಿದರೂ ಅದು ದಯನೀಯ ಸಾಧನೆಯಾಗಿತ್ತು.

ಸಿಪಿಐ(ಎಂ) ಹಿಂದಿನ ಸಲಕ್ಕಿಂತ ಎರಡು ಹೆಚ್ಚಿಗೆ, ಅಂದರೆ 35 ಸ್ಥಾನಗಳನ್ನು ಜಯಸಿತು. ಸಿಪಿಐ 14, ಆರ್‌ಎಸ್‌ಪಿ ನಾಲ್ಕು ಹಾಗೂ ಫಾರ್ವರ್ಡ್ ಬ್ಲಾಕ್ ಮೂರರಲ್ಲಿ ಗೆದ್ದಿತು. ಬಹುಜನ ಸಮಾಜ ಪಕ್ಷ(ಬಿಎಸ್‌ಪಿ) ಕೇವಲ ಎರಡು ಸ್ಥಾನಗಳಲ್ಲಿ ಗೆದ್ದಿದ್ದು ಅಚ್ಚರಿಯ ವಿಚಾರ.

ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆಯದಿದ್ದರೂ ಅದು ಸರಕಾರವನ್ನು ರಚಿಸಿತು. ರಾಜಕೀಯದಿಂದ ಬಹುತೇಕ ನಿವೃತ್ತಿಹೊಂದಿದ್ದ ಹಾಗೂ ಚುನಾವಣೆಯಲ್ಲೇ ಸ್ಪರ್ಧಿಸಿರದಿದ್ದ ಒಬ್ಬ ವ್ಯಕ್ತಿಯನ್ನು ಪ್ರಧಾನಿ ಪಟ್ಟದಲ್ಲಿ ಕುಳ್ಳಿರಿಸಿತು. 1991 ಜೂನ್ 21 ರಂದು ಪಿ.ವಿ.ನರಸಿಂಹರಾವ್ ಪ್ರಮಾಣವಚನ ಸ್ವೀಕರಿಸಿದರು.

ಜೂನ್ 21 ಮತ್ತು 22 ರಂದು ನಮ್ಮ ಕೇಂದ್ರ ಸಮಿತಿ ಸಭೆ ನಡೆಯಿತು. ನಾವು ಮುಖ್ಯವಾಗಿ ಉತ್ತರ ಪ್ರದೇಶ ಪರಿಸ್ಥಿತಿ ಬಗ್ಗೆ ಒತ್ತು ನೀಡಿದೆವು. ಅಲ್ಲಿ ಬಿಜೆಪಿ ಸರಕಾರ ಸಹಜವಾಗಿಯೇ ಮಂದಿರ ನಿರ್ಮಾಣ ವಿಚಾರವನ್ನು ಕೈಗೆತ್ತಿಕೊಳ್ಳಲಿತ್ತು ಹಾಗೂ ಆಡಳಿತ ಮತ್ತು ಪೋಲಿಸ್ ವ್ಯವಸ್ಥೆ ಮೇಲೆ ಪ್ರಭಾವ ಬೀರಲಿತ್ತು.

(ಮುಂದುವರಿಯುವುದು)

ಈ ವಾರ ಕರ್ನಾಟಕ ಒಂದು ನೋಟ



ಎಸ್.ವೈ.ಗುರುಶಾಂತ್

ಇನ್ನು ಗಂಟಲಿನಲ್ಲೂ ಇಳಿಯದು ನೀರು

ಕೃಷ್ಣರವರ ರಾಜ್ಯ ಸರ್ಕಾರ ದಿನದಿಂದ ದಿನಕ್ಕೆ ಜನತೆಯ ಮೇಲೆ ಧಾಳಿಯನ್ನು ಹೆಚ್ಚಿಸುತ್ತಿದೆ. ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗಳಾದ ಮರುದಿನವೇ ಕುಡಿವ ನೀರಿನ ದರಗಳನ್ನು ಪರಿಷ್ಕರಿಸುವ ಮತ್ತು ಅದರ ನಿರ್ವಹಣೆ, ಹಣ ವಸೂಲಿಯನ್ನು ಖಾಸಗಿಯವರಿಗೆ ಒಪ್ಪಿಸುವುದಾಗಿ ಹೇಳಿದ್ದರು. ಈ ನಿರ್ಧಾರ ಕೈಗೊಳ್ಳುವಂತೆ ವಿಶ್ವಬ್ಯಾಂಕ್ ಬಹಳಷ್ಟು ಹಿಂದಿನಿಂದಲೇ ತೀವ್ರತರವಾದ ಒತ್ತಡವನ್ನು ಹೇರಿತ್ತು. ಅದರಂತೆ ಕೃಷ್ಣರವರು ಮೊದಲ ಹಂತವಾಗಿ ಬೆಂಗಳೂರು ಕುಡಿಯುವ ನೀರಿನ ಮತ್ತು ಒಳಚರಂಡಿ ವ್ಯವಸ್ಥೆಗಳ ಧರಗಳನ್ನು ಏಕಾಏಕಿಯಾಗಿ ಏರಿಸಿದರು. ಅಂದರೆ ನೀರಿನ ಕನಿಷ್ಟ ದರ 70 ರೂ. ಗಳಿಂದ 118 ರೂ.ಗಳಿಗೆ. ಇದರಲ್ಲಿ ನೀರು ದರ ರೂ. 20 ಹೆಚ್ಚಳ. ಒಳಚರಂಡಿ ರೂ. 18 (ಹೊಸ ಸೇರ್ಪಡೆ), ಮೀಟರ್ ನಿರ್ವಹಣೆ (!)ರೂ. 10 (ಹೊಸ ಸೇರ್ಪಡೆ) ಒಳಗೊಂಡಿದೆ. 15 ಸಾವಿರ ಲೀಟರ್‌ವರೆಗೆ ಶೇ 68, 15 ಸಾವಿರದಿಂದ 1 ಲಕ್ಷದವರೆಗೆ ಶೇ 75 ರಷ್ಟು ಹೆಚ್ಚಳ. ಸುಮಾರು 70ಕ್ಕೂ ಹೆಚ್ಚು ಬಳಕೆದಾರರು ಈ ಎರಡು ವಿಭಾಗಗಳಲ್ಲೇ ಬರುತ್ತಾರೆ. ಮೇಲಾಗಿ ಇದು ಡಿಸೆಂಬರ್ 1 ರಿಂದಲೇ ಪೂರ್ವಾನ್ವಯವಾಗಿ ಜಾರಿ ಬರಬೇಕೆಂದು ಆದೇಶ ಬೇರೆ.


ಸರ್ಕಾರದ ಈ ನಿರ್ಧಾರ ವಂಚನೆಯ ಹೊರೆ. ಜನರಿಟ್ಟ ವಿಶ್ವಾಸಕ್ಕೆ ದ್ರೋಹ. ವಿಶ್ವಬ್ಯಾಂಕ್-ಖಾಸಗೀ ಧಣಿಗಳ ಗುಲಾಮತನದ ಪ್ರತೀಕ. ಬಹುತೇಕ ನಗರಗಳಲ್ಲಿ ದುಡಿವ, ಬಡಜನತೆಯೇ ಅತ್ಯಧಿಕ. ಒಂದೆಡೆ ಬಾಡಿಗೆ, ವಿದ್ಯುತ್ ದರಗಳು, ಏರಿದ ಸಾಮಾನ್ಯ ವಸ್ತುಗಳ ಬೆಲೆ, ಜೀವನ ವೆಚ್ಚ ನಿರ್ವಹಿಸುವುದೇ ಕಷ್ಟವಿರುವಾಗ. ಈ ಧರಗಳು ನಾಗರೀಕರನ್ನು ಕಂಗಾಲುಗೊಳಿಸುವಂತಹವು. ಹೀಗೆ ಒಂದು ಹಂತದಲ್ಲಿ ಧರಗಳನ್ನು ಹೆಚ್ಚಿಸುತ್ತಾ, ಮುಂದೆ ಅದನ್ನು ಪೂರ್ತಿಯಾಗಿ ಖಾಸಗಿಯವರಿಗೆ ಒಪ್ಪಿಸಲೆಂದೇ ಪೂರ್ವಸಿದ್ಧತೆಯ ತಾಲೀಮು ಇದು.

ಈ ಕ್ರಮದ ವಿರುದ್ಧ ತೀವ್ರ ಪ್ರತಿಭಟನೆಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಮೊದಲು ನಿರಾಕರಿಸಿದ್ದ ಕೃಷ್ಣ ಈಗ ಕೆಲವಷ್ಟು ಇಳಿಸುವುದಾಗಿ ಹೇಳಿದ್ದಾರೆ. ಇದೂ ಅಸಹನೀಯ. ಮತ್ತೆ ಒಂದು ಸಂದರ್ಭ ಸಾಧಿಸಿ ಹೆಚ್ಚಿಸುವ ಹುನ್ನಾರವಂತೂ ಇದ್ದೇ ಇದೆ. ಈ ನಡುವೆ ಸಿಪಿಐ(ಎಂ), ಸಿಪಿಐ ಹೋರಾಟಕ್ಕೆ ಸಿದ್ದಗೊಳ್ಳುತ್ತಿವೆ.

ಹಾರ್ನಳ್ಳಿ ವರದಿ ಖಾಸಗೀಕರಣಕ್ಕೆ ರಹದಾರಿ

ನಿರೀಕ್ಷಿಸಲಾದಂತೆ ಹಾರ್ನಳ್ಳಿ ರಾಮಸ್ವಾಮಿಯವರ ಆಯೋಗದ ವರದಿ ಅಂತಿಮಗೊಂಡು, ಶಿಫಾರಸುಗಳೊಂದಿಗೆ ಮುಖ್ಯಮಂತ್ರಿಗಳ ಕೈ ಸೇರಿದೆ. 'ಆಡಳಿತ ಸುಧಾರಣಾ(!)' ಆಯೋಗದ ಅಧ್ಯಕ್ಷರು ಬುದ್ಧ, ಬಸವ, ಅಂಬೇಡ್ಕರ್‌ರವರ ಸಿದ್ಧಾಂತಗಳನ್ನೇ ಇದರಲ್ಲಿ ಅಡಕಗೊಳಿಸಿ, 'ಮಹಾಸಾಧನೆ' ಗೈದ ತೃಪ್ತಿ ಮತ್ತು ಪುಣ್ಯದ ಪಾಲಿದೆಯೆಂದು ಹೇಳಿ ಆ ಪಂಚಾಮೃತ ಸವಿಯುತ್ತಿದ್ದಾರೆ. ಆದರೆ ಈ ವರದಿ ನಾಡಿನ ದುಡಿವ ನೌಕರರು, ನಿರುದ್ಯೋಗಿಗಳು ಹಾಗೂ ಜನಸಾಮಾನ್ಯರ ಪಾಲಿಗೆ ವಿಷದ ಕಡಲಾಗಲಿದೆ.

ಹಕ್ಕು, ಸೌಲಭ್ಯಗಳನ್ನು ಕಿತ್ತುಕೊಳ್ಳುವುದು, ಆಡಳಿತವನ್ನೇ ಖಾಸಗಿ ಕಂಪನಿಗಳಿಗೆ ಒಪ್ಪಿಸುವುದು... ಇವು ಅತ್ಯಂತ ಕ್ರೂರ ತೀರ್ಮಾನಗಳಲ್ಲಿ ಕೆಲವು. ಅವರೇ ಹೇಳುವಂತೆ ಉದ್ಯೋಗಾವಕಾಶಗಳ ದೃಷ್ಟಿಗಿಂತ ವಾಣಿಜ್ಯ ದೃಷ್ಟಿಗೆ ಪ್ರಾಶಸ್ತ್ಯ. ಅಂದರೆ ಅಂತಿಮವಾಗಿ ಸರ್ಕಾರ ಜನಹಿತ, ಕಲ್ಯಾಣ, ಸೇವೆ, ಅಭಿವೃದ್ಧಿ ಸಾಧಿಸಲು ಅಲ್ಲ. ಅದೊಂದು ಬಹುರಾಷ್ಟ್ರೀಯ ಕಂಪನಿಗಳಂತೆ 'ಕಾರ್ಪೋರೇಟ್ ಆಫೀಸ್' ಆಗಿ ಪರಿವರ್ತನೆ ಹೊಂದುವುದು. ಅದಕ್ಕಾಗಿ ಆಡಳಿತ ವೆಚ್ಚ ಕಡಿತದ ಸೋಗು. ನಿಗಮ-ಮಂಡಳಿಗಳ ರದ್ಧತಿ ಪರಿಶೀಲಿಸ



ಸರ್ಕಾರ, ಉದ್ಯೋಗ ಹರಾಜು. ಹೈಟೆಕ್ ಮೋಜು

ಇದು ಎಸ್.ಎಂ.ಕೃಷ್ಣರ 'ಮೆದುಳಿನ ಶಿಶು'! ಹಾಗೆಂದೇ ಹಾರ್ನಳ್ಳಿಯವರೇ ಹೇಳಿಕೊಂಡಿದ್ದಾರೆ. ಮುಖ್ಯಮಂತ್ರಿ ಕೃಷ್ಣರವರ ಹೈಟೆಕ್ ತಲೆಯಲ್ಲಿ ಏನೇನು ತುಂಬಿದೆ ಮತ್ತು ಅದನ್ನು ತುಂಬಿಸಿದವರು... ಕಾಲಾನುಕಾಲಕ್ಕೆ ಬಿಟ್ಟುಬಿಡದೇ ತುಂಬುವವರೂ ಯಾರೆಂದು ಗೊತ್ತಿದ್ದೇ ಆಗಿದೆ.

ಈ ಆಯೋಗದ ಶಿಫಾರಸುಗಳು ಆಡಳಿತವನ್ನು ಚುರುಕು ಹಾಗೂ ಸಮರ್ಥ ಗೊಳಿಸುವ, ಜನಸಾಮಾನ್ಯರ ಪಾಲಿಗೆ ಸರ್ಕಾರ ಹತ್ತಿರವಾಗಿ ಸದಾ ಗೋಗರೆಯುವ, ಎಡತಾಕುವ ಸನ್ನಿವೇಶಗಳನ್ನು ದೂರಗೊಳಿಸುವ ದಿಕ್ಕಿನಲ್ಲಿ ಇಲ್ಲವೇ ಇಲ್ಲ. ಸರ್ಕಾರದ ಪ್ರಸಕ್ತ 50 ಸಾವಿರದಷ್ಟು ಹುದ್ದೆಗಳನ್ನೇ ರದ್ದುಗೊಳಿಸುವುದು, ಹೊಸ ನೇಮಕಾತಿ ಆಗದಂತೆ ತಡೆಯುವುದು, ನೌಕರರ ಸೇವಾ ಭದ್ರತೆ, ಹಲವು ದಶಕಗಳಿಂದ ಹೋರಾಡಿ ಪಡೆದ ಬಹುದಾದರೂ, ಅಭಿವೃದ್ಧಿಯ ಮಂಡಳಿಗಳ ವಿಚಾರ ಸಮಗ್ರ ಚರ್ಚೆಯ ನಂತರವೇ ನಿರ್ಧರಿಸಬೇಕಾದುದು.

ಈಗಾಗಲೇ ಕೇಂದ್ರ ಸರ್ಕಾರವೇ ಶೇ 35 ರಷ್ಟು ಹುದ್ದೆಗಳ ಕಡಿತಕ್ಕೆ ನಿರ್ದೇಶಿಸಿದೆ. ಸಾಮಾಜಿಕ ಬದ್ಧತೆ-ಕಲ್ಯಾಣದಿಂದ ಹಿಂದೆ ಸರಿಯಲು ವಿಶ್ವಬ್ಯಾಂಕ್, ಐಎಂಎಫ್ ದಬಾಯಿಸುತ್ತಿದೆ. ಅಂತಹುಗಳನ್ನು ಜಾರಿ ಗೊಳಿಸಲು ಇಂತಹ ಸಮಿತಿ ನೇಮಕವಾಗಿದೆ. ಇಂತಹ ಆಯೋಗದ ಕ್ರೂರ ಶಿಫಾರಸುಗಳನ್ನು ಒಪ್ಪಲು ಸಾಧ್ಯವೇ ಇಲ್ಲ. ಕೃಷ್ಣರ ಸರ್ಕಾರ ಇವುಗಳನ್ನು ಜಾರಿಗೊಳಿಸದಂತೆ ಎಲ್ಲಾ ವಿಭಾಗಗಳ ವಿಶಾಲವಾದ ಪ್ರತಿಭಟನೆ ನಡೆಸಲೇಬೇಕಿದೆ, ಹಿಮ್ಮೆಟ್ಟಿಸಬೇಕಿದೆ.

ಜನರ ದಮನಕ್ಕೆ ಸಜ್ಜಾಗುತ್ತಿರುವ ಕೃಷ್ಣ

ಕರ್ನಾಟಕವನ್ನು ಸಿಂಗಾಪೂರ್ ಮಾಡುವ ಕೃಷ್ಣರವರ ಕನಸುಗಳ ಧರೆಗಿಳಿದು ಮುಳ್ಳುಗಳಾಗಿ ಮೊಳೆಯತೊಡಗಿದೆ! ಒಂದೆಡೆ ಕುಡಿವ ನೀರಿನ ಧರಗಳ ಹೆಚ್ಚಳ, ವಾಹನ ನಿಲುಗಡೆಗೆ ಹಣ ವಸೂಲಿ, ವಿದ್ಯುತ್ ದರಗಳ ಏರಿಕೆ, ದುಬಾರಿಯಾಗುತ್ತಿರುವ ಶಿಕ್ಷಣ, ಹಲವು ತೆರಿಗೆಗಳ ಹೊರೆಯಂತಹ ಬಾರುಕೋಲಿನ ಬಾಸುಂಡೆಗಳು ನಾಗರೀಕರ ಬೆನ್ನ ಮೇಲೆ ಮೂಡುತ್ತಿರುವಂತೆಯೇ ಬೆಂಗಳೂರಿನಂತಹ ನಗರದ ಪಾದಯಾತ್ರಿಗಳ ಹಾದಿಗೆ ಅಲ್ಲಲ್ಲಿ ನುಣುಪು ಕಲ್ಲು ಹಾಸಿ, ವಿನ್ಯಾಸದ ಕುರ್ಚಿ ಅಳವಡಿಸಿ, ಬಸ್ ನಿಲ್ದಾಣಗಳನ್ನು ಸಿಂಗರಿಸಿ ನೋಡುಗರಿಗೆ ಖುಷಿ ತರಲು ಯತ್ನಿಸಿದೆ. ನಗರದಲ್ಲಿ ಹೆಚ್ಚುತ್ತಿರುವ ಅಪಹರಣ, ಕೊಲೆ, ದರೋಡೆ ವಂಚನೆಗಳನ್ನು ಮಟ್ಟ ಹಾಕಲು ಬಹಳ ದಕ್ಷನೆಂಬ ಖ್ಯಾತಿ ಪಡೆದಿರುವ ಸಾಂಗ್ಲಿಯಾನಾ ಅವರನ್ನೇ ಪೋಲಿಸ್ ಕಮಿಷನರ್ ಮಾಡಲಾಯಿತು. ಅವರೇನೋ ಗುಟುರು ಹಾಕುತ್ತಿರುವುದು ನಿಜ. ಆದರೆ ಇನ್ನೂ ಅಪರಾಧಗಳು ನಿಂತಿಲ್ಲ. ಅವುಗಳ ಬೇರಿಗೆ ಹೋಗಲು, ಅದನ್ನು ಮಟ್ಟಹಾಕಲು ಸಾಧ್ಯವಾದೀತೆ ಎಂಬ ಸವಾಲಿನ ಪ್ರಶ್ನೆ ಹಾಗೆ ಇದೆ. ಇವರ ಕಾರ್ಯವ್ಯಾಪ್ತಿ ಎಷ್ಟು ಎಂಬುದೂ ಸ್ವತಃ ಅವರಿಗೆ ತಿಳಿಯಬೇಕಿದೆ.

ಈ 'ದಕ್ಷ ಅಧಿಕಾರಿ' ಮಹಾತ್ಮಗಾಂಧಿ ರಸ್ತೆಗೆ ಸೈಕಲ್, ಆಟೋಗಳಿಗೆ ಪ್ರವೇಶವಿಲ್ಲ. ಅಲ್ಲಿ ಸಂಚರಿಸುವ ಕಾರುಗಳೂ ಸಹ ಇಂತಿಷ್ಟೇ ವೇಗದಲ್ಲಿಯೇ ಓಡಬೇಕು ಎಂದು ಫರ್ಮಾನು ಹೊರಡಿಸಿ, 'ಸಿಂಗಾಪುರ್' ಯೋಜನೆಯ ತುಣುಕು ಇವೆಲ್ಲವು ರೋಚಕ, ಭ್ರಮಾತ್ಮಕ ರಂಗಿನ ಪ್ರಚಾರ, ನಾಗರೀಕರನ್ನು ಶಿಸ್ತಿಗೊಳಪಡಿಸುವ 'ಕರ್ತವ್ಯ'ಗಳ ನಂತರ ಕೃಷ್ಣರ ಸರ್ಕಾರ ನಿಜಕ್ಕೂ ಏನನ್ನೂ ಮಾಡಲು ಬಯಸುತ್ತಿದೆ ಎಂಬುದರತ್ತ ಇತ್ತೀಚಿನ ಹೆಜ್ಜೆಗಳು ದಿಗಿಲುಗೊಳಿಸುವಂತಹವು.

ಅಧಿಕಾರಕ್ಕೇರಿದ್ದ ಕೃಷ್ಣ, ಜನಪರ ಪರ್ಯಾಯ ಕಾರ್ಯಕ್ರಮಗಳಿಲ್ಲದೇ, ಹೈಟೆಕ್‌ನ ಭ್ರಮಾಧೀನತೆಯಲ್ಲಿ ಬೀಗುತ್ತಿದ್ದಾಗ ವಿಶ್ವ ಬಂಡವಾಳಗಾರರನ್ನು ಆಕರ್ಷಿಸಲು 'ದಾವೂಸ್'ನಲ್ಲಿನ 'ವಿಶ್ವ ಆರ್ಥಿಕ ಸಮ್ಮೇಳನ'ದಲ್ಲಿ ಭಾಗವಹಿಸಿ



ಹಿಂದಿರುಗುವಾಗಿನ ಅನುಭವವೊಂದನ್ನು ಇತ್ತೀಚಿಗೆ ಹಿರಿಯ ಪೋಲೀಸ್ ಅಧಿಕಾರಿಗಳ ಸಭೆಯಲ್ಲಿ 'ಈ ಸಭೆಯ ಅಜೆಂಡಾ'ಗಳನ್ನು ಜಾಗತೀಕರಣ ವಿರೋಧಿಸಿ ಭಾರಿ ಪ್ರಮಾಣದಲ್ಲಿ ವಿರೋಧಿಸಿ ಜನರ ಮತ ಪ್ರದರ್ಶನ ನಡೆಯಿತಂತೆ. ಹೀಗಾಗಿ ಕ್ಲಿಂಟನ್‌ನಂತವರಿದ್ದ ಈ ಗಣ್ಯಾತಿ ಗಣ್ಯರು ವಿಮಾನಿಲ್ದಾಣ ಪ್ರವೇಶಿಸಲು ಆಗದೇ ಸುಮಾರು 480 ಕಿ.ಮಿ. ಕಾರಿನ ಮೂಲಕ ಪ್ರಯಾಣಿಸಿ, ಪಕ್ಕದ ದೇಶದ ವಿಮಾನ ನಿಲ್ದಾಣದಿಂದ ಹಿಂದಿರುಗಬೇಕಾಯಿತಂತೆ.

ಜಾಗತೀಕರಣ, ಉದಾರೀಕರಣದ ಭಯಾನಕ ಸಂಕಟಗಳಿಂದ ನಲುಗಿರುವ, ನಲುಗುತ್ತಿರುವ ಜನತೆಯ ಆಕ್ರೋಶದ ಕುರಿತು ಸತ್ಯವನ್ನು ಒಪ್ಪಿಕೊಳ್ಳುವ ಕೃಷ್ಣ, ಮುಂದುವರೆದು ಮಾತನಾಡುತ್ತಾ 'ಕರ್ನಾಟಕದಲ್ಲಿ ಅಂತಹ ಸ್ಥಿತಿಯೊಂದು ನಿರ್ಮಾಣವಾಗಲಿಕ್ಕಿಲ್ಲ. ಆದರೂ ಅದನ್ನು ಎದುರಿಸಲು ನಾವು ಸಿದ್ಧರಾಗಬೇಕು'

ಈ ವಾರದ ಆಚೀಚೆಯಲ್ಲೇ ಕೃಷ್ಣ ಸರ್ಕಾರ ಭಯೋತ್ಪಾದನೆಯ ನಿಗ್ರಹಕ್ಕಾಗಿ ವಿಶೇಷ ಪೋಲೀಸ್ ದಳರಚಿಸಿ, ವಿಶೇಷ ತರಬೇತಿಗಾಗಿ

- ಕೇಂದ್ರ ಸರ್ಕಾರ POTO ಸುಗ್ರೀವಾಜ್ಞೆಯನ್ನು ಜಾರಿಗೊಳಿಸಲು ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಹಿರಿಯ ಅಧಿಕಾರಿಗಳ ಪೂರ್ವಸಿದ್ಧತೆಯ ಸಭೆ ನಡೆಯಿತು.
- ಕೊಳಚಿ ಪ್ರದೇಶದ ನಿವಾಸಿಗಳೆಲ್ಲರ ಫೋಟೋ ಮತ್ತು ಬೆರಳಚ್ಚನ್ನು ಪೋಲಿಸರು ಸಂಗ್ರಹಿಸುವುದು
- ಈಗ "ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ' ವಿಧೇಯಕಕ್ಕೆ ರಾಷ್ಟ್ರಪತಿ ಅಂಕಿತ.

ಕರಾಳ 'ಪೋಟೋ' ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ ಸಹ ವಿರೋಧಿಸಿತು. ಒಟ್ಟಾರೆ ತೀವ್ರ ವಿರೋಧದಿಂದಾಗಿ ಅದನ್ನು ಅಂಗೀಕರಿಸಲಾಗಲಿಲ್ಲ. ಅದರ ಬಗ್ಗೆ ಚರ್ಚೆಯನ್ನು ಮುಂದೂಡಲಾಯಿತು. ಇದರಿಂದಾಗಿ ಕೇಂದ್ರ ಸರ್ಕಾರದ ಸುಗ್ರೀವಾಜ್ಞೆ ಹೊರಡಿಸಿದೆ. ಆದರೆ ಕೃಷ್ಣ ಸರ್ಕಾರ ಈ ಕರಾಳ ಮಸೂದೆಯ ಜಾರಿಗೆ ಪೂರ್ವಸಿದ್ಧತೆ ಆರಂಭಿಸಿದೆ. ಇದಕ್ಕೆ ಕಾನೂನು ಸಚಿವ ಡಿ.ಬಿ.ಚಂದ್ರೇಗೌಡರು 'ಕೇಂದ್ರದ ಮಸೂದೆ'ಯನ್ನು ಜಾರಿಗೊಳಿಸದೇ ರಾಜ್ಯಗಳಿಗೆ

ಕುಂದಾಪುರ : ಆಟೋ ಚಾಲಕರ ಸಂಘಕ್ಕೆ ಬೆಳ್ಳಿಹಬ್ಬದ ಸಂಭ್ರಮ

ಕುಂದಾಪುರದ ಆಟೋರಿಕ್ಷಾ ಚಾಲಕರಲ್ಲಿ ಕೆಲವರು 1976ರ ಆರಂಭದಲ್ಲಿ ರಿಕ್ಷಾ ಚಾಲಕರನ್ನು ಸಂಘಟಿಸುವ ಉದ್ದೇಶವನ್ನಿಟ್ಟುಕೊಂಡು ಚಟುವಟಿಕೆ ನಡೆಸಲು ಪ್ರಯತ್ನ ನಡೆಸಿದರು. ಕೆಂಬಾವುಟದ ಅಡಿಯಲ್ಲಿ ಹಾಗೂ ಸಮರಧೀರ ಸಂಘಟನೆಯಾದ ಸಿಐಟಿಯುವಿನ ನೇತೃತ್ವದ ಸಂಘದ ಸದಸ್ಯರಾಗಿ ಆಟೋರಿಕ್ಷಾ ಚಾಲಕರನ್ನು ಬಹಳ ಕಷ್ಟದಿಂದ ಸಂಘಟಿಸಿದ ದಿವಂಗತ ನಾಗಪ್ಪನವರ ಸಾಹಸವನ್ನು ಮೆಚ್ಚುವಂತದ್ದು. ಆಟೋರಿಕ್ಷಾ ಚಾಲಕರಾಗಿ, ಚಾಲಕರ ಮಧ್ಯೆ ಸಂಘಟನೆಯ ಮಹತ್ವವನ್ನು ಹೇಳಿ, ಅವರದೇ ಆದ ಸಮಸ್ಯೆಗಳನ್ನು ತಿಳಿಸುತ್ತಾ ಸಂಘಟನೆಯ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವೆಂಬ ಅರಿವನ್ನು ಉಂಟು ಮಾಡಿದ್ದರು.

ಚಾಲಕರ ರಕ್ಷಕ

ಆಟೋರಿಕ್ಷಾವನ್ನು ಪೇಟೆಯಿಂದ ಹಳ್ಳಿಗೆ ತೆಗೆದುಕೊಂಡು ಹೋಗಿ ಬಾಡಿಗೆ ಕೇಳಿದ್ದಕ್ಕೆ ರಿಕ್ಷಾ ಚಾಲಕರನ್ನು ಹೆದರಿಸುವ ಬೆದರಿಕೆ ಹಾಕುವ ಸ್ಥಿತಿ ಈ ಹಿಂದೆ ಇತ್ತು. ಪೊಲೀಸರಿಗೆ ವಿನಾ ಕಾರಣ ದೂರನ್ನು ಕೊಡುವ ಸುಳ್ಳು ಕೇಸನ್ನು ಹಾಕಿ ಬೆದರಿಸುವ, ದಬ್ಬಾಳಿಕೆ ನಡೆಸುವುದೂ ನಡೆದಿತ್ತು. ಅಪಘಾತಗಳು ಸಂಭವಿಸಿದಾಗ ಕೇಳುವವರು ಇಲ್ಲದೇ ಹಾಗೂ ಯಾವ ಪರಿಹಾರವಿಲ್ಲದೇ, ಕಷ್ಟ-ನಷ್ಟಕ್ಕೆ ಒಳಗಾಗುವ ಸ್ಥಿತಿ ಕೂಡಾ ಇತ್ತು. ಇವುಗಳನ್ನು ಎದುರಿಸಲು ಸಂಘಟನೆಯು ತೀರಾ ಅವಶ್ಯವೆಂದು ದಿವಂಗತ ನಾಗಪ್ಪನವರು ಮನಗಂಡಿದ್ದು ಸಂಘಟನೆಯ ಕೆಲಸ 1976ರಲ್ಲಿ ಆರಂಭಿಸಿ ಸಮಿತಿ ರಚಿಸುವ ಮೂಲಕ ಸಂಘದ ಸ್ಥಾಪನೆ 1977ರಲ್ಲಿ ನಡೆದಿತ್ತು.

ಕುಂದಾಪುರದ ಆಟೋರಿಕ್ಷಾ ಚಾಲಕರ ಸಂಘಕ್ಕೀಗ 25 ವರುಷಗಳು ತುಂಬಿದ ಸಂಭ್ರಮ. ಚಾಲಕರ, ನಾಗರೀಕರ ಮೆಚ್ಚುಗೆಗೆ ಪಾತ್ರವಾಗಿರುವ ಈ ಸಂಘದ ನೇತೃತ್ವದಲ್ಲಿ ನಡೆದ ಹೋರಾಟಗಳು ಅನೇಕಾನೇಕ. ಈ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಸಂಘ ಸಾಗಿದ-ಸಾಧನೆಗಳ ಕಿರುನೋಟ ಇಲ್ಲಿ

ಇತರೆ ಚಾಲಕರೂ ಸಂಘದತ್ತ

ಆರಂಭದಲ್ಲಿ ಸಂಘದ ಅಧ್ಯಕ್ಷರಾಗಿ ಎಚ್. ಕರುಣಾಕರರವರು ಆಗಿದ್ದು, ಈವಾಗಲೂ ಪುನಃ ಆಯ್ಕೆಯಾಗುತ್ತಾ ಮುಂದುವರಿಯುತ್ತಿರುವುದು ಗಮನಾರ್ಹವಾದ ವಿಚಾರವಾಗಿದೆ. ಸಿಐಟಿಯುವಿನ ಮುಖಂಡರ ಸಲಹೆ-ಸೂಚನೆಗಳನ್ನು ಪಡೆದು ಸಂಘವನ್ನು ಶಿಸ್ತಿನ ಸಂಘವಾಗಿ ಬೆಳೆಸುವುದರಲ್ಲಿ ಎಚ್.ಕರುಣಾಕರರವರ ಪಾತ್ರ ಶ್ಲಾಘನೀಯವಾಗಿದೆ. **ಶಿಸ್ತಿನ ಸಂಘವಾದುದರಿಂದ ಸಂಘದ ಸದಸ್ಯರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ 25 ವರ್ಷದ ಬೆಳ್ಳಿ ಹಬ್ಬದ ಈ ಸಂದರ್ಭದಲ್ಲಿ ಆಟೋರಿಕ್ಷಾ ಚಾಲಕರಲ್ಲದೇ ಇತರ ವಾಹನ ಚಾಲಕರು ಕೂಡಾ ಸಂಘದ ಸದಸ್ಯರಾಗುವುದಕ್ಕೆ ಮುಂದೆ ಬಂದರು.** ಪರಿಣಾಮವಾಗಿ ಸಂಘದ ಹೆಸರನ್ನು ಬದಲಾಯಿಸುವ ಪರಿಸ್ಥಿತಿ ಬಂದು ಹೊಸ ಸಂಘದ ರಚನೆಯಾಗಿ, ಸಂಬಂಧಪಟ್ಟ ಅಧಿಕಾರಿ ಯವರ ಮುಂದೆ ನೊಂದಾವಣೆಯಾಗಿರುತ್ತದೆ. "ಕುಂದಾಪುರ ತಾಲೂಕು ಆಟೋರಿಕ್ಷಾ ಮತ್ತು ವಾಹನ ಚಾಲಕರ ಸಂಘ" ಕುಂದಾಪುರ ಎಂಬುವುದಾಗಿ ಹೆಸರು ಬದಲಾಗಿ, ಸಿಐಟಿಯುವಿಗೆ ಸೇರ್ಪಡೆಯಾದ ಈ ಸಂಘವು ಇನ್ನೂ ಬೆಳೆದು ಸ್ವಂತ ಕಛೇರಿ ಹಾಗೂ "ಸಹಕಾರ ಸಂಘ" ಒಂದನ್ನು ಸ್ಥಾಪಿಸುವ ಉದ್ದೇಶವು ಕೂಡಾ ಹೊಂದಿದೆ.


ಅಪಘಾತ ಪರಿಹಾರ

ಆರಂಭದಲ್ಲೇ ಸಂಘದ ಸದಸ್ಯರಾಗಿದ್ದ ಹರಿದಾಸ ಎಂಬವರು ವಾಹನ ಅಪಘಾತದಿಂದಾಗಿ ಎರಡೂ ಕಾಲು ಕಳೆದುಕೊಂಡಾಗ ಅವರಿಗೆ ಹೆಚ್ಚಿನ ರಿಕ್ಷಾ ಚಾಲಕರು ಹಾಗೂ ಸಿಐಟಿಯು ಮುಖಂಡರು ರಕ್ತದಾನ ಮಾಡಿದ್ದಲ್ಲದೇ ಹಣ ಸಂಗ್ರಹಿಸಿ ಸದಸ್ಯರೊಬ್ಬರನ್ನು ಬದುಕಿಸಲು ಸುಮಾರು 30 ಸಾವಿರ ಖರ್ಚು ಕೂಡಾ ಆಗಿದ್ದು ಉಂಟು. ಆರಂಭದಲ್ಲಿ "ಯಕ್ಷಗಾನ ಪ್ರದರ್ಶನ" ದಿಂದಾಗಿ ಹಣ ಸಂಗ್ರಹಿಸಿ ಅನಂತರ "ಲಕ್ಕಿ ಡಿಪ್" ಮೂಲಕ ಹಣ ಸಂಗ್ರಹಿಸಿ ಅಪಘಾತ ಪರಿಹಾರ ಕೊಡುತ್ತಾ ಬರಲಾಗಿದೆ. ಅಪಘಾತವಾದಲ್ಲಿ ಸದಸ್ಯರಿಗೆ ಪರಿಹಾರದ ಮೊತ್ತ "ನಷ್ಟದ ಮೂರನೆಯ ಒಂದಂಶ" ಆಗಿರುತ್ತದೆ. ಅಪಘಾತಕ್ಕೆ ಒಳಗಾದವರೆಲ್ಲರೂ ಈ ಪರಿಹಾರ ತೆಗೆದುಕೊಂಡಿರುತ್ತಾರೆ. ಈ ರೀತಿ ಸಂಘದ ಮೇಲೆ ಚಾಲಕರಲ್ಲಿ ವಿಶ್ವಾಸ ಬೆಳೆಯುತ್ತಾ ಬಂದಿರುತ್ತದೆ. ಸಂಘದ ತೀರ್ಮಾನಗಳನ್ನು ಜ್ಯಾರಿ ಮಾಡುವಲ್ಲಿ ಹಾಗೂ ಶಿಸ್ತಿಗೆ ಒಳಗಾಗುವುದರಲ್ಲಿ ಸದಸ್ಯರು ಇತ್ತೀಚೆಗೆ ಹೆಚ್ಚಿನ ಆದ್ಯತೆ ನೀಡುತ್ತಾ ಬಂದಿರುತ್ತಾರೆ. ಅಪಘಾತ ಪರಿಹಾರ ಪಡೆಯುವಲ್ಲಿ ಕೆಲವು ಷರತ್ತುಗಳು ಇದ್ದರೂ ಕೂಡಾ ಅದರಂತೆ ಸದಸ್ಯರು ನಡೆದುಕೊಳ್ಳುತ್ತಿದ್ದರು.

ಅಪಘಾತವಲ್ಲದೇ ಇತರ ನಷ್ಟ-ಕಷ್ಟಕ್ಕೆ ಆಟೋರಿಕ್ಷಾ ಚಾಲಕರು ಒಳಗಾದಲ್ಲಿ ವಿಶೇಷ ಸಂದರ್ಭದಲ್ಲಿ ವಿಶೇಷ ಸಭೆ ಕರೆದು ಎಲ್ಲರ ಒಪ್ಪಿಗೆ ಪಡೆದು ಮಾನವೀಯವಾಗಿ ಆರ್ಥಿಕ ನೆರವನ್ನು ಕೂಡಾ ಕೊಟ್ಟಿದ್ದು ಉಂಟು. ಇಂತಹ ಚಟುವಟಿಕೆಗಳಿಂದಾಗಿ ಸಂಘವು ಬೆಳೆಯುವುದಕ್ಕೆ ಕಾರಣವಾಯಿತು. ಸಾರ್ವಜನಿಕರು ಕೂಡಾ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಸ್ಥಿತಿ ಬಂತು.

ಸಂಘದ ಸದಸ್ಯರಾದವರ ಹೆಸರಲ್ಲಿ ಸಂಘದ ವತಿಯಿಂದ ರೂಪಾಯಿ ಐವತ್ತು ಸಾವಿರದ "ಸಾಮಾನ್ಯ ವಿಮೆ" ಮಾಡಲಾಗಿದೆ. ವೈದ್ಯಕೀಯ ವೆಚ್ಚ ಹಾಗೂ ಅಪಘಾತದಿಂದ ಮರಣ ಹೊಂದಿದವರ ಕುಟುಂಬಕ್ಕೆ 50 ಸಾವಿರ ಪರಿಹಾರ ಸಿಗುವ ವ್ಯವಸ್ಥೆ ಕೂಡಾ ಮಾಡಲಾಗಿದೆ. ವೈದ್ಯಕೀಯ ವೆಚ್ಚದ ಮೊತ್ತ ಸದಸ್ಯರಾದವರಿಗೆ ಕೆಲವರಿಗೆ ಈಗಾಗಲೇ ಸಿಕ್ಕಿರುತ್ತದೆ.

"ಅಪಘಾತ ಪರಿಹಾರ" ಸರಕಾರದಿಂದ ಸಿಗುವುದಕ್ಕಾಗಿ 46 ಮಂದಿ ಅರ್ಜಿ ಸಲ್ಲಿಸಿರುತ್ತಾರೆ. ಉಳಿದವರು ಅಗತ್ಯವಾದ ದಾಖಲೆ ಪತ್ರಗಳನ್ನು ಆರ್‌ಟಿಓ ಕಛೇರಿಗೆ ಕೊಡಬೇಕಾಗಿದೆ. ಈಗಾಗಲೇ ಅರ್ಜಿ ಕೊಟ್ಟವರಿಗೆ "ದೃಢೀಕರಣ ಪತ್ರ" ಸಿಕ್ಕಿರುತ್ತದೆ. ಅಪಘಾತದಿಂದ ಮರಣ ಗೊಂಡಲ್ಲಿ ಮಾತ್ರ ಅವರ ಕುಟುಂಬದವರಿಗೆ ಸರಕಾರದಿಂದ ಸಿಗುವ 50 ಸಾವಿರ ಪರಿಹಾರಕ್ಕಾಗಿ ಮೊದಲೇ ಸಂಬಂಧಪಟ್ಟ ಅರ್ಜಿಗಳ ಜತೆಯಲ್ಲಿ ಕೆಲವು ದಾಖಲೆಪತ್ರಗಳನ್ನು ಕೊಟ್ಟು "ದೃಢೀಕರಣ ಪತ್ರ" ಪಡೆದುಕೊಳ್ಳಬೇಕಾಗಿದೆ. ಈ ಪ್ರಯತ್ನ ಕೂಡಾ ನಡೆಸಲಾಗುತ್ತಿದೆ.



ಸಾಧನೆಗಳ ಸರಣಿ - ಜನತೆಯ ಕಣ್ಮಣಿ

ಸವಿನೆನಪಿನಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು :

ಸಂಘದ 25ನೇ ವಾರ್ಷಿಕೋತ್ಸವದ ಈ ಸಂದರ್ಭದ ಸವಿ ನೆನಪಿಗಾಗಿ ಬೆಳ್ಳಿ ಹಬ್ಬದ ಆಚರಣೆ ನಡೆಸಲಾಗುತ್ತಿದೆ. ಸಂಘವು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಂಘದ ಸದಸ್ಯರಿಗಾಗಿ ಕ್ರೀಡಾಕೂಟ, ಕಬಡ್ಡಿ, ಕ್ರಿಕೇಟ್, ಹಗ್ಗ ಜಗ್ಗಾಟ ಇತ್ಯಾದಿ ಸ್ಪರ್ಧೆ ಏರ್ಪಡಿಸಿದ್ದು ಡಿಸೆಂಬರ್ 2 ರಂದು ಉದ್ಘಾಟನೆಗೊಂಡು ಸತತ 3 ವಾರಗಳ ಕಾಲ ನಡೆಯಲಿದೆ. ಜನವರಿ 4 ರಂದು ಕುಂದಾಪುರದಲ್ಲಿ ಆಟೋರಿಕ್ಷಾ ಮತ್ತು ವಾಹನಗಳ ಬೃಹತ್ ಜಾಥಾ ಕಾರ್ಯಕ್ರಮ ಇದ್ದು. ಕುಂದಾಪುರದಿಂದ ಕೋಟೇಶ್ವರದವರೆಗೆ ವಾಹನ ಜಾಥಾವು ನಡೆಯಲಿದೆ.

- ಕೆ.ಶಂಕರ್

............ದಮನಕ್ಕೆ ಸಜ್ಜಾಗುತ್ತಿರುವ ಕೃಷ್ಣ

ಪುಟ 3 ರಿಂದ

ಸಂಸತ್ತಿನಲ್ಲಿ ಮತ್ತು ಪಕ್ಷವಾಗಿ ವಿರೋಧ ಹೇಳಬಹುದು, ಸರ್ಕಾರವಾಗಿ ಜಾರಿಗೊಳಿಸಲೇಬೇಕೆಂಬ ವಿವರಣೆ ಅವರಿಂದ. ಇದು ನಿಜವೇ ಅಲ್ಲ. ಕಾನೂನು ಮತ್ತು ಸುವ್ಯವಸ್ಥೆ ರಾಜ್ಯಗಳ ಪಟ್ಟಿಯಲ್ಲಿದೆ. ಇದು ಭಾರತದ ಸಂವಿಧಾನದತ್ತವಾದ ಹಕ್ಕು ಅಂದರೆ ಇಂತಹ ಮಸೂದೆಗಳನ್ನು ಜಾರಿಗೊಳಿಸುವ ಅಥವಾ ಬಿಡುವ ಹಕ್ಕು ರಾಜ್ಯ ಸರ್ಕಾರಕ್ಕಿದೆ. ಅದರಂತೆ ಪೋಟೋವನ್ನು ಸಿಪಿಐ(ಎಂ) ವಿರೋಧಿಸಿದ್ದು ಮಾತ್ರವಲ್ಲ ಇಡೀ 'ಪೋಟೋ'ವನ್ನೇ ಜಾರಿಗೊಳಿಸುವುದಿಲ್ಲವೆಂದು ಪ.ಬಂಗಾಳದ ಎಡರಂಗ ಸರ್ಕಾರ ಕೇಂದ್ರಕ್ಕೆ ಸ್ಪಷ್ಟವಾಗಿ ತಿಳಿಸಿದೆ. ವಾಸ್ತವ ಹೀಗಿರುವಾಗ 'ಪೋಟೋ' ಜಾರಿಗೆ ಉತ್ಸುಕ ವಾಗಿರುವ ಕೃಷ್ಣರ ಸರ್ಕಾರದ ಉದ್ದೇಶ ದುರುದ್ದೇಶದ್ದು ಎಂದು ಹೇಳದೇ ವಿಧಿಯಿಲ್ಲ, ಮೇಲಾಗಿ ನಾಗರೀಕರ ಪ್ರಜಾಸತಾತ್ಮಕ ಹಕ್ಕುಗಳನ್ನು ದಮನಿಸುವ ಕೈಗಾರಿಕಾ- ಸಂಶೋಧನಾ ಕೇಂದ್ರ ಐತಿಹಾಸಿಕ ಮಹತ್ವದ ಕೆಲ ಸ್ಮಾರಕ ಇತ್ಯಾದಿಯ ರಕ್ಷಣೆಗೆ ಸರ್ಕಾರ ಕ್ರಮ ಕೈಗೊಳ್ಳಲು ಬಹುತೇಕ ಯಾರ ಆಕ್ಷೇಪಣೆ ಇರಲಾರದು. ಆದರೆ ಇದನ್ನೇ ನೆಪಮಾಡಿ ಇಸ್ರೇಲ್ ಹಾಗೂ ಬ್ರಿಟನನಂತಹ ಕುಖ್ಯಾತ ಪೋಲೀಸರಿಂದ ತರಬೇತಿ ನೀಡುವುದು ಅನೇಕ ಅಪಾಯಗಳಿಗೆ ಆಹ್ವಾನ ನೀಡಿದಂತೆ. ಇಸ್ರೇಲ್ ಒಂದು ಜನಾಂಗ ದ್ವೇಷದ, ಭಯೋತ್ಪಾದನೆಯ ರಾಷ್ಟ್ರ. ಮುಖ್ಯವಾಗಿ ಪ್ಯಾಲೆಸ್ತೇನಿಯನ್ ಜನತೆಯ ತಾಯ್ನಾಡನ್ನು ಕಬಳಿಸಿದ್ದಲ್ಲದೇ, ಅಲ್ಲಿಯ ಜನತೆಯ ಮೇಲೆ ಬರ್ಬರ ದಾಳಿಯನ್ನು ನಡೆಸುತ್ತಿದೆ. ಎಲ್ಲಾ ಮಾನವಹಕ್ಕುಗಳನ್ನು ಉಲ್ಲಂಘಿಸಿ ಭಾರತವೂ ಒಳಗೊಂಡ ಹಲವು ದಶಕಗಳ ಕಾಲ ಜಗತ್ತಿನ ಬಹುತೇಕ ರಾಷ್ಟ್ರಗಳಿಂದ ರಾಜತಾಂತ್ರಿಕ ಸಂಬಂಧಗಳು ಇಲ್ಲದ ದೇಶ. ಇಂತಹ ದೇಶದೊಂದಿಗೆ ಭಯೋತ್ಪಾದಕರಿಗೆ ನೆಲೆ ನೀಡುತ್ತಿರುವ ಬ್ರಿಟನ್, ಅಮೆರಿಕಾದಂತಹ ಸಾಮ್ರಾಜ್ಯಶಾಹಿಗಳೊಂದಿಗೆ ಕಾಂಗ್ರೆಸ್ ನಿಲುವನ್ನೇ ಕೃಷ್ಣ ತಿರಸ್ಕರಿಸುತ್ತಿದ್ದಾರೆ. ಅಂದರೆ ನಿಜಕ್ಕೂ ಕೃಷ್ಣರ ಮನಸ್ಸಿನಲ್ಲಿ ಭಯೋತ್ಪಾದನೆ ನಿಗ್ರಹಕ್ಕಿಂತ ಬೇರೇನೋ ಯೋಚನೆ ಇದೆ.

ಇಂತಹವುಗಳ ಭಾಗವಾಗಿ ಇಡೀ ಕೊಳಚೆ ಪ್ರದೇಶದ ಜನತೆಯನ್ನೇ ಕ್ರಿಮಿನಲ್‌ಗಳೆಂದು ಹಣೆಪಟ್ಟಿ ಕಟ್ಟಿ ಅವರನ್ನು ನಡೆಸಿಕೊಳ್ಳುತ್ತಿರುವುದು ಕ್ರಿಮಿನಲ್‌ಗಳು ಹೆಚ್ಚಾಗಿ ಕೊಳಗೇರಿಯಲ್ಲೇ ಇದ್ದಾರೆ ಎಂಬ ಪೋಲೀಸ್ ಅಧಿಕಾರಿಗಳ ಹೇಳಿಕೆ ಅತ್ಯಂತ ಹಾಸ್ಯಾಸ್ಪದ. ಈಗಾಗಲೇ ಜಾಗತೀಕರಣ-ಉದಾರೀಕರಣದ ಈ ಪ್ರಕ್ರಿಯೆ ಆರಂಭದೊಟ್ಟಿಗೆ ಅತ್ಯಂತ ಆಧುನಿಕ ಸಂಪರ್ಕ ಹಾಗೂ ಅಸ್ತ್ರಗಳುಳ್ಳ ಭಾರಿ ದೊಡ್ಡ ಅಂತರ್‍ರಾಷ್ಟ್ರೀಯ-ರಾಷ್ಟ್ರೀಯ ಕ್ರೂರ 'ಗೂಂಡಾ ಮಾಫಿಯಾ'ಗಳು ವ್ಯವಹರಿಸುತ್ತಿರುವುದು ತಿಳಿಯದ ವಿಷಯಗಳೇನಲ್ಲ. ಈ ಸ್ಲಂಗಳಲ್ಲಿ ವಾಸಿಸುವವರು ದುಡಿಯುವ ವರ್ಗದ ಜನರೇ ಅಧಿಕ. ಬೆಳೆಯುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ನಿರ್ದಯ ಶೋಷಣೆಯ ಸೃಷ್ಟಿ ಈ ಅಮಾನವೀಯ ಸ್ಥಿತಿಯಿರುವ ಪ್ರಾಣಿಗಳಿಗಿಂತಲೂ ಕಡೆಯಾಗಿ ವಾಸಿಸುವ ಈ ಸ್ಲಂಗಳು. ಆದರೆ ಸ್ಲಂ ತೋರಿಸುತ್ತದೆ. ಇಂತಹ ಕಾನೂನು ಇದ್ದದ್ದು 18ನೇ ಶತಮಾನದಲ್ಲಿ ಬ್ರಿಟಿಷರ ಆಡಳಿತದಲ್ಲಿ. ನಂತರ ಅದನ್ನು ತೀವ್ರ ಪ್ರತಿಭಟನೆಯ ನಡುವೆ ರದ್ದುಪಡಿಸಲಾಯಿತು ಎಂಬ ವಿಷಯ ಸಾಂಗ್ಲಿಯಾನಾರಿಗೆ ತಿಳಿದಿಲ್ಲವೇ? ಅಥವಾ ವಿಶ್ವಬಂಡವಾಳಗಾರರನ್ನು, ಬ.ಕ.ಗಳನ್ನು ಮೆಚ್ಚಿಸಲು! ನೋಡಿ ಎಂತಹ ಪೂರ್ವ ಸಿದ್ಧತೆ ಮಾಡಿದ್ದೇವೆ ನೋಡಿ, ಎಂದು ದೇಶದ ಜನತೆಯನ್ನೇ ದಮನಗೊಳಿಸುವ, ಅವಮಾನಪಡಿಸುವ ಗುಲಾಮತನದ ಉದ್ದೇಶವೇ? ತಾವೊಂದು ಸಾರ್ವಭೌಮ ರಾಷ್ಟ್ರದ ಜನತೆಯಿಂದ ಚುನಾಯಿತರಾದ ಸರ್ಕಾರ ಎಂಬ ಪರಿವೆ ಇದೆಯೇ?

ಇವೆಲ್ಲವುಗಳನ್ನು ಗಮನಿಸಿದರೆ ಈಗಾಗಲೇ ವಿಪ್ರೊ, ಇನ್‌ಫೋಸಿಸ್ ಧಣಿಗಳನ್ನು ತಲೆಗೇರಿಸಿಕೊಂಡ ಕೃಷ್ಣರ ಸರ್ಕಾರ ಜಾಗತಿಕ ಬಂಡವಾಳಗಾರನ್ನು ಮೆಚ್ಚಿಸಲು ಅವರು ವಿಧಿಸಿದ ಶರತ್ತುಗಳಿಂದ, ಒಪ್ಪಿಕೊಂಡ ಆದೇಶಗಳಿಂದ ಉದಾರೀಕರಣ, ಜಾಗತೀಕರಣ ತರುವ ಭೀಕರ ಸಂಕಟಗಳ ವಿರುದ್ಧ ಜನತೆ ಪ್ರತಿಭಟಿಸದಂತೆ, ಹುಟ್ಟಿದ ಜನ ಪ್ರತಿಭಟನೆಗಳನ್ನು ದಮನಿಸಲು

ಡಿಸೆಂಬರ್ 13 ರ ಧಾಳಿ ಸರಕಾರಕ್ಕೀಗ ಅಗ್ನಿಪರೀಕ್ಷೆ

ಹರ್ಕಿಶನ್ ಸಿಂಗ್ ಸುರ್ಜಿತ್

ಈ ಯೋಜನೆ ವಿಫಲವಾಗಿ ಇಡೀ ದೇಶ ನಿಟ್ಟುಸಿರು ಬಿಡುವಂತಾದರೂ ಹಲವು ಬಗೆಹರಿಯದ ಪ್ರಶ್ನೆಗಳನ್ನು ಅವು ಉಳಿಸಿಹೋಗಿವೆ

ಭಾರತೀಯ ಪ್ರಜಾಪ್ರಭುತ್ವದ ಅತ್ಯಂತ ಮಹತ್ವಪೂರ್ಣ ಪ್ರತೀಕವಾದ ಸಂಸತ್ ಭವನದ ಮೇಲೆ ಡಿಸೆಂಬರ್ 13 ರ ಧಾಳಿ ಇಡೀ ದೇಶವನ್ನು ಮತ್ತು ಜಗತ್ತನ್ನು ತಲ್ಲಣಗೊಳಿಸಿದೆ. ಸ್ವತಂತ್ರ ಭಾರತದಲ್ಲಿ ಈ ಕಟ್ಟಡದ ಮೇಲೆ ಇಂತಹ ಧಾಳಿ ನಡೆದಿರುವುದು ಇದೇ ಮೊದಲು. ಅಕ್ಟೋಬರ್ 1 ರಂದು ಜಮ್ಮು-ಕಾಶ್ಮೀರ ವಿಧಾನಸಭೆಯ ಮೇಲೆ ಇನ್ನೊಂದು ಇಂತಹ ಪ್ರಾಣಾಂತಿಕ ಧಾಳಿ ನಡೆದು ಬಹಳ ದಿನಗಳೇನೂ ಆಗಿಲ್ಲ.


ಈ ಕಟ್ಟಡ ಪ್ರವೇಶಿಸಿದ ಎಲ್ಲಾ ಐದು ಭಯೋತ್ಪಾದಕರು ಕೊಲ್ಲಲ್ಪಟ್ಟಿದ್ದಾರೆ ಎಂದು ಹೇಳಲಾಗಿದೆ. ಒಬ್ಬ ತೋಟಗಾರನಲ್ಲದೆ ಒಬ್ಬ ಪೋಲೀಸ್ ಮಹಿಳೆಯೂ ಸೇರಿದಂತೆ ಆರು ಜನ ಭದ್ರತಾ ಸಿಬ್ಬಂದಿ ತಮ್ಮ ಕರ್ತವ್ಯ ನೆರವೇರಿಸುವಾಗ ಕೊಲ್ಲಲ್ಪಟ್ಟಿದ್ದಾರೆ. ನಿಜವಾಗಿ ಈ ಭದ್ರತಾ ಸಿಬ್ಬಂದಿಯೇ ಪರಿಸ್ಥಿತಿಯನ್ನು ಸಂಭಾಳಿಸಿದ್ದು.

ಈ ಯೋಜನೆ ವಿಫಲವಾಗಿ ಇಡೀ ದೇಶ ನಿಟ್ಟುಸಿರು ಬಿಡುವಂತಾದರೂ ಹಲವು ಬಗೆಹರಿಯದ ಪ್ರಶ್ನೆಗಳನ್ನು ಅವು ಉಳಿಸಿಹೋಗಿವೆ.

ಭದ್ರತಾಲೋಪ

ಇದು ಒಂದು ವಿಪರೀತ ಭದ್ರತೆಯ ವಲಯ. ಆದರೂ ಸಶಸ್ತ್ರ ಭಯೋತ್ಪಾದಕರು ಎಷ್ಟೊಂದು ಸುಲಭವಾಗಿ ಅದನ್ನು ಪ್ರವೇಶಿಸಿ ಸಂಸತ್ ಭವನದ ಮುಖ್ಯ ದ್ವಾರದವರೆಗೂ ತಲುಪಲು ಹೇಗೆ ಸಾಧ್ಯವಾಯಿತು? ಇವರ ಧಾಳಿಯಲ್ಲಿ ಏಕೆ-47 ರೈಫಲ್‌ಗಳು, ಕೈ ಗ್ರೆನೇಡ್‌ಗಳು ಇದ್ದವು. ಒಬ್ಬ ಮಾನವ ಬಾಂಬೇ ಆಗಿದ್ದು ಕೊನೆಗೆ ಸ್ಫೋಟಗೊಂಡ. ಅಲ್ಲದೆ ಅವರು ತಂದಿದ್ದ ಕಾರು ಇಡೀ ಕಟ್ಟಡವನ್ನು ಧ್ವಂಸ ಮಾಡುವಷ್ಟು ಆರ್‌ಡಿಎಕ್ಸ್ ಸ್ಫೋಟಕಗಳಿಂದ ತುಂಬಿತ್ತು. ನಮ್ಮ ಭದ್ರತಾ ಸಿಬ್ಬಂದಿ ತಮ್ಮ ಪ್ರಾಣವನ್ನು ಲೆಕ್ಕಿಸದೆ ಅವನ್ನು ನಿಷ್ಕ್ರಿಯಗೊಳಿಸಿ ಸಂಸತ್ ಭವನವನ್ನು ಉಳಿಸಿದರು.

ಭಯೋತ್ಪಾದಕರು ಸಂಸತ್ ಭವನದ ಮೇಲೆಯೇ ಧಾಳಿ ಮಾಡಬಹುದು ಎಂಬ ಬಗ್ಗೆ ಸಾಕಷ್ಟು ಮಾಹಿತಿ ಸರಕಾರದ ಬಳಿಯಿತ್ತು. ಪ್ರಧಾನ ಮಂತ್ರಿಗಳು ಈ ಬಗ್ಗೆ ಮಾತನಾಡಿದ್ದರು. ಕೇಂದ್ರ ಗೃಹಮಂತ್ರಿಗಳು ಈ ಬಗ್ಗೆ ಒಂದೆರೆಡು ಹೇಳಿಕೆ ನೀಡಿದ್ದರು, ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಮತ್ತು ಗೃಹಮಂತ್ರಿ ಛಗನ್ ಭುಜಬಲ್ ಈ ಬಗ್ಗೆ




ಮಾಹಿತಿ ನೀಡಿದ್ದರು. ಆದರೂ ಈ ಧಾಳಿ ನಡೆದಿದೆ. ಅದುವರೆಗೆ ಭದ್ರತಾ ಸಿಬ್ಬಂದಿಯಿಲ್ಲದೆ ಅಡ್ಡಾಡುತ್ತಿದ್ದ ರಕ್ಷಣಾ ಮಂತ್ರಿಗಳು ಅದೇ ದಿನ ಝಡ್ + ಭದ್ರತೆ ಕೇಳಿದ್ದರು ಎಂದೂ ವರದಿಯಾಗಿದೆ.

ಆದ್ದರಿಂದ ಇಲ್ಲಿ ಏಳುವ ಪ್ರಶ್ನೆ - ಕೇಂದ್ರ ಗೃಹ ಇಲಾಖೆ ಏನು ಮಾಡುತ್ತಿತ್ತು? ಕೇಂದ್ರ ಸರಕಾರ ಈ ಪ್ರಶ್ನೆಯಿಂದ ತಪ್ಪಿಸಿಕೊಳ್ಳುವಂತಿಲ್ಲ.

ಈ ಹಿಂದೆಯೂ ಈ ಸರಕಾರದ ಆಡಳಿತದಲ್ಲಿ ಭದ್ರತಾ ಲೋಪಗಳು ಸಂಭವಿಸಿವೆ. ಕೆಂಪು ಕೋಟೆಯೊಳಗೆ ಭಯೋತ್ಪಾದಕರು ನುಗ್ಗಿದ್ದರು. ಕಂದಹಾರ್‌ಗೆ ವಿಮಾನ ಅಪಹರಣ ನಡೆಯಿತು. ಮೊತ್ತ ಮೊದಲ ಬಾರಿಗೆ ಹಾಡುಹಗಲೇ ಸಂಸತ್ ಸದಸ್ಯರ ಕೊಲೆಯಾಯಿತು. ಕೊಲೆಯಾದ ಜಾಗ ಸಂಸತ್ ಭವನದಿಂದ ಬಹಳ ದೂರವೇನೂ ಇರಲಿಲ್ಲ. ಭದ್ರತಾ ಪರಿಸ್ಥಿತಿ ಹೇಗಿದೆ ಎಂಬುದನ್ನು

ಅಡ್ವಾಣಿಯವರು ಯಾವುದೇ ಗುಪ್ತಚರ ವಿಫಲತೆ ಅಥವಾ ಭದ್ರತಾ ಲೋಪ ಇದೆ ಎಂದು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಪೆಂಟಗಾನ್ ಮೇಲೂ ಭಯೋತ್ಪಾದಕರು ಧಾಳಿ ನಡೆಸಲಿಲ್ಲವೇ ಎಂದು ಅವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಆತ್ಮಹತ್ಯಾ ದಳದ ಯೋಜನೆಯನ್ನು ವಿಫಲಗೊಳಿಸಲು ಸಾಧ್ಯವೇ ಇಲ್ಲವೆಂದು ಅವರ ತರ್ಕ. ಇದೊಂದು ವಂಚಕ ತರ್ಕವಷ್ಟೆ. ಗೃಹಮಂತ್ರಿಗಳಿಗೆ ಆಡಳಿತ ಪೀಠಕ್ಕೇ ರಕ್ಷಣೆ ನೀಡಲು ಸಾಧ್ಯವಿಲ್ಲವಾದರೆ ಅದಕ್ಕಿಂತ ಶೋಚನೀಯ ಸಂಗತಿ ಬೇರೊಂದಿಲ್ಲ. ಇಂತಹ ಸರಕಾರದಿಂದ ಸಾಮಾನ್ಯ ನಾಗರಿಕರ ಸುಭದ್ರತೆಯ ಬಗ್ಗೆ ಏನು ತಾನೇ ನಿರೀಕ್ಷಿಸಬಹುದು?

ಎರಡು ದಿನಗಳ ವರೆಗೆ ಸರಕಾರಕ್ಕೆ ಕೂಡಾ ಭಯೋತ್ಪಾದಕರು ಯಾವ ದಾರಿಯಿಂದ ಆ ಕಟ್ಟಡ ಪ್ರವೇಶಿಸಿದರು ಎಂದು ತಿಳಿದಿರಲಿಲ್ಲ. ವಿಜಯ ಚೌಕದ ಕಡೆಯಿಂದ ಬಂದರು ಎಂದೇ ಸರಕಾರದ ವಕ್ತಾರರು ಹೇಳುತ್ತಿದ್ದರು. ಆದರೆ ಅವರು ಸಂಸತ್ ಮಾರ್ಗದ ಕಡೆಯಿಂದ ಬಂದರು ಎಂದು ಟಿ.ವಿ. ದೃಶ್ಯಗಳು ತೋರಿಸುತ್ತಿದ್ದವು. ಸರಕಾರದ ನಿರ್ವಹಣೆಯ ರೀತಿಯನ್ನು ಇದು ತೋರಿಸುತ್ತದೆ.



ಭಯೋತ್ಪಾದನೆಯ ಅಂತ್ಯವೇ?

ಬೇಜವಾಬ್ದಾರಿ ಹೇಳಿಕೆಗಳು

ಈ ಘಟನೆ ಮುಗಿದ ಕೂಡಲೇ ಬಿಜೆಪಿ ಮುಖಂಡರು ಭಾವೋದ್ರೇಕದ ಹೇಳಿಕೆಗಳನ್ನು ಕೊಡುತ್ತಿದ್ದಾರೆ - ಬಹುಶಃ ತಮ್ಮ ಸರಕಾರದ ಅಸಾಮರ್ಥ್ಯವನ್ನು ಮುಚ್ಚಿಕೊಳ್ಳಲು. ಮುಯ್ಯಿಗೆ ಮುಯ್ಯಿ ಎಂಬ ಭಾಷೆ ಬಳಸುತ್ತಿದ್ದಾರೆ. ಭಯೋತ್ಪಾದಕರ ವಿರುದ್ಧ ಯುದ್ಧ ನಿರ್ಣಾಯಕ ಹಂತಕ್ಕೆ ಬಂದಿದೆ ಎಂದು ಪ್ರಧಾನಿಗಳು ದೊಡ್ಡದಾಗಿ ಹೇಳಿದರೆ ಗೃಹಮಂತ್ರಿಗಳು ಭಯೋತ್ಪಾದಕರ, ಅವರ ಬೆಂಬಲಿಗರ 'ನಿರ್ಮೂಲನ' ದ ಮಾತಾಡಿದ್ದಾರೆ. ಆದರೆ ಈ ವಿಚಾರವನ್ನು ವಿವರಿಸಿ ಎಂದು ಮಾಧ್ಯಮದವರು ಕೇಳಿದಾಗ

ಪುಟ 10 ಕ್ಕೆ

ಭಯೋತ್ಪಾದನೆಯ ಅಪಾಯವನ್ನು ಬೇಧಿಸುವುದು ಹೇಗೆ?

'ಕಾಲಬಂದಿದೆ ಈಗ ಸಮಸ್ಯೆ ಪರಿಹರಿಸಲು, ಅದುವೆ ಪಾಕಿಸ್ತಾನವನ್ನು ಎಂದಿಗೂ, ಎಂದೆಂದಿಗೂ ಮುಗಿಸಲು....' ಎಂಬ ಮಾತು ಒಂದು ಪತ್ರಿಕೆಯ ಸಂಪಾದಕೀಯದಲ್ಲಿ ಮೂಡಿಬಂದಿದೆ. ಅದು ಮುಂದುವರಿದು ಮಂಡಿಸುವ ವಾದವೆಂದರೆ ಪಾಕಿಸ್ತಾನವನ್ನೇ ಇಲ್ಲವಾಗಿಸುವ ಯುದ್ಧದ ವಿನಹ, ಭಯೋತ್ಪಾದನೆಯನ್ನು ಅದರ ಅಪಾಯವನ್ನು ಪರಿಹರಿಸಲು ಸಾಧ್ಯವಿಲ್ಲ. ಮಾತ್ರವಲ್ಲ ಯುದ್ಧ ವಿರೋಧಿ, ಶಾಂತಿಯ ಮಾತುಗಳನ್ನಾಡುವವರನ್ನು ಹಾಗೂ ಅವರ ಸೊಲ್ಲನ್ನಡಗಿಸಲು ಸರ್ಕಾರ ಮುಂದಾಗಬೇಕಂತೆ.

ಇದೇ ಮಾತುಗಳನ್ನು ನಮ್ಮರಾಜ್ಯದ ಅನೇಕ ಬೀದಿಗಳಲ್ಲಿ ಹಣೆಗೆ ಕೇಸರಿ ಪಟ್ಟಿ ಕಟ್ಟಿ, ಸೈಕಲ್ ಹಾಗೂ ಮೋಟಾರ್ ಬೈಕ್ ರ್‍ಯಾಲಿ ನಡೆಸುತ್ತಿರುವ ವಿದ್ಯಾರ್ಥಿ-ಯುವ ಪುಂಡರು ಆಡುತ್ತಿದ್ದಾರೆ. ಅನೇಕ ಕಾಲೇಜುಗಳಲ್ಲಿ, ಹಾಸ್ಟೆಲ್‌ಗಳಲ್ಲಿ ಸೆಪ್ಟೆಂಬರ್ 11 ರ ನಂತರ ಹಾಗೂ ಡಿಸೆಂಬರ್ 13 ರ ನಂತರವಂತೂ ಅತ್ಯಂತ ತೀವ್ರತರವಾಗಿ ಈ ಮಾತುಗಳು 'ಭಯೋತ್ಪಾದನೆ' ಕುರಿತು ಕಮ್ಮಟ, ವಿಚಾರಗೋಷ್ಠಿಗಳಲ್ಲಿ ಪ್ರಜ್ಞಾಪೂರ್ವಕ ವಾಗಿ ವ್ಯಕ್ತಪಡಿಸಲಾಗುತ್ತಿದೆ. ಈ ಕಸರತ್ತುಗಳ ಮೂಲಕ ಭಾವೋನ್ಮಾದದ ಅಲೆಯಲ್ಲಿ ಜನತೆಯನ್ನು ತೇಲಿಸಿ, ಆರ್‌ಎಸ್‌ಎಸ್ ಪತ್ರಿಕೆ 'ಆರ್ಗನೈಸರ್'ನ ಈ ಮೇಲಿನ ಸಂಪಾದಕೀಯದ **'ಯುದ್ಧಕ್ಕೆ ಸೈ' ಎನ್ನಿಸುವ ಯತ್ನದಲ್ಲಿ ಸಂಘ ಪರಿವಾರದ ಅಂಗ ಸಂಸ್ಥೆಗಳು ಹಾಗೂ ಅದರ ರಾಜಕೀಯ ಅವತಾರವಾದ ಬಿಜೆಪಿಯ ಮುಖಂಡರು ತೊಡಗಿದ್ದಾರೆ.** ಈ ಮಾತುಗಳಮೂಲಕ ಪ್ರತಿಧ್ವನಿತವಾಗುತ್ತಿರುವ ಮೂಲ ಅಂಶವೆಂದರೆ, ಭಯೋತ್ಪಾದನೆಯನ್ನು ಇಲ್ಲವಾಗಿಸಲು, ಪಾಕಿಸ್ತಾನವನ್ನು ಹಾಗೂ ಅಲ್ಲಿನ ಅಮಾಯಕ ಜನತೆಯನ್ನು ಇಲ್ಲದಾಗಿಸಬೇಕೆಂಬುದಾಗಿದೆ. ಆ ಮೂಲಕ ದೇಶದಲ್ಲಿನ ಅಲ್ಪಸಂಖ್ಯಾತರ ವಿರುದ್ಧ ಬಡಿದೆಬ್ಬಿಸುವ ಯತ್ನ ನಡೆದಿದೆ.

ಸಂಸತ್ತಿನ ಮೇಲೆ ಡಿಸೆಂಬರ್ 13 ರ ಭಯೋತ್ಪಾದಕರ ಧಾಳಿಯ ನಂತರದ ತನಿಖೆಗಳು, ಜೈಷ್-ಎ-ಮೊಹಮದ್ ಸಂಘಟನೆಯ ಕೈವಾಡ ಹಾಗೂ ದಾಳಿಕೋರರಲ್ಲಿ ಪಾಕಿಸ್ತಾನಿ ನಿವಾಸಿಗಳ ಗುರುತನ್ನು ಹೊರಗೆಡಹಿವೆ. ವಿಶ್ವಸಮುದಾಯದ ಮುಂದೆ ಮಂಡಿಸಲೊಂದು, ಉತ್ತಮ ಕೇಸ್ ದೊರೆತಿದೆ. ಪಾಕ್‌ನಲ್ಲಿ ನೆಲೆಸಿರುವ ಭಯೋತ್ಪಾದನಾ ಸಂಘಟನೆಗಳ ಮೇಲೆ ಕ್ರಮ ಜರುಗಿಸುವಂತೆ ವಿಶ್ವಸಂಸ್ಥೆಯನ್ನು ಒತ್ತಾಯಿಸಬೇಕು. ಭಯೋತ್ಪಾದನಾ ದಾಳಿಗಳ ಮೇಲೆ ಕ್ರಮ ಜರುಗಿಸಲು ಅನುವಾಗುವಂತೆ ಅಮೇರಿಕಾದಲ್ಲಿನ ಸೆಪ್ಟೆಂಬರ್ 11 ರ ದಾಳಿ ನಂತರ ಭದ್ರತಾ ಮಂಡಳಿಯು ನಿರ್ಣಯ 1373 ನ್ನು ಅಂಗೀಕರಿಸಿತ್ತು. ಅಫಘಾನಿಸ್ತಾನದಲ್ಲಿ ತಾಲಿಬಾನ್ ಆಡಳಿತವನ್ನು ಅಮೆರಿಕಾದ ಸೈನಿಕ ಕಾರ್ಯಾಚರಣೆಯ ನಂತರ ತೊಡೆದು ಹಾಕಿದ ನಂತರ

ಯುದ್ಧದ ಹಾದಿಯೇ? ಅಥವಾ ರಾಜತಾಂತ್ರಿಕ ರಾಜಕೀಯ ಕ್ರಮಗಳೇ?

ಪಾಕಿಸ್ತಾನದಲ್ಲಿ ಅಸ್ತಿತ್ವದಲ್ಲಿರುವ ಮೂಲಭೂತವಾದಿ-ಉಗ್ರಗಾಮಿ ಗುಂಪುಗಳ ಮೇಲೆ ಗಮನ ಕೇಂದ್ರೀಕೃತವಾಗಿದೆ. ಭಾರತವು ವಿಶ್ವ ಅಭಿಪ್ರಾಯವನ್ನು ರೂಪಿಸಲು ಹಾಗೂ ಉಗ್ರಗಾಮಿ ಸಂಘಟನೆಗಳ ಮೇಲೆ ಕ್ರಮ ಜರುಗಿಸುವಂತೆ ಮುಷರಫ್‌ರನ್ನು ಒತ್ತಾಯಿಸಲು ಅನುವಾಗುವಂತಹ ಅಂತರ್ರಾಷ್ಟ್ರೀಯ ಪರಿಸ್ಥಿತಿ ಉಂಟಾಗಿದೆ. ಸಾಕ್ಷಿ ಒದಗಿಸಿದಲ್ಲಿ ಪಾಕ್‌ನಲ್ಲಿ ನೆಲೆಸಿರುವ ಸಂಘಟನೆಗಳ ಮೇಲೆ ಕ್ರಮ ಜರುಗಿಸುವುದಾಗಿ ಮುಷರಫ್ ನೀಡಿರುವ ಮೊದಲ ಹೇಳಿಕೆ, ಅವರು ಅಂತರಾಷ್ಟ್ರೀಯ ಮೇಲ್ವಿಚಾರಣೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂಬುದರ ಸೂಚಕವಾಗಿದೆ.

ಈ ರೀತಿ ಕ್ರಮ ಜರುಗಿಸದೆ, ಎಂತಹುದೆ ಸೀಮಿತ ಸೈನಿಕ ಕಾರ್ಯಾಚರಣೆಗೆಂದು ಭಾರತ ಮುಂದಾದಲ್ಲಿ, ಅದು ಪೂರ್ಣ ಪ್ರಮಾಣದ ಯುದ್ಧ ...

ಹಾಗೂ ಆ ಸಂಘಟನೆಗಳ ಮೇಲೆ ಗಮನ ಕೇಂದ್ರೀಕೃತವಾಗದೆ ಅಣ್ವಸ್ತ್ರಧಾರಿಗಳಾಗಿರುವ ಭಾರತ್ ಪಾಕ್ ನಡುವಿನ ಸಂಘರ್ಷವಾಗಿ ಅದು ಮಾರ್ಪಡುತ್ತದೆ. ಜನ ಜೀವನ ಹಾಗೂ ಆರ್ಥಿಕ ಸಂಪನ್ಮೂಲದ ಹಿನ್ನೆಲೆಯಲ್ಲಿ ದೊಡ್ಡ ಹಾನಿಯನ್ನೆ ಅದು ಉಂಟುಮಾಡುತ್ತದೆ. ಈ ಯುದ್ಧ ಉಗ್ರಗಾಮಿ ಗುಂಪುಗಳನ್ನು ತೊಡೆದು ಹಾಕುವುದಿಲ್ಲ. ಬದಲಾಗಿ ಪಾಕ್‌ನಲ್ಲಿ **ಈಗ ಮೂಲೆಗುಂಪಾಗಿರುವ ಮೂಲಭೂತ ವಾದಿ ಶಕ್ತಿಗಳು ಭಾರತ ವಿರೋಧಿ ಅಲೆಯಲ್ಲಿ ಮತ್ತೆ ಪ್ರಧಾನ ಸ್ಥಾನಕ್ಕೆ ಬರುವ ಸಾಧ್ಯತೆ ಇದೆ.**

ಪಾಕ್ ಸರ್ಕಾರ ಭಯೋತ್ಪಾದನಾ ಸಂಘಟನೆಗಳನ್ನು ಕಾನೂನು ಬಾಹಿರಗೊಳಿಸಲು, ಮೂಲಭೂತವಾದಿ ಗುಂಪುಗಳ ಚಟುವಟಿಕೆಗಳನ್ನು ಹತ್ತಿಕ್ಕಲು ಒತ್ತಾಯ ತರುವ ರಾಜತಾಂತ್ರಿಕ ಹಾಗೂ ರಾಜಕೀಯ ಕ್ರಮಗಳನ್ನು ಭಾರತ ಸರ್ಕಾರ ಜರುಗಿಸಬೇಕು.

ಪಾಕ್ ಹಾಗೂ ಭಾರತ ನಡುವಿನ ನಿಯಂತ್ರಣ ರೇಖೆ ಹಾಗು ಅಂತರರಾಷ್ಟ್ರೀಯ ಗಡಿಯಾಚೆ ಈಚೆ, ಎರಡು ದೇಶಗಳು ಸೈನ್ಯವನ್ನು ಭಾರಿ ಶಸ್ತ್ರಾಸ್ತ್ರಗಳೊಂದಿಗೆ ಜಮಾಯಿಸುತ್ತಿವೆ. ಗುಂಡಿನ ಚಕಮಕಿ ನಡೆದಿದೆ. ಗಡಿಯಾಚೆಗಿನ ಪ್ರದೇಶದ ಮೇಲೆ ಸೈನಿಕ ದಾಳಿ ನಡೆಸಲು ಒತ್ತಡ ನಿರ್ಮಿಸಲಾಗುತ್ತಿದೆ. ಬಿಜೆಪಿ ನೇತೃತ್ವದ ಸರ್ಕಾರ ಪಾರ್ಕ್‌ನೊಂದಿಗೆ ಯುದ್ಧವನ್ನು ತಳ್ಳಿಹಾಕುತ್ತಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ವಾಜಪೇಯಿ ಸರ್ಕಾರ ತನ್ನ ಸೈದ್ಧಾಂತಿಕ ಗುರುಗಳಾದ, ಸಂಘ ಪರಿವಾರದ ಯುದ್ಧೋನ್ಮಾದದ ತಾಳಕ್ಕೆ ಕುಣಿಯದೆ, ಸಂಯಮ ತೋರಬೇಕು. ಭಯೋತ್ಪಾದನೆಯ ಅಪಾಯವನ್ನು ಯುದ್ಧದ ವಿನಹವೇ ಬೇಧಿಸುವ ರಾಜತಾಂತ್ರಿಕ ಹಾಗೂ ರಾಜಕೀಯ ಕ್ರಮ ಅಗತ್ಯವಾಗಿ ಜರುಗಬೇಕು.


ಭಜರಂಗ ದಳ, ಆರ್‌ಎಸ್‌ಎಸ್‌ನ ಖಾವಿ ಪಡೆ ಪ್ರಶಾಂತ ಕೊಡಗನ್ನು ಸ್ಮಶಾನ ಮಾಡಲು ಅಟ್ಟಹಾಸದ ಧಾಳಿ ನಡೆಸಿತು. ಇದಕ್ಕೆ ಖಾಕೀ ದಳ ಬೆಂಗಾವಲಾಯಿತು. ಅಲ್ಲಿ ನಡೆದ ವಿಧ್ವಂಸಕ ಕೃತ್ಯಗಳ ಬಗ್ಗೆ ವರದಿ


ಕೊಡಗಿಗೆ ಕೊಳ್ಳಿ ಖಾವಿ ಪ

ಎಸ್.ವೈ.ಗುರುಶಾಂತ್
ಪೀಟರ್ ಲೋಬೋ

ನಿಸರ್ಗ ರಮಣೀಯತೆ, ಸಾಂಸ್ಕೃತಿಕ ವೈವಿಧ್ಯತೆಯ ಪ್ರಶಾಂತ ಕೊಡಗಿಗೆ ಕಿಚ್ಚನ್ನಿಕ್ಕಲು ಕೊಳ್ಳಿಹಿಡಿದು ತಿರುಗುತ್ತಿವೆ ಸಂಘ ಪರಿವಾರದ ಕ್ರಿಮಿನಲ್‌ಗಳು. ನಾಪೋಕ್ಲು ಬಳಿಯ ಹರಿಶ್ಚಂದ್ರದ ದೇವಾಲಯ ಜಖಂಗೊಂಡಿದೆಯೆಂಬ ನೆಪವೊಡ್ಡಿ, ಇದನ್ನು ಅಲ್ಪಸಂಖ್ಯಾತರೇ ಮಾಡಿದ್ದಾರೆಂದು ದೂಷಿಸಿ, ಪ್ರಚಾರಿಸಿ ಕಳೆದ ಡಿಸೆಂಬರ್ 9 ರಿಂದ 17 ರವರೆಗೆ ಇಡೀ ಕೊಡಗನ್ನೇ ಪ್ರಕ್ಷುಬ್ದಗೊಳಿಸಿದರು. ಅಲ್ಪಸಂಖ್ಯಾತರ ಆಸ್ತಿ, ಮಸೀದಿ, ಅಂಗಡಿಗಳ ಮೇಲೆ ಎಗ್ಗಿಲ್ಲದ ಧಾಳಿ ನಡೆದವು. ಈ ಗಲಭೆಯಲ್ಲಿ 17 ಮಸೀದಿಗಳು ಆಕ್ರಮಣಕ್ಕೊಳಗಾದವು. 2 ತೀವ್ರ ಹಾನಿಗೀಡಾದವು. ನೂರಾರು ಎಕರೆ ಕಾಫಿ ತೋಟ, ಲೆಕ್ಕವಿಲ್ಲದಷ್ಟು ಬೆಳೆದು ನಿಂತ ಮರಗಳು ನೆಲಕ್ಕುರುಳಿದವು. ಮನೆ-ಅಂಗಡಿಗಳು ಲೂಟಿಯಾದವು. ತಕ್ಷಣ ಲೆಕ್ಕಕ್ಕೆ ಸಿಗುವುದು ಕೋಟಿಗೂ ಮೀರಿದ ಹಾನಿ, ಜಿಲ್ಲೆಯ ಜನ ಅಂಗೈಯಲ್ಲಿ ಪ್ರಾಣ ಹಿಡಿದು ದಿನಗಳನ್ನು ನೂಕಿದರು. ಉರಿವ ಬೆಂಕಿಗೆ ಕೆಲವು ಪತ್ರಿಕೆ-ಮಾಧ್ಯಮಗಳು ಪೆಟ್ರೋಲ್ ಸುರಿದು, ತಿದಿಯೂದಿ ತಮ್ಮದೇ ಆದ 'ವಾನರ ಸೇವೆ' ಮಾಡಿದವು. ಇಷ್ಟು ಮಾತ್ರ ಹೇಳಬಹುದು - ಇದು ಕೋಮುಗಲಭೆಯಲ್ಲ... ಆದರೆ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ, ಏಕಮುಖವಾಗಿ ನಡೆದ ಧಾಳಿ. ಈ ಖಾವಿ ಪಡೆಗಳ ಅಟ್ಟಹಾಸ, ನಡೆದಿದ್ದು ಲಾಠಿ ಬಂದೂಕು ಹಿಡಿದು ಕಾಯುತ್ತಿದ್ದ 'ಖಾವಿ ನಿಷ್ಠ' ಖಾಕಿ ಪಡೆ ಪೋಲೀಸ್‌ಅಧಿಕಾರಿಗಳ ಶಾಮೀಲಿನೊಂದಿಗೆ.....

ಸತ್ಯದ ಬಲಿ

'ಹಿಂದೂಗಳ ಈ ಆಕ್ರೋಶ ಸ್ಫೋಟಗಳಿಗೆಲ್ಲಾ


ಗಲಭೆಗೆ ನೆಪವಾದ 'ನಾಗ' ಕಲ್ಲುಗಳು

ಮೂಲಕಾರಣವೆಂದೇ ಬಣ್ಣಿಸಲಾಗುತ್ತಿರುವುದು ಹರಿಶ್ಚಂದ್ರ ದೇವಾಲಯದ ಭಗ್ನ ಪ್ರಕರಣ.

ಎಲ್ಲಿದೇ ಈ ಹರಿಶ್ಚಂದ್ರ ದೇವಾಲಯ? ಇಡೀ ಕೊಡಗು ನಾಡಿನ ತುಂಬಾ ಹುಡುಕಾಡಿದರೂ ಎಲ್ಲೂ ಕಾಣದು ಈ ಹರಿಶ್ಚಂದ್ರ ದೇವಾಲಯ. ಅಲ್ಲಿ ಮಾತ್ರವಲ್ಲ ಎಲ್ಲೂ ಭರತ ಖಂಡದಲ್ಲೇ ಇಲ್ಲವಂತೆ. ಆದರೆ ಇಲ್ಲದ ಈ ದೇವಾಲಯವನ್ನೇ ಗಲಭೆಯ ಕೇಂದ್ರನ್ನಾಗಿಸಿತು. ಸುತ್ತಲಿನ ಜಮೀನು ಅಕ್ರಮವಾಗಿ ವಶಪಡಿಸಿಕೊಂಡಿರುವುದೆಂದು ಹೇಳಲಾಯಿತು. ಸುತ್ತಲಿನ ಜಮೀನು ಅಕ್ರಮವಾಗಿ ವಶಪಡಿಸಿಕೊಂಡರೆಂದು ಸುಳ್ಳು ಸುದ್ದಿಗಳನ್ನೇ ಸಾರಿ ಅದನ್ನೇ ಸತ್ಯದಂತೆ ವ್ಯಾಖ್ಯಾನಿಸಿದ ಗೋಬಲ್ಸ್‌ನ ವಾರಸುದಾರರಿಂದ ಸತ್ಯಕ್ಕೆ ಹೆಸರಾದ ಹರಿಶ್ಚಂದ್ರನ್ನು ಬಲಿತೆಗೆದುಕೊಂಡದ್ದು ಎಂದಿನಂತೆ ಸಂಘಪರಿವಾರದ ಒಂದು ದಾಖಲೆ.

ಸೌಹಾರ್ದತೆಯ ಕೇಂದ್ರ

ಈ ದೇವಸ್ಥಾನ ಪಾಲೂರಿನಲ್ಲಿದೆ. ಹರಿಶ್ಚಂದ್ರ ಎಂಬುದು ಊರಿನ ಹೆಸರು. ಬಹುತೇಕ ಅಜ್ಞಾತವಾಗಿದ್ದ ಈ ಮಹಾಲಿಂಗೇಶ್ವರನ ದೇವಸ್ಥಾನವನ್ನು ಹೊರಗೆ ಪರಿಚಯಿಸಿದವನೇ ಹರಿಶ್ಚಂದ್ರ ಹಂಜಾ ಎಂಬ ಮುಸ್ಲಿಂ. ಈ ದೇವಸ್ಥಾನಕ್ಕೆ ಸುಣ್ಣ-ಬಣ್ಣ ಮತ್ತು ವರ್ಷಕ್ಕೊಮ್ಮೆ ನಡೆವ ಹಬ್ಬದ ಸಂದರ್ಭದಲ್ಲಿ ಸಿಹಿ ಊಟ ವ್ಯವಸ್ಥೆ, ಪಾತ್ರೆಗಳ ನೀಡಿಕೆ, ಕಾಣಿಕೆ ಎಲ್ಲಾ ಈ ಪ್ರದೇಶಲ್ಲಿರುವಬಹುತೇಕ ಮುಸ್ಲಿಮರದ್ದು. ಇದಕ್ಕೆ ಹಿಂದೂ-ಮುಸ್ಲಿಮರೂ ಪೂಜಿಸುತ್ತಾರೆ. ಕಿರಣ ಎಂಬ ಪೂಜಾರಿಯಿದ್ದು ವಾರದಲ್ಲಿ ಒಂದೆರೆಡು ಬಾರಿ ಮಾತ್ರ ಪೂಜೆ. .ಈ ಅಜ್ಞಾತ ದೇವಸ್ಥಾನಕ್ಕೆ ತಲಾಂತರದಿಂದ ಪೂಜಿಸುತ್ತಾ ಬಂದವರು ವರ್ಷಕ್ಕೊಮ್ಮೆ ಬಂದು ಹೋಗುತ್ತಾರೆ. ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಅಲ್ಪಸಂಖ್ಯಾತರೇ ಇದ್ದು ಅವರು ಕೊಡವ ಮಾಪಿಳ್ಳೆಗಳು ಇವರೂ ಸಹ ಕೊಡಗಿನ ಸಾಂಪ್ರದಾಯಿಕ ಹುತ್ತರಿ ಹಬ್ಬ ಆಚರಿಸುವರು. ಸುತ್ತಲಿನ 7-8 ಹಳ್ಳಿಗಳಲ್ಲಿ ಮುಸ್ಲಿಂರೇ ಅಧಿಕವಿದ್ದರೂ, ಇಲ್ಲಿಯವರೆಗೂ ದೇವಸ್ಥಾನದಲ್ಲಿ ಅಹಿತಕರ ಘಟನೆ ನಡೆದ ಒಂದೇ ಒಂದು ಪ್ರಕರಣ ಇಲ್ಲ.

ಹತೋಟಿಗೆ ಮಾಸ್ಟರ್ ಪ್ಲಾನ್

ಬಹಳ ಮುಖ್ಯವಾಗಿ ಇದೇ ಪ್ರದೇಶದಲ್ಲಿರುವ

ಕತ್ತಲೆಯೊಡನೆ ಹೋರಾಡುವ ಹಣತೆಗಳು

ಇಷ್ಟೆಲ್ಲಾ ಘಟನೆಗಳ ನಡುವೆ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ನೆರವಿಗೆ ನಿಂತವರು ಜಿಲ್ಲಾ ಪಂಚಾಯತ್ ಸದಸ್ಯ ಸಿ.ಎಸ್.ಅರುಣ್ ಮಾಚಯ್ಯ ತಿತಿಮಲೆಯಲ್ಲಿ ಲೂಟಿಖೋರರು ಮಸೀದಿಯೊಂದಕ್ಕೆ ಬೀಗ ಹಾಕಿದಾಗ ಅರುಣ್ ಬೀಗ ಒಡೆದು ಪ್ರಾರ್ಥನೆಗೆ ಅವಕಾಶ ಕಲ್ಪಿಸಿದ್ದಾರೆ.

● ದೇವರಪುರ ಗ್ರಾಮದಲ್ಲಿ ಮಸೀದಿ ನಾಶಗೊಳಿಸುವ ಸುದ್ದಿಗಳು ಹೊರಬಿದ್ದು, ದಾಂಧಲೆಖೋರರೂ ಅಬ್ಬರಿಸಿದಾಗ ಪಂಚಾಯ್ತಿ ಅಧ್ಯಕ್ಷರಾದ ಕಾಂ. ಚಿಪ್ಪಿ, ಕೃಷ್ಣಕುಮಾರ್‌ರವರು ತಮ್ಮ ಸಂಗಾತಿಗಳೊಂದಿಗೆ ರಾತ್ರಿಯಿಡೀ ಬಂಧೂಕು ಹಿಡಿದು ಮಸೀದಿ ರಕ್ಷಣೆಗೆ ನಿಂತಿದ್ದಾರೆ.


● ಕುಶಾಲನಗರದಲ್ಲಿ ಬಜರಂಗಿಗಳು ಅಲ್ಪಸಂಖ್ಯಾತರ ಅಂಗಡಿಗಳನ್ನು ಲೂಟಿ ಮಾಡಲು ಮುಂದಾದಾಗ ತನಗೆ ಬೇಕಾದರೆ ಕಲ್ಲುಹೊಡೆಯಿರಿ. ಆದರೆ ಇದಕ್ಕೆ ಅವಕಾಶ ನೀಡಲಾರೆ ಎಂದು ಎದುರಿಸಿ ನಿಂತವರು ಜಿಲ್ಲಾ ಪಂಚಾಯ್ತಿ ಪಕ್ಷೇತರ ಸದಸ್ಯ ವಿ.ಪಿ.ಶಶಿಧರ್, ಈ ಧಾಳಿಯಲ್ಲಿ ಪೂರ್ಣ ಹಾನಿಗೀಡಾದ ಪುಟ್ಟ ವ್ಯಾಪಾರಿಗೆ ಸಾರ್ವಜನಿಕರಿಂದ ಹಣ ಸಂಗ್ರಹಿಸಿ ನೀಡಿದ್ದು ಇನ್ನೊಂದು ಉದಾಹರಣೆ.

● ಈ ದ್ವೇಷಗಳ ನಡುವೆ ಕೋಮುವಾದಿಗಳನ್ನು ಎದುರಿಸಲು, ಜನರಿಗೆ ರಕ್ಷಣೆ ನೀಡಲು ಮುಂದಾಗಿದ್ದು ಸಿಪಿಐ(ಎಂ) ಹಾಗೂ ಡಿವೈಎಫ್‌ಐ ನ ಘಟಕಗಳು.

● ಇನ್ನೊಂದು ವಿಶೇಷವೆಂದರೆ ಬಿಜೆಪಿಯ ತೀರ್ಮಾನವನ್ನು ಸ್ಪಷ್ಟವಾಗಿ ವಿರೋಧಿಸಿ, ಮಸೀದಿಯ ಸಂಪೂರ್ಣ ರಕ್ಷಣೆಗೆ ನಿಂತ ಹೆಗ್ಗಳಿಕೆ ಶ್ರೀಮಂಗಲದ ಬಿಜೆಪಿಯ ಘಟಕದ ಕಾರ್ಯಕರ್ತರಿಗೆ ಸಲ್ಲುತ್ತದೆ. ಅಲ್ಲಿ ಒಂದು ಘಟನೆ ನಡೆಯದಂತೆ ಸಕ್ರಿಯ ಪಾತ್ರವಹಿಸಿದ್ದಾರೆ.

ಆದರೆ ಜಿಲ್ಲೆಯಲ್ಲಿ ಕಾಂಗ್ರೆಸ್ ನಿಷ್ಕ್ರಿಯವಾಗಿತ್ತು. ಕೆಲವೆಡೆ ಕಾಂಗ್ರೆಸ್‌ನ ಒಂದು ಬಣ 'ಕಮಲಧಾರಿ'ಗಳಾಗಿ ಚೆಡ್ಡಿಗಳೊಂದಿಗೆ ಕಾಲು ಜೋಡಿಸಿದ್ದು ಅವಮಾನಕರ ಘಟನೆ. ಉಸ್ತುವಾರಿ ಸಚಿವ ಎಂ.ಎಂ.ನಾಣಯ್ಯ ಅತ್ಯಂತ ಬೇಜವಾಬ್ದಾರಿತನದಿಂದ ವರ್ತಿಸಿದ್ದಾರೆ.

● ಈ ಎಲ್ಲಾ ಅಟ್ಟಹಾಸ, ವಿನಾಶ ನಡೆದ ನಂತರ ಇನ್ನೇನು ಮುಗಿಯಿತು ಎಂದು ಸಾಧಿಸಲು ಕೆಲವರು ಮುಂದಾದರು. ಅಲ್ಪಸಂಖ್ಯಾತರ ಹಾಗೂ ಜನಸಾಮಾನ್ಯರ ಅಳಲು, ಹಾನಿ ಅಂತಗಳ ಸಮಾಧಿ ಮಾಡುವ ಯತ್ನಗಳು ನಡೆದಾಗ ಸಿಡಿದೆದ್ದು ನ್ಯಾಯಕ್ಕಾಗಿ ನಿಂತವರು ಖ್ಯಾತ ನ್ಯಾಯವಾದಿ, ಹಿರಿಯ ನಾಯಕ ಎ.ಕೆ.ಸುಬ್ಬಯ್ಯನವರು ಗಲಭೆ ಆರಂಭಗೊಂಡಾಗಲೂ ಗುಡುಗಿದ್ದಲ್ಲದೇ, ಇಡೀ ಪ್ರದೇಶಗಳಿಗೆ ಸಿಪಿಐ(ಎಂ)ನ ಪೀಟರ್, ಕಾಳಯ್ಯ, ವಸಂತ್‌ರಿದ್ದ ನಿಯೋಗದೊಂದಿಗೆ ತೆರಳಿ ಜನತೆಗೆ ಧೈರ್ಯ ಹೇಳಿದ್ದುಲ್ಲದೇ ಘಟನೆಯ ಒಟ್ಟು ಪಿತೂರಿ ವಿವರಗಳನ್ನು ಬಯಲುಗೊಳಿಸಿದರು. ನಂತರ ಗೃಹಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಸಿಓಡಿ ಮತ್ತು ನ್ಯಾಯಾಂಗ ತನಿಖೆ, ಹಾನಿ ಪರಿಹಾರ, ಆಕ್ರಮಣಕಾರರ ಮೇಲೆ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ನಿಷ್ಠುರ ಕ್ರಮಕ್ಕೆ ಆಗ್ರಹಿಸಲಾಗಿದೆ.




ಎಳೆಯನ್ನು ಬಿಡಿಸಿಟ್ಟ


ಪ್ರೊ. ರಾಮದಾಸ್, ಜಿ.ಕೆ.ಗೋವಿಂದರಾವ್ ಮತ್ತಿತರರು

ಎಮ್ಮೆ ಮಾಡು ದರ್ಗಾ ಪ್ರಸಿದ್ಧಿ ಪಡೆದ ಸ್ಥಳ. ಈ ದರ್ಗಾಕ್ಕೆ ಕೊಡವ ಗೌಡ ಹಾಗೂ ಮುಸ್ಲಿಂ ಜನಾಂಗಗಳೆಲ್ಲಾ ಸೇರಿ ಉತ್ಸವ ಆಚರಿಸುತ್ತಾರೆ. ಅಲ್ಲಿ ಲಕ್ಷಾಂತರ ಜನ ಸೇರುತ್ತಾರೆ. ಕೋಟ್ಯಾಂತರ ಹಣ ಸಂಗ್ರಹವೂ ಆಗುತ್ತದೆ. ಇಂತಹ ಕೋಮುಸೌಹಾರ್ದತೆಯ, ಕೋಟ್ಯಾಂತರ ಹಣ ಸೇರುವ ಸ್ಥಳದ ಮೇಲೆ ಈ 'ಚೆಡ್ಡಿ ವೀರರ' ಕಣ್ಣು ಹಾಯ್ದಿದೆ. ಇದು ಸೂಫಿ ಶಹೀದ್ ದರ್ಗಾ ಅಲ್ಲವೆಂದೂ, ಕೃಷ್ಣದೇವರಾಯನ ದೇವಸ್ಥಾನವಾಗಿದ್ದು ಮುಸ್ಲಿಮರು ಅಕ್ರಮವಾಗಿ ಇಟ್ಟುಕೊಂಡಿದ್ದಾರೆಂದು ವರ್ಷದ ಹಿಂದೆ ಅರಚಾಡಿತ್ತು ಈ ಪರಿವಾರ. ಅಂದರೆ ಈ ಪ್ರದೇಶದ ಮೇಲೆ ಹತೋಟಿ ಸಾಧಿಸಲು ನಿರ್ದಿಷ್ಟವಾದ ಒಂದು ವಿಧ್ವಂಸಕ 'ಮಾಸ್ಟರ್ ಪ್ಲಾನ್' ತಯಾರಾಗಿತ್ತು ಎಂದು ಕಾಣುತ್ತದೆ. ಆದರೆ 'ಧರ್ಮನಿಷ್ಟರ' ಈ ಕೂಗಿಗೆ ಕೊಡಗಿನ ಜನ ಅಷ್ಟಾಗಿ ತಲೆ ಕೆಡಿಸಿಕೊಳ್ಳದೇ ಹೋದುದು 'ಸಂಘಿ'ಗಳನ್ನು ಕೆರಳಿಸಿರಬೇಕು. ಸಹಬಾಳ್ವೆ,

ಇಟ್ಟ

ಡೆ



ಖಾವಿ ಪಡೆಗಳಿಂದ ಕೊಡಗು ಉಳಿಸಲು ಅಣಿನೆರೆದ ಜನಶಕ್ತಿ

ಶಾಂತಿ-ಸೌಹಾರ್ದದಿಂದ ಬಾಳುವುದನ್ನೇ ಹಿಂದುಗಳಿಗೆ ಹೇಡಿತನ ಅಡರಿದೆಯೆಂದೂ,ಕುರಿ ಮಂದೆಯಲ್ಲಿ ಬೆಳೆದ ಸಿಂಹದ ಸ್ಥಿತಿ ಒದಗಿದೆಯೆಂದೂ ತೀರ್ಮಾನಿಸಿ 'ಹಿಂದುತ್ವದ ವೀರತನ' ಬಡಿದೆಬ್ಬಿಸಲು ಹುರಿಗೊಂಡರು.

ಹಲವು ಅನುಮಾನ

ಈ ಪಾಲೂರಿನ ಮಹಾಲಿಂಗೇಶ್ವರ ದೇವಸ್ಥಾನದ ಚರಿತ್ರೆ ಏನೇ ಇರಲಿ, ಅದನ್ನು ಧ್ವಂಸ ಮಾಡಿದವರು ಅಲ್ಪಸಂಖ್ಯಾತರಂತೂ ಅಲ್ಲ ಎಂಬುದು ದೃಢಪಟ್ಟಿದೆ.

ನವೆಂಬರ್ 11, 2001 ರಂದು ನಾಪೋಕ್ಲು ಪೋಲೀಸ್ ಠಾಣೆಯಲ್ಲಿ ದೇವಸ್ಥಾನದ ಪೂಜಾರಿ ಕಿರಣ್‌ರವರು ಒಂದು ದೂರು ನೀಡಲು ದೇವಾಲಯದ ನಾಲ್ಕು ಹೆಂಚುಗಳು ಒಡೆದಿವೆ, ಹೊರಗಿನ 2 ನಾಗಕಲ್ಲುಗಳು ಕಿತ್ತು ಹಾಕಲಾಗಿದೆಯೆಂದು, ಹಾಗೆ ಗಂಟೆಯೊಂದನ್ನು ಕೆಳಗೆ ಎಸೆದು ಅದರಲ್ಲಿ ಮಲ ತುಂಬಿಸಿದ್ದು ಇದರ ತನಿಖೆ ನಡೆಯಬೇಕೆಂದು ಕೇಳಿದ್ದಾರೆ. ಈ ಪುಕಾರಿನಲ್ಲಿ ಯಾವುದೇ ಜನಾಂಗದ ಅಥವಾ ವ್ಯಕ್ತಿಗಳ ಹೆಸರು ನೀಡಿಲ್ಲ ಎಂದು ದೇವಸ್ಥಾನದ ಮುಖ್ಯಸ್ಥ ತಕ್ಕ ಚಂಗಪ್ಪನವರು ಹೇಳುತ್ತಾರೆ. ಈ ದೇವಸ್ಥಾನದ ನಿಧಿ ವ್ಯವಸ್ಥಾಪಕರಾದ ಜಿಲ್ಲಾಧಿಕಾರಿಗಳು ಸಹ ಹೀಗೆ ದೂರು ನೀಡಿದ್ದಾರೆ. ಈ ಪುಕಾರಿನ ನಂತರ ಪೋಲೀಸರು ಯಾವುದೇ ಕ್ರಮ ಕೈಗೊಳ್ಳದೇ ತಮ್ಮ ಬೇಜವಾಬ್ದಾರಿ ತೋರಿಸಿದ್ದಾರೆ. ಈ ನಂತರ ಎಂದಿನಂತೆ ಪೂಜೆ ನಡೆಯುತ್ತಿತ್ತು. ಡಿಸೆಂಬರ್ 7, 8 ರಂದೂ ಸಹ ಪೂಜೆ ನಡೆದಿದೆ. ಆದರೆ....



ಭಜರಂಗಿಗಳ ವಿಧ್ವಂಸಕತೆ

ಡಿಸೆಂಬರ್ 9 ರಂದು ಕೊಡಗಿನ ಸಂಘನಿಷ್ಟ 'ಶಕ್ತಿ' ಪತ್ರಿಕೆಯಲ್ಲಿ ಈ ಘಟನೆಯ ಉದ್ರೇಕತನದ ವರದಿ, ಫೋಟೋಗಳ ಸಮೇತ ಪ್ರಕಟವಾಯಿತು. ಆದ ತಕ್ಷಣವೇ ಡಿ. 10 ರಂದು 'ಪಾಲೂರು ಭಕ್ತಜನ ಸಂಘ' ವೆಂದು ರಚನೆಯಾಗಿ ಜಿಲ್ಲೆಯಾದ್ಯಂತ ಇವರೇ ಹುಟ್ಟಹಾಕಿದ್ದ 'ಹಿಂದೂ ಸಂಘಟನೆಗಳ' ಸಭೆಯನ್ನು ಪಾಲೂರಿನಲ್ಲಿ ಸೇರಿಸಲಾಯಿತು. ಕರೆದು ತರಲಾದ ಸುಮಾರು 2 ಸಾವಿರಕ್ಕೂ ಅಧಿಕವಿದ್ದ ಜನ ಮೆರವಣಿಗೆ ನಡೆಸಿ, ಉದ್ರೇಕಕಾರಿ ಘೋಷಣೆ ಕೂಗಿ ಹಾರಾಡಿದಲ್ಲದೇ ದೇವಸ್ಥಾನದ ಹೆಂಚುಗಳನ್ನು ಮತ್ತೆ ಒಡೆದಿದ್ದಾರೆಂದು ಪ್ರತ್ಯಕ್ಷ ದರ್ಶಿಗಳು ಹೇಳುತ್ತಾರೆ. ಅಲ್ಲದೇ ಅಲ್ಪಸಂಖ್ಯಾತರ ಓಣಿಗಳಲ್ಲಿ ಹೂಂಕರಿಸಿದ್ದಾರೆ. ಸುಮಾರು 800-1000 ಜನರಿದ್ದು ತಂಡವೊಂದು ಅಲ್ಲಿಯ ಅಶ್ರಫ್ ಅಲಿ ಎಂಬುವರ ತೋಟಕ್ಕೆ ನುಗ್ಗಿ 500 ಕಾಫಿ ಗಿಡ, 250 ಕ್ಕೂ ಹೆಚ್ಚು ಕರಿಮೆಣಸು ಬಳ್ಳಿ ಕಡಿದು ಹಾಕಿ, ಮನೆ ಜಖಂ ಮಾಡಿ ತಮ್ಮ ಗೂಂಡಾ ಸಂಸ್ಕೃತಿ ಮೆರೆದಿದ್ದಾರೆ. ಇದೇ ಪುಂಡರ ತಂಡ ಅಲ್ಪಸಂಖ್ಯಾತರು ಅಧಿಕವಿರುವ ಅಲ್ಪಸಂಖ್ಯಾತರಿಗೆ ಸೇರಿರುವ ಸುಮಾರು 110 ಎಕರೆ ಕಾಫಿ ತೋಟ, ಮತ್ತು ಮನೆಯನ್ನು ಧ್ವಂಸ ಮಾಡಲಾಗಿದೆ. ಈ ಪ್ರದೇಶ ಅತ್ಯಂತ ದುರ್ಗಮ ಹಾಗೂ ಮುಖ್ಯಬೀದಿಯಿಂದ ದೂರವಿದ್ದು, ಇಲ್ಲಿಗೆ ಸುಮಾರು 25 ಜೀಪ್‌ಗಳಲ್ಲಿ ಅಲ್ಲಿಗೆ ತಲುಪಿ ಇಂತಹ ಕೃತ್ಯ ಮಾಡಲಾಗಿದೆ. ಶಕ್ತಿ ಪತ್ರಿಕೆ ವರದಿ ಮಾಡುವಂತೆ ಆಕ್ರೋಶಿತರಾದ ಹಿಂದೂಗಳು 'ಮಿಂಚಿನ' ಪ್ರತಿಭಟನೆ ಮಾಡಿದರಂತೆ. ಆ ದಿನಗಳಲ್ಲೇ ದಾಂಧಲೆ, ಲೂಟಿ, ಆಕ್ರಮಣಗಳು ಚೆಡ್ಡಿ ಪರಿವಾರದಿಂದ ನಡೆಯುತ್ತಿರುವಾಗಲೇ ಅತ್ಯಂತ ಬೃಹತ್ತಾದ ನೂರಾರು ಮರಗಳನ್ನು ಕಡಿದು ರಸ್ತೆಗಳಿಗೆ ಅಡ್ಡಲಾಗಿ ಕೆಡವಲಾಗಿದೆ. ಇವೆಲ್ಲಾ ಘಟನೆಗಳು 'ಮಿಂಚಿನಂತೆ' ನಡೆಸಲು ಸಾಧ್ಯವೇ? ಹಾಗಾಗಬೇಕಾದರೆ 'ಪ್ರಳಯವಾಗ' ಬೇಕಾದೀತು.

ವ್ಯವಸ್ಥಿತ ಸಂಚು

ಮುಖ್ಯಪ್ರಶ್ನೆ: ಇವೆಲ್ಲಾ ಘಟನೆಗಳನ್ನು ಗಮನಿಸಿದರೆ ಇದೊಂದು ವ್ಯವಸ್ಥಿತವಾದ ಸಂಚು. ಒಂದೆರಡು ದಿನಗಳಲ್ಲಿ ಯೋಚಿಸಿದ್ದಲ್ಲ ಬದಲಾಗಿ ಒಂದೆರೆಡು ತಿಂಗಳು ಪೂರ್ವಸಿದ್ಧತೆ ನಡೆದ ಬಗ್ಗೆ ಹಲವಾರು ಸ್ಪಷ್ಟ ಘಟನಾ ಸಾಕ್ಷಿಗಳು ಇವೆ. ಹೆಂಚುಗಳು ಹಾರಿದ್ದು ನವೆಂಬರ್ 11, ಆದರೆ ಕಿಡಿ ಹೊತ್ತಿದ್ದು ಡಿಸೆಂಬರ್ 9 ರಲ್ಲಿ ಒಂದು ತಿಂಗಳ ನಂತರ. ಈ ಅವಧಿಯಲ್ಲೇ ಮಡಿಕೇರಿ ಶಾಲೆಯಲ್ಲಿ ಕೆಲ ಕ್ರಿಶ್ಚಿಯನ್ ಮಕ್ಕಳು ರಾಷ್ಟ್ರಗೀತೆ ಹಾಡುತ್ತಿಲ್ಲ ಎಂಬ ವಿವಾದವನ್ನು ಹುಟ್ಟುಹಾಕಿ ದಾಳಿ ನಡೆಸಿ ವ್ಯಾಪಕ ಪ್ರಚಾರಿಸಲಾಯಿತು. ರಾಷ್ಟ್ರ ಧ್ವಜ ಸಂರಕ್ಷಣೆಗಾಗಿ ಧರಣಿ-ಪ್ರತಿಭಟನೆಗಳ ಸೋಗು ಹಾಕಲಾಯಿತು.

ಕೊಟ್ಟಮಡಿಯಲ್ಲಿ ಭಾರಿ ಆಸ್ತಿಪಾಸ್ತಿ ಲೂಟಿ ಹೊಡೆದಿದೆ. ತಮ್ಮ ಆಸ್ತಿ ರಕ್ಷಿಸಿಕೊಳ್ಳಲು ಮುಂದಾದ ಅಲ್ಪಸಂಖ್ಯಾತ ಮುಸ್ಲಿಮರಿಗೆ ಪೋಲೀಸರು ಬೆದರಿಕೆ ಹಾಕಿದ್ದಲ್ಲದೇ ಎಲ್ಲಾ ದಾಂಧಲೆ ನಡೆಸಲು ಲೂಟಿಕೋರರಿಗೆ ರಕ್ಷಣೆ ನೀಡಿದ್ದಾರೆ.

ಒಂದೆಡೆ ಇಂತಹ ಘಟನೆಗಳ ಆರಂಭಗೊಳ್ಳುತ್ತಿರುವಂತೆ ಇಡೀ ಜಿಲ್ಲೆಯ ಭಾಗಮಂಡಲ, ಬೆಟ್ಟಗೇರಿ, ಬಾಳತಿ, ಕೊಟ್ಟಮಡಿ, ಕುಟ್ಟ ಸೇರಿದಂತೆ ಹಲವಾರು ಭಾಗಗಳಲ್ಲಿ ಅಲ್ಪಸಂಖ್ಯಾತರ ಆಸ್ತಿಪಾಸ್ತಿ ನಾಶ ಪಡಿಸಲಾಗಿದೆ. ಮಸೀದಿಗಳ ಮೇಲೆ ಆಕ್ರಮಣ ಮಾಡಿ ಧ್ವಂಸಗೊಳಿಸಲಾಗಿದೆ. ಅಯ್ಯಂಗೇರಿ ಸಮೀಪ

ನಂತರ ಕೋಮುದ್ವೇಷದ ಕಿಚ್ಚು ಹಚ್ಚಲು ಈ ಖಾವೀ ಪಡೆ ಬಳಸಿಕೊಂಡಿದ್ದು ಡಿಸೆಂಬರ್ 6 ರನ್ನು. (ಬಾಬ್ರಿ ಮಸೀದಿ ನಾಶದ ದಿನ) ಅಂದು ವಿರಾಜಪೇಟೆಯಲ್ಲಿ 'ಹಿಂದೂ ಸಮಾಜೋತ್ಸವ'ದ ಹೆಸರಿನಲ್ಲಿ ಬಜರಂಗದಳ, ವಿಶ್ವಹಿಂದೂ ಪರಿಷತ್ ಸಭೆಯನ್ನು ನಡೆಸಿತು. ಸುಮಾರು 2000 ಜನರಿದ್ದ ಈ ಸಭೆಯಲ್ಲಿ ಅಲ್ಪಸಂಖ್ಯಾತರ ಕುರಿತು ಅತ್ಯಂತ ಕೀಳು ಭಾಷೆ ಬಳಸಿ, ಉದ್ರೇಕಕಾರಿಯಾಗಿ ಬಜರಂಗದಳದ ಜಗದೀಶ್ ಕಾರಂತ್, ಪ್ರಮೋದ್ ಮುತಾಲಿಕ್ ಮಾತನಾಡಿದ್ದಾರೆ. ಪಟಾಕಿ ಸಿಡಿಸುವಬದಲು

ಪುಟ 12 ಕ್ಕೆ



ದುರ್ಘಟನೆಯ ಸ್ಥಳಗಳಿಗೆ ಭೇಟಿ ನೀಡಿದ ನಿಯೋಗ

ಚೆಡ್ಡಿಗಳ ಅಟ್ಟಹಾಸಕ್ಕೆ ದಿಟ್ಟ ಉತ್ತರ ನೀಡಿದ ಸೌಹಾರ್ದತೆಯ ರ್‍ಯಾಲಿ

ಮೈ ಕಾಯಿಸಿಕೊಳ್ಳಲು ಇಡೀ ಪ್ರಶಾಂತ ಕೊಡಗಿಗೇ ಬೆಂಕಿ ಹಚ್ಚಿ, ಮನಬಂದಂತೆ ಚೀರಾಡಿ, ಏಕಮುಖವಾಗಿ ಧಾಳಿ ನಡೆಸಿ ಅಹಂಕಾರದಿಂದ ತಡೆವವರಾರು ಎಂದು ಅಬ್ಬರಿಸುತ್ತಿದ್ದಾಗ, ಅದಕ್ಕೆ ಸವಾಲು ಹಾಕಿ ನಿಂತದ್ದು 'ಕೋಮುವಾದಿಗಳಿಂದ ಕೊಡಗು ಉಳಿಸಿ' ಎಂದ ಡಿಸೆಂಬರ್ 27 ರ ಧರ್ಮನಿರಪೇಕ್ಷಿತ ಶಕ್ತಿಗಳ ರ್‍ಯಾಲಿ.

ಅಂದು ಹತ್ತು ಸಾವಿರಕ್ಕೂ ಅಧಿಕ ದೇಶಪ್ರೇಮಿ ಜನತೆ ಬೆಳಿಗ್ಗೆ 11 ಗಂಟೆಗೆ ಮಡಿಕೇರಿಯ ಸುಪ್ರಸಿದ್ಧ ಗದ್ದುಗೆಯಿಂದ ಗಾಂಧೀಜಿ ಮೈದಾನಕ್ಕೆ ಪ್ರವಾಹೋಪಾದಿಯಲ್ಲಿ ಹರಿದು ಬಂದು, ಮಾನವ ಚೈತನ್ಯವಾಗಿ ಕೋಮುವಾದಕ್ಕೆ ಪ್ರಬಲ ವಿರೋಧವನ್ನು ವ್ಯಕ್ತಪಡಿಸಿದರು. ಒಂದು ರೀತಿಯಲ್ಲಿ ಗದ್ದುಗೆ ಹಾಗೂ ಗಾಂಧಿ ಬಯಲಿಗೂ ಮಾನವ ಸೇತುವೆಯನ್ನೇ ನಿರ್ಮಿಸಿದರು. ಸರಿಸುಮಾರು ನಾಲ್ಕೂವರೆ ತಾಸಿನ ಸಭೆಯ ಉದ್ದಕ್ಕೂ ಕದಲದೇ, ಬಿಸಿಲು ಲೆಕ್ಕಿಸದೇ ನಾಯಕರ ಭಾಷಣ ಕೇಳಿ, ಪದಪದಕ್ಕೂ ಸ್ಪಂದಿಸಿ ಸಹಮತ ವ್ಯಕ್ತಪಡಿಸಿ, ಕೋಮುವಾದದ ವಿರುದ್ಧದ ಹೋರಾಟದಲ್ಲಿ ಹೆಜ್ಜೆ ಹೆಜ್ಜೆಗೂ 'ನಿಮ್ಮೊಂದಿಗೆ ಇದ್ದೇವ, ಸಮರ ಸಾರುತ್ತೇವೆ' ಎಂದು ಸಾರಿದರು. ಇದರಲ್ಲಿ ಯುವಜನರೇ ಅತ್ಯಧಿಕ ಸಂಖ್ಯೆಯಲ್ಲಿದ್ದರು. ಮುಖ್ಯವಾಗಿ ಎಲ್ಲಾ ಜಾತಿಗಳು-ಕೋಮುಗಳಿಂದ ತೂರೆ ತೂರೆಯಾಗಿ ಹರಿದುಬಂದು ಸುಂದರ, ವೈವಿಧ್ಯಮಯ ಕೊಡಗಿನ ಸಂಸ್ಕೃತಿಯನ್ನು ಧ್ವನಿಸಿ, ಪ್ರತಿನಿಧಿಸಿದರು. ಕೊಡಗನ್ನು ಕಾಪಾಡುವ ಸಂಕಲ್ಪವನ್ನು ತೊಟ್ಟರು.

ಈ ರ್‍ಯಾಲಿಯನ್ನು 'ಕೊಡಗು ಜಾತ್ಯಾತೀತ ಜನರ ವೇದಿಕೆ' ಸಂಘಟಿಸಿತ್ತು. ಇಡೀ ಊರಿಗೇ ಕೇಳುವಂತೆ ಧ್ವನಿವರ್ಧಕಗಳನ್ನು ಅಳವಡಿಸಲಾಗಿತ್ತು. ಒಟ್ಟು ಗಾಂಧಿ ಮೈದಾನವೇ ಜನರಿಂದ ತುಂಬಿ ತುಳುಕಿತಲ್ಲದೇ, ಪಕ್ಕದ ದಿಬ್ಬದ ತುಂಬೆಲ್ಲಾ ಸೇರಿದ್ದರು.

ಈ ಸಭೆಯಲ್ಲಿ ಮುಖ್ಯ ಚೇತನದಂತೆ ಎ.ಕೆ.ಸುಬ್ಬಯ್ಯ, ಸಿಪಿಐ(ಎಂ) ನಿಂದ ಎಸ್.ವೈ.ಗುರುಶಾಂತ್, ಪ್ರೊ. ಕೆ.ರಾಮದಾಸ್, ಪ್ರೊ. ಜಿ.ಕೆ.ಗೋವಿಂದರಾವ್ ಅಲ್ಲದೇ ಫಯಾಜ್ ಅಹ್ಮದ್ ಮುಂತಾದವರು ಮಾತನಾಡಿದರು. ಸಿಪಿಐ(ಎಂ) ನ ಕಾರ್ಯದರ್ಶಿ ಪೀಟರ್ ಲೋಬೋ, ಡಿವೈಎಫ್‌ನ ವಂಸತ್ ಹೊಸಮನೆ ಕಾರ್ಯಕ್ರಮ ನಿರೂಪಿಸಿದುರು. ಹೆಚ್.ಎಂ.ಕಾಳಯ್ಯ ಒಳಗೊಂಡು ಹಲವು ಜಿ.ಪ.ಸದಸ್ಯರು, ಪಂಚಾಯತ್‌ಅಧ್ಯಕ್ಷರು, ವಕೀಲರು, ಬರಹಗಾರರು, ಅಲ್ಪಸಂಖ್ಯಾತ ಮುಖಂಡರು ಭಾಗವಹಿಸಿದ್ದರು. ಈ ಕೋಮುಸೌಹಾರ್ದತಾ ರ್‍ಯಾಲಿ ಕೊಡಗಿನಲ್ಲಿ ಕೋಮುವಾದಿಗಳನ್ನು ಎದುರಿಸುವಲ್ಲಿ ಸ್ಪಷ್ಟವಾದ ಮೈಲುಗಲ್ಲು.

ಮುಂದಿನ ಸಂಚಿಕೆಯಲ್ಲಿ ಎ.ಕೆ.ಸುಬ್ಬಯ್ಯನವರದ್ದೂ ಒಳಗೊಂಡು ಹಲವರ ಭಾಷಣದ ಸಾರ ಮತ್ತು 'ಪೋಲೀಸರು ಹಾಗೂ ಪತ್ರಿಕೆಗಳ ಪಾತ್ರ' ಲೇಖನ ಪ್ರಕಟಿಸಲಾಗುವುದು.

ಸಿಂಗಾಪೂರ್ ಕನಸಿನಲ್ಲಿ ನಲುಗುತ್ತಿರುವ ಬೆಂಗಳೂರು

ಸಿಪಿಐ(ಎಂ) ಬೆಂಗಳೂರು ಸಮ್ಮೇಳನದ ವಿಶ್ಲೇಷಣೆ

ದುಡಿಯುವ ವರ್ಗದ ಚಳುವಳಿಯ ಸನ್ನದ್ಧತೆ

ಕೈಗಾರಿಕಾರಂಗದಲ್ಲಿ ಆಗಿರುವ ಬೆಳವಣಿಗೆಗಳು

ಬೆಂಗಳೂರು ನಗರ ಮೊದಲಿನಿಂದಲೂ ಬೃಹತ್ ಕೇಂದ್ರೋದ್ಯಮಗಳಿಗೆ ಹೆಸರಾಗಿದೆ. ಅದೇ ರೀತಿ ರಾಜ್ಯವಲಯದ ಉದ್ಯಮಗಳ ಕೇಂದ್ರವೂ ಆಗಿದೆ ಮತ್ತು ಹಲವಾರು ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಕೇಂದ್ರವೂ ಆಗಿದೆ. ಎಲೆಕ್ಟ್ರಾನಿಕ್ಸ್, ದೂರಸಂಪರ್ಕ, ರೈಲ್ವೆ, ವಾಯುಸಾರಿಗೆ, ಯಂತ್ರಗಳು ಮುಂತಾದ ಮೂಲಭೂತ ವಸ್ತುಗಳ ಉತ್ಪಾದನೆಯನ್ನು, ಉತ್ತಮವಾದ ಕಾರ್ಯತಂತ್ರ ಮತ್ತು ಕುಶಲತೆಗಳ ಮೂಲಕ ಮಾಡಲಾಗುತ್ತಿದೆ. ಇವುಗಳಲ್ಲಿ ಬಹುತೇಕ ಉದ್ದಿಮೆಗಳು ಉತ್ಪಾದನೆಯಲ್ಲಿ, ಲಾಭಗಳಿಕೆಯಲ್ಲಿ, ಹೊಸ ಉಪಕರಣಗಳ ತಯಾರಿಕೆಯಲ್ಲಿ ಮತ್ತು ರಫ್ತು ವ್ಯವಹಾರಗಳಲ್ಲಿ ತೊಡಗಿ ಬೃಹತ್ ಪ್ರಮಾಣದಲ್ಲಿ ಬೆಳೆದು ನಿಂತಿವೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ದಾಳಿಯಿಂದಾಗಿ ಇವೆಲ್ಲವೂ ಈಗ ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಿವೆ. ಹಲವಾರು ಪ್ರಮುಖ ಉದ್ದಿಮೆಗಳು ವಿನಾಶದ ಅಂಚಿಗೆ ತಳ್ಳಲ್ಪಡುತ್ತಿವೆ. ಸ್ವಯಂ ನಿವೃತ್ತಿಯೋಜನೆ, ಸುವರ್ಣ ಹಸ್ತಲಾಘವ ಮತ್ತು ಕಾರ್ಖಾನೆಗಳ ಮುಚ್ಚುವಿಕೆಯಿಂದಾಗಿ ಸಾವಿರಾರು ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಉತ್ತಮ ತಂತ್ರಜ್ಞಾನದ ಮತ್ತು ಕುಶಲತೆಯುಳ್ಳ ಕಾರ್ಮಿಕರು ವಲಸೆ ಹೋಗುತ್ತಿದ್ದಾರೆ.

ನಾಶಗೊಳ್ಳುತ್ತಿರುವ ಕೈಗಾರಿಕೆ-ಉದ್ಯೋಗಾವಕಾಶ

ಹೆಚ್.ಎ.ಎಲ್.ನಲ್ಲಿ 2000ಕ್ಕೂ ಹೆಚ್ಚು, ಬಿಇಎಂಎಲ್‌ನಲ್ಲಿ 3000,ಕ್ಕೂ ಹೆಚ್ಚು ಐಟಿಐನಲ್ಲಿ 5000ಕ್ಕೂ ಹೆಚ್ಚು ಬಿಹೆಚ್‌ಇಎಲ್‌ನಲ್ಲಿ 1000ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಪ್ರತಿಷ್ಠಿತ ಕಂಪನಿ ಬಿಇಎಲ್‌ನಲ್ಲಿ 13000 ದಿಂದ 5200ಕ್ಕೆ ಕಾರ್ಮಿಕರ ಸಂಖ್ಯೆ ಇಳಿದಿದೆ. ರಾಜ್ಯದ ಸಾರ್ವಜನಿಕ ಉದ್ದಿಮೆಗಳಾದ ಮೈಸೂರು ಲ್ಯಾಂಪ್ಸ್, ಎನ್.ಜಿ.ಇ.ಎಫ್. ಮುಂತಾದವುಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ತೀರ್ಮಾನ ರಾಜ್ಯ ಸರ್ಕಾರ ಮಾಡಿದೆ. ಸರ್ಕಾರಿ ನೌಕರರ ಸಂಖ್ಯೆಯನ್ನು ಕಡಿತಗೊಳಿಸಲು ಪ್ರಯತ್ನ ನಡೆದಿದೆ. ಸರ್ಕಾರದ ಆಮದು ನೀತಿ ಮತ್ತು ವಿದ್ಯುಚ್ಛಕ್ತಿ ಅಭಾವ, ದುಬಾರಿ ದರಗಳಿಂದಾಗಿ ಸಾವಿರಾರು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು ಬಿಕ್ಕಟ್ಟನ್ನು ಎದುರಿಸುತ್ತಿವೆ. ಸಾವಿರಾರು ಸಣ್ಣ ಕೈಗಾರಿಕೆಗಳು ಪೈಪೋಟಿ ಮಾಡಲಾಗದೆ ಮುಚ್ಚಿಹೋಗಿವೆ. **ಕಾರ್ಮಿಕರನ್ನು ಅಲ್ಪ ವೇತನಕ್ಕಾಗಿ, ತಾತ್ಕಾಲಿಕ ಹಾಗೂ ಗುತ್ತಿಗೆ ಪದ್ಧತಿ ಮೂಲಕ ದುಡಿಸಿಕೊಳ್ಳುವ ಪ್ರವೃತ್ತಿಗಳು ಹೆಚ್ಚಾಗುತ್ತಿವೆ. ವಿದೇಶಿ ಕಂಪನಿಗಳ ಜೊತೆ ಪೈಪೋಟಿ ಮಾಡಲು ಸಾಮರ್ಥ್ಯ ಬೆಳೆಸಿಕೊಳ್ಳುವ ನೆಪದಲ್ಲಿ ಸರ್ಕಾರದ ಬೆಂಬಲದೊಂದಿಗೆ ಇವನ್ನು ಮಾಡಲಾಗುತ್ತಿದೆ.**

ಇಂಜನಿಯರಿಂಗ್, ಟೆಕ್ಸ್‌ಟೈಲ್ಸ್, ಸ್ಟೀಲ್ ಮುಂತಾದ ಕೈಗಾರಿಕೆಗಳು ವಿಪರೀತ ಬಿಕ್ಕಟ್ಟನ್ನು ಎದುರಿಸುತ್ತಿವೆ. ಬೀಡಿ, ಅಗರಬತ್ತಿ, ಗಾರ್ಮೆಂಟ್ಸ್,ಗೃಹ ಕೈಗಾರಿಕೆಗಳು ಉದಾರೀಕರಣದ ದಾಳಿಗೆ ಸಿಲುಕಿ ನಲುಗುತ್ತಿವೆ. ಅಂಗನವಾಡಿಯ ಹಲವು ಪ್ರಾಜೆಕ್ಟ್‌ಗಳನ್ನು ಬೆಂಗಳೂರಿನಲ್ಲಿ ಖಾಸಗಿಯವರಿಗೆ ವಹಿಸಲಾಗಿದೆ.

ಖಾಸಗಿಗೆ ಹಣಕಾಸು ವಲಯ

ಹಣಕಾಸು ವಲಯದಲ್ಲಿ ನರಸಿಂಹಂ ಸಮಿತಿ ಮತ್ತು ಮಲ್ಹೋತ್ರ ಸಮಿತಿಯ ಶಿಫಾರಸ್ಸುಗಳನ್ನು ವೇಗವಾಗಿ ಜಾರಿಮಾಡುತ್ತಿರುವುದರ ಪರಿಣಾಮಗಳನ್ನು ಜಿಲ್ಲೆಯಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ವಿಮಾರಂಗದಲ್ಲಿ ಖಾಸಗಿ ಕಂಪನಿಗಳು ಪ್ರವೇಶ ಮಾಡಿವೆ. ಬ್ಯಾಂಕಿಂಗ್ ಕ್ಷೇತ್ರವನ್ನು ಖಾಸಗೀಕರಣಕ್ಕೆ ಒಳಪಡಿಸಲು ಪ್ರಯತ್ನಗಳು ಹೆಚ್ಚುತ್ತಿವೆ. ನೌಕರರ ಸಂಖ್ಯೆಯನ್ನು ತೀವ್ರವಾಗಿ ಕಡಿತಗೊಳಿಸುವ ಪ್ರಕ್ರಿಯೆಯಿಂದ ಸಾವಿರಾರು ಬ್ಯಾಂಕ್ ನೌಕರರು ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ. ಬ್ಯಾಂಕ್‌ಗಳಲ್ಲಿ ಸಾಲ ನೀಡುವ ಆದ್ಯತೆಗಳು ಬದಲಾಗುತ್ತಿವೆ. ಹೂಡಿಕೆದಾರರ ಹಣದ ಮೇಲಿನ ಬಡ್ಡಿದರವನ್ನು ಕಡಿತಗೊಳಿಸಲಾಗಿದೆ. ದೇಶದ ಆರ್ಥಿಕ ಸುಭದ್ರತೆಗೆ, ಸ್ವಾವಲಂಬನೆಗೆ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಅಪಾರ ಕಾಣಿಕೆ ನೀಡುತ್ತಿದ್ದ ಈ ವಲಯವು ಈಗ ಕೇವಲ ಲಾಭಗಳಿಕೆಗೆ ಮಾತ್ರ ಆದ್ಯತೆಯನ್ನು ನೀಡುತ್ತಿದೆ. ಸಾಮಾಜಿಕ ಜವಾಬ್ದಾರಿಗಳು ಅಂತ್ಯವಾಗಿ ಸಾರ್ವಜನಿಕರ ಹಣಕ್ಕೆ ಹೊಣೆಗಾರಿಕೆ ಇಲ್ಲವಾಗುತ್ತಿದೆ.

ಕೃಷಿ ವಲಯದಲ್ಲಿ ಅಲ್ಲೋಲ ಕಲ್ಲೋಲ

ದೇಶದಾದ್ಯಂತ ವಿಸ್ತರಿಸಿರುವ ರೈತರ ಆತ್ಮಹತ್ಯೆಗಳು ಜಿಲ್ಲೆಗೂ ಪ್ರವೇಶ ಮಾಡಿದೆ. ಹೆಸರಘಟ್ಟ ಬಳಿ ಸುರದೇನಪುರದ ಕೋಸು ಬೆಳೆದ ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆನೇಕಲ್‌ನಲ್ಲಿ ಇಂತಹದೊಂದು ಘಟನೆ ನಡೆದಿದೆ. ವಿದೇಶೀ ಉತ್ಪನ್ನಗಳ ಮಹಾಪೂರವೇ ಹರಿದು ಬರುತ್ತಿರುವುದರಿಂದ ಕೃಷಿ ಉತ್ಪನ್ನಗಳ ಬೆಲೆಕುಸಿತ ರೈತರನ್ನು ಬಾಧಿಸಿದೆ. ವಿದ್ಯುತ್, ಔಷಧಿ, ಗೊಬ್ಬರ, ಬಿತ್ತನೆಬೀಜ ಮುಂತಾದವುಗಳ ಬೆಲೆ ಏರಿಕೆಯಿಂದ ರೈತರು ದಿವಾಳಿಯಾಗುತ್ತಿದ್ದಾರೆ. ಕೃಷಿಗೆ ನೀಡಲಾಗುತ್ತಿದ್ದ ಎಲ್ಲಾ ರೀತಿಯ ಸಹಾಯಧನಗಳನ್ನು ಕಡಿತಗೊಳಿಸಲಾಗುತ್ತಿದೆ. ಸಾಲ - ಸೌಲಭ್ಯಗಳು, ರಿಯಾಯ್ತಿಗಳು, ಪರಿಹಾರಗಳು ರೈತರಿಗೆ ಇಲ್ಲವಾಗುತ್ತಿವೆ. ಬಡ್ಡಿ ಶ್ರೀಮಂತರು, ಮಧ್ಯವರ್ತಿಗಳ ಮುಷ್ಠಿಯಲ್ಲಿ ಸಿಲುಕಿ ರೈತರು ನರಳುವಂತಾಗಿದೆ. ವಿದ್ಯುತ್ ಪಂಪ್ ಸೆಟ್ ರೈತರ ಸಮಸ್ಯೆಗಳು ತೀವ್ರಗೊಂಡಿದೆ. ಹೊಸಕೋಟೆ, ಆನೇಕಲ್, ದೊಡ್ಡಬಳ್ಳಾಪುರ, ಮುಂತಾದ ಕಡೆಗಳಲ್ಲಿ ರೈತರ ಹೋರಾಟಗಳು ಈ ವಿಚಾರದಲ್ಲಿ ಬೆಳೆಯುತ್ತಿವೆ. ಅದೇ ರೀತಿ ಹಾಲಿನ ಬೆಲೆ ಕುಸಿತದಿಂದ ಹಾಲು ಉತ್ಪಾದಕರು ಜಿಲ್ಲೆಯಾದ್ಯಂತ ಹೋರಾಟದ ಕಣದಲ್ಲಿದ್ದಾರೆ.

ಹೊಸ ಕೃಷಿ ನೀತಿಯ ಪರಿಣಾಮವಾಗಿ ಕೃಷಿ ಭೂಮಿ ವಾಣಿಜ್ಯ ಬೆಳೆಗಳಿಗೆ ವರ್ಗಾವಣೆಯಾಗುತ್ತಿದೆ. ಬೆಂಗಳೂರು ಸೆರಗಿನ ಕೃಷಿಭೂಮಿಯು ಖಾಸಗಿ ಕಂಪನಿಗಳು ಮತ್ತು ವಿದೇಶಿ ಕಂಪನಿಗಳಿಗೆ ಪರಭಾರೆಯಾಗುತ್ತಿದೆ. ಬೆಂಗಳೂರು ಸುತ್ತ-ಮುತ್ತ ರೆಸಾರ್ಟ್‌ಗಳು, ಹೋಟೆಲುಗಳು ಪ್ರವಾಸೋದ್ಯಮ ಕೇಂದ್ರಗಳು, ಪುಷ್ಪಕೃಷಿ ಕೇಂದ್ರಗಳು, ಟೌನ್ ಶಿಪ್‌ಗಳು ಬೆಳೆಯುತ್ತಿವೆ. ತಮ್ಮ ನೆಲದಿಂದ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಜೋರಾಗಿ ನಡೆದಿದೆ. ಭೂಮಿ ಕಳ್ಳರ ಜಾಲ ವಿಸ್ತರಿಸಿದೆ. ಅಭಿವೃದ್ಧಿ ಯೋಜನೆಗಳು ಕಡಿತವಾಗುತ್ತಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ರೈತರನ್ನು ಮತ್ತಷ್ಟು ಭಾದಿಸುತ್ತಿವೆ.

ಶಿಕ್ಷಣ ಕ್ಷೇತ್ರ ವ್ಯಾಪಾರೀಕರಣ

ಬೆಂಗಳೂರು ಶಿಕ್ಷಣದ ವ್ಯಾಪಾರೀಕರಣದ ಕೇಂದ್ರವಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗಮನ ಸೆಳೆದಿದೆ. ಬೆಂಗಳೂರಿನಲ್ಲಿ ಸರ್ಕಾರಿ ಮತ್ತು ಖಾಸಗಿ ಶಾಲಾ-ಕಾಲೇಜುಗಳ ನಡುವೆ ಅಗಾಧ ಅಂತರ ಮೂಡುತ್ತಿದೆ. ಡೊನೇಷನ್ ಸುಲಿಯುವ ಪಿಡುಗು ತೀವ್ರವಾಗುತ್ತಿದೆ. ಕೆಲವು ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಹಂತಕ್ಕೆ ಲಕ್ಷ ರೂಗಳವರೆಗೆ ಸುಲಿಯುತ್ತಾರೆ. ವೃತ್ತಿಪರ ಶಿಕ್ಷಣಕ್ಕೆಂದು ಬೆಂಗಳೂರಿಗೆ ದೇಶಾದ್ಯಂತದಿಂದ ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರುತ್ತಾರೆ. ವೃತ್ತಿಪರ ಖಾಸಗಿ ಶಿಕ್ಷಣ ಸಂಸ್ಥೆಗಳದ್ದೇ ಒಂದು ದೊಡ್ಡ ಲಾಭಿ ಬೆಳೆದು ನಿಂತಿದೆ. ಬೆಂಗಳೂರು ವಿ.ವಿ.ಯು ಹೆಚ್ಚು ಸಮಾಜ ವಿಜ್ಞಾನಗಳ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲು ಖಾಸಗೀ ಸಂಸ್ಥೆಗಳಿಗೆ ಅನುಮತಿ ನೀಡಿದೆ.

ಮಾಹಿತಿ ತಂತ್ರಜ್ಞಾನ ಶಿಕ್ಷಣದ ವಿಸ್ತರಣೆ ಬೆಂಗಳೂರಿನಲ್ಲಿ ಶಿಕ್ಷಣ ಮಾರಾಟದ ಇನ್ನೊಂದು ದೊಡ್ಡ ಜಾಲವಾಗಿದೆ. ಇದರಲ್ಲಿ ಸರ್ಕಾರದ ಪಾತ್ರ ನಗಣ್ಯವಾಗಿದೆ. ಜೊತೆಗೆ ಖಾಸಗೀ ರಂಗದ ಮೇಲೆ ಸರ್ಕಾರದ ನಿಯಂತ್ರಣ ಸಂಪೂರ್ಣವಾಗಿ ಇಲ್ಲವಾಗಿದೆ. ಮಾಹಿತಿ ತಂತ್ರಜ್ಞಾನಕ್ಕೆ ನೀಡುತ್ತಿರುವ ಅತಿಯಾದ ಒತ್ತಿನಿಂದಾಗಿ ಮೂಲಭೂತ ವಿಜ್ಞಾನವನ್ನು ಕಲಿಯುವವರ ಸಂಖ್ಯೆಯಲ್ಲಿ ತೀವ್ರ ಇಳಿತ ಕಂಡುಬರುತ್ತಿದ್ದು ಹಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳೇ ಮೂಲಭೂತ ವಿಜ್ಞಾನದ ಕೋರ್ಸ್‌ಗಳನ್ನು ಮುಚ್ಚುವ ಹಂತಕ್ಕೆ ಬಂದಿವೆ. ಈ ಬೆಳವಣಿಗೆಯಿಂದಾಗಿ ವಿಜ್ಞಾನ ತಂತ್ರಜ್ಞಾನ ರಂಗದ ಒಂದು ಖ್ಯಾತ ಸಂಶೋಧನಾ ಕೇಂದ್ರವೆಂದು ಹೆಸರು ಗಳಿಸಿದ್ದ ಬೆಂಗಳೂರು ಮುಂದೆ ಏನಾಗಲಿದೆ ಎಂಬ ಆತಂಕ ತೀವ್ರವಾಗಿದೆ.



ಬಹಿರಂಗ ಸಭೆ


ತೋರಿಕೆಯ ಅಭಿವೃದ್ಧಿ

ಇಷ್ಟೆಲ್ಲಾ ದುಷ್ಪರಿಣಾಮಗಳು ಆಗುತ್ತಿದ್ದರೂ, ಉದಾರೀಕರಣದ ನೀತಿಗಳಿಂದಾಗಿ ಆಗುತ್ತಿರುವ ತೋರಿಕೆಯ ಅಭಿವೃದ್ಧಿಯನ್ನು ಬೆಂಗಳೂರಿನ ಜನರ ಮನಸ್ಸಿನಲ್ಲಿ ಭ್ರಮೆಗಳನ್ನು ಸೃಷ್ಟಿಸಲು ಬಳಸಲಾಗುತ್ತಿದೆ. ಮಾಹಿತಿ ತಂತ್ರಜ್ಞಾನಕ್ಕೆ ಅತಿಯಾದ ಒತ್ತು, ಇಲ್ಲಿ ನೀಡುವ ಅಪಾರವಾದ ವೇತನ ಮತ್ತು ಸೌಕರ್ಯಗಳು ಎಲ್ಲರ ಗಮನ ಸೆಳೆಯುತ್ತಿವೆ. ಒಂದು ಹೊಸ ಮೇಲ್ ಮಧ್ಯಮ ಮತ್ತು ಶ್ರೀಮಂತ ವರ್ಗದ ಉದಯವಾಗುತ್ತಿದ್ದು, ಈ ವರ್ಗದ ಸುತ್ತ ಗಿರಿಕಿ ಹೊಡೆಯುವ ಹೊಸ ಆಕರ್ಷಣೆಗಳು ಪ್ರಾಮುಖ್ಯತೆ ಪಡೆಯುತ್ತಿವೆ. ಹೈಟೆಕ್ ಸಂಸ್ಕೃತಿ, ಹೈಟೆಕ್ ಆಸ್ಪತ್ರೆಗಳು, ಹೈಟೆಕ್ ಶಿಕ್ಷಣ ಸಂಸ್ಥೆಗಳು ಹೈಟೆಕ್ ಹೋಟೆಲ್‌ಗಳು ಇತ್ಯಾದಿ ಹೆಚ್ಚುತ್ತಿವೆ. ಮೇಲ್ ಸೇತುವೆಗಳು, ವಿಶ್ವ ಬಂಡವಾಳದ ಆಕರ್ಷಣೆಗೆ ಬೇಕಾದ ರಸ್ತೆಗಳು, ಕಾರಿಡಾರ್ ಯೋಜನೆಗಳು, ಐಟಿ ಪಾರ್ಕುಗಳು ಮುಂತಾದವು ಬೆಂಗಳೂರು ಅಭಿವೃದ್ಧಿಯತ್ತ ಸಾಗುತ್ತಿದೆ ಎಂಬ ಭ್ರಮೆಯನ್ನು ಮಾಡಿಸುತ್ತಿವೆ ಕಲವೇ ಜನರಿಗೆ ದಕ್ಕಬಹುದಾದ ಈ ಬೆಳವಣಿಗೆಗಳ ಲಾಭವು ಒಟ್ಟು ಅಭಿವೃದ್ಧಿಯ ತೋರಿಕೆಯಾಗಿ ಕಾಣಿಸಿಕೊಳ್ಳುವಲ್ಲಿ ಕೆಲಸ ಮಾಡುತ್ತಿವೆ.

ವಿಶ್ವ ಬಂಡವಾಳಿಗರ ಸಮ್ಮೇಳನವನ್ನು ಬೆಂಗಳೂರಲ್ಲಿ ನಡೆಸಿದ ಕೃಷ್ಣರ ಸರ್ಕಾರ, ಇವರ ಹಿತಾಸಕ್ತಿಗಳಿಗೆ ಅನುಗುಣವಾಗಿ ಕಾನೂನುಗಳನ್ನು ಮಾರ್ಪಡಿಸಲು ಹೊರಟಿದೆ. ವಿಶ್ವಬ್ಯಾಂಕ್‌ನ ಸಾಲದ ಹಲವು ಯೋಜನೆಗಳು ಬೆಂಗಳೂರನ್ನೇ ಗಮನದಲ್ಲಿಟ್ಟುಕೊಂಡು ಬಂದಿವೆ. ಈ ಸಲುವಾಗಿ ಟಾಸ್ಕ್ ಫೋರ್ಸ್‌ಗಳನ್ನು ರಚಿಸುವ ಮೂಲಕ ಬೆಂಗಳೂರಿನ ಅಭಿವೃದ್ಧಿ ಯಾರ ಸಲುವಾಗಿ ಎಂದು ಜನರಿಗೆ ಅರ್ಥಮಾಡಿಸಬೇಕಾದ ದೊಡ್ಡ ಸವಾಲು ನಮ್ಮ ಮುಂದಿದೆ.

ಸಾಮಾಜಿಕ ಬೆಳವಣಿಗೆಗಳು.

ಕಾರ್ಯದರ್ಶಿ : ಪ್ರಕಾಶ್ ಕೆ.
ಕಾರ್ಯದರ್ಶಿ ಮಂಡಳಿ ಸದಸ್ಯರು :
ಇ.ಕೆ.ಎನ್. ರಾಜನ್, ಮೀನಾಕ್ಷಿ ಸುಂದರಂ ಹೆಚ್.ಎನ್.ಗೋಪಾಲಗೌಡ, ಆರ್. ಶ್ರೀನಿವಾಸ್, ಟಿ.ಸುರೇಂದ್ರ ರಾವ್, ಗೋಪಾಲಕೃಷ್ಣ ಅರಳಹಳ್ಳಿ, ಎನ್. ಪ್ರಭಾವತಿ.



ಪ್ರಕಾಶ್ ಕೆ.



ದುಡಿಯುವ ವರ್ಗದ ಕಹಳೆಯಿದು.

ವಿದ್ಯುತ್ ಮುಂತಾದ ನಾಗರೀಕ ಅಗತ್ಯಗಳನ್ನು ನಾಶಮಾಡುತ್ತಿರುವುದರಿಂದ ಜನರ ಬದುಕಿನ ಮಟ್ಟ ಕುಸಿದಿದೆ. ಮನೆಬಾಡಿಗೆ, ಪ್ರಯಾಣದರಗಳು ದುಬಾರಿಯಾಗಿವೆ. ದರೋಡೆ, ಕೊಲೆ, ಸುಲಿಗೆ ಮುಂತಾದ ಅಪರಾದಗಳು ಹೆಚ್ಚುತ್ತಿವೆ. ನಿರುದ್ಯೋಗ ತೀವ್ರವಾಗುತ್ತಿದ್ದು ಅಕ್ರಮ ಚಟುವಟಿಕೆಗಳು, ಮಾಫಿಯಾ ದಂಧೆಗಳಲ್ಲಿ ಯುವಜನ ಪಾತ್ರ ಹೆಚ್ಚುತ್ತಿದೆ. ಬೆಂಗಳೂರು ಇವುಗಳ ಕೇಂದ್ರವಾಗುತ್ತಿದೆ. ಹಿಂಸೆ, ಕ್ರೌರ್ಯ, ಸೆಕ್ಸ್ ಪ್ರೇರಿತ ಹಲವಾರು ಚಾನೆಲ್‌ಗಳು ಬೇಡಿಕೆಯಲ್ಲಿವೆ. ಜೊತೆಗೆ ಸರಕು ಸಂಸ್ಕೃತಿಯು ಪ್ರಭಾವ ಬಿರತ್ತಿದೆ. ಸಾಂಸ್ಕೃತಿಕ ಅಧಃಪತನ ವ್ಯಾಪಕಗೊಳ್ಳುತ್ತಿದೆ. ಮಹಿಳೆಯರ ಮೇಲಿನ ದಾಳಿಗಳು, ವರದಕ್ಷಿಣೆ ಸಾವುಗಳು ಹೆಚ್ಚಾಗಿವೆ. ಹೆಚ್ಚುತ್ತಿರುವ ಜನರ ಅತೃಪ್ತಿಯನ್ನು ಮೂಢನಂಬಿಕೆ, ಕಂದಾಚಾರ, ಕುರುಡು ವಿಶ್ವಾಸಗಳ ಕಡೆ ತಿರುಗಿಸುವ ಪ್ರಯತ್ನಗಳು ಹೆಚ್ಚುತ್ತಿವೆ. ಕೋಮುವಾದಿ ಶಕ್ತಿಗಳು ಗುಡಿ-ಗೋಪುರಗಳು, ದೇವಾಲಯಗಳು, ಪ್ರಾರ್ಥನಾ ಮಂದಿರಗಳು, ಧಾರ್ಮಿಕ ಸಭೆಗಳನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ. ಆರ್‌ಎಸ್‌ಎಸ್‌ನ ಶಾಕೆಗಳನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ.

ಕಾರ್ಖಾನೆಗಳಲ್ಲಿ ಭಾಷಾವಾರು ಮತ್ತು ಜಾತಿವಾರು ವಿಭಜನೆಯನ್ನು ತರಲು ಪ್ರಯತ್ನಗಳು ಹೆಚ್ಚುತ್ತಿವೆ. ಇದಕ್ಕೆ ಮಾಲಿಕರ ಬೆಂಬಲವೂ ಇದೆ. ಜನ ಚಳುವಳಿಗಳನ್ನು ಪ್ರಾರಂಭದ ಹಂತದಿಂದಲೇ ಚಿವುಟಿಹಾಕುವ ಸಲುವಾಗಿ ಯುಜಓಗಳು ವ್ಯಾಪಕವಾಗಿ ಕೆಲಸ ಮಾಡುತ್ತಿವೆ.

ರಾಜಕೀಯ ಪರಿಸ್ಥಿತಿ.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ಸದ್ಯ ಕಾಂಗ್ರೆಸ್ ಪ್ರಾಬಲ್ಯ ಹೆಚ್ಚಾಗಿದೆ. ಒಟ್ಟು 24 ವಿಧಾನಸಭಾ ಕ್ಷೇತ್ರಗಳಲ್ಲಿ 16ರಲ್ಲಿ ಕಾಂಗ್ರೆಸ್, 6ರಲ್ಲಿ ಬಿಜೆಪಿ 2ರಲ್ಲಿ ಜೆಡಿಯು ಗೆದ್ದಿವೆ. ಕಾರ್ಮಿಕರ, ರೈತರ ಮತ್ತು ಇತರೆ ದುಡಿಯುವ ಜನವಿಭಾಗಗಳ ಪರವಾಗಿ ಪ್ರತಿನಿಧಿಗಳು ವಿಧಾನಸಭೆಯಲ್ಲಿ ಇಲ್ಲವಾಗಿದೆ. ದುಡಿವ ವರ್ಗಗಳ ಹಿತಕ್ಕಾಗಿ ಯವುದೇ ಬಂಡವಾಳ ಶಾಹಿ ರಾಜಕೀಯ ಪಕ್ಷ ಶ್ರಮಿಸದಿದ್ದರೂ, ವರ್ಗಗಳ ನಡುವೆ ಚಟುವಟಿಕೆ ನಮ್ಮ ಸಂಘಟನೆಗಳದ್ದೇ ಹೆಚ್ಚಿದ್ದರೂ, ರಾಜಕೀಯ ಸ್ಥಾನಮಾನವನ್ನು ಗಳಿಸುವಲ್ಲಿ ನಾವು ಯಶಸ್ವಿಯಾಗಿಲ್ಲ ಎಂಬುದನ್ನು ಗುರುತಿಸಲಾಗಿದೆ. ನಮ್ಮ ಚಟುವಟಿಕೆ ಮತ್ತು ಶೈಲಿ, ಸಂಘಟನಾ ಕಣ್ಣೋಟದಲ್ಲಿ ಅಪಾರ ಬದಲಾವಣೆ ಬರಬೇಕಾಗಿದೆ ಎಂಬದನ್ನು ಸಮ್ಮೇಳನವು ಚರ್ಚಿಸಿದೆ.


ಸ್ಫೂರ್ತಿ ತುಂಬಿದ ಜಿಲ್ಲಾ ಸಮ್ಮೇಳನ

ಜಿಲ್ಲೆಯ ವಿವಿಧ ಜನಚಳುವಳಿ ಮತ್ತು ಸಂಘಟನೆಗಳನ್ನು ಪ್ರತಿನಿಧಿಸಿ 123 ಪ್ರತಿನಿಧಿಗಳು ಭಾಗವಹಿಸಿದ್ದ ಡಿಸೆಂಬರ್ 16,17,18 ರಂದು ನಡೆದ ಬೆಂಗಳೂರು ಜಿಲ್ಲಾ ಸಿಪಿಐ(ಎಂ)ನ 17ನೇ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ಜರುಗಿತು ಮತ್ತು ಹೊಸ ಸ್ಫೂರ್ತಿಯನ್ನು ತುಂಬಿತು. ಜಿಲ್ಲಾ ಸಮಿತಿಯ ಪರವಾಗಿ ಮಂಡಿಸಿದ ಕರಡು ವರದಿಯ ಮೇಲೆ ಸುಮಾರು 7 ಗಂಟೆಗಳ ಕಾಲ 45 ಪ್ರತಿನಿಧಿಗಳು ಚರ್ಚಿಸಿ ಮಾತನಾಡಿದರು. ಪಕ್ಷದ ಬೆಳವಣಿಗೆಗೆ ಅಗತ್ಯವಾದ ಕಣ್ಣೋಟ ಮತ್ತು ಚಳುವಳಿಯನ್ನು ಪ್ರತಿಯೊಬ್ಬರೂ ದೃಢಪಡಿಸಿದರು. ಸಮ್ಮೇಳನದ ಕೊನೆಯಲ್ಲಿ 23 ಸದಸ್ಯರ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ನಂತರ ಜಿಲ್ಲಾ ಸಮಿತಿಯು ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆ ಮಾಡಿತು.

ಮಧ್ಯಾಹ್ನ ಬಹಿರಂಗ ಸಭೆಯ ಭಾಗವಾಗಿ ಆಕರ್ಷಕ ಮೆರವಣಿಗೆಯನ್ನು ಸಂಘಟಿಸಲಾಗಿತ್ತು. ಬಹಿರಂಗ ಸಭೆಯಲ್ಲಿ ಕಾಂ। ಸೂರಿ, ಪ್ರಕಾಶ್ ಕೆ. ಹೆಚ್.ಎನ್. ಗೋಪಾಲಗೌಡ ಮಾತನಾಡಿದರು.

ದುಡಿವ ವರ್ಗದ ಧ್ರುವತಾರೆ - ಮಹಿಳಾ ವಿಮೋಚನಾ ಚಳುವಳಿಯ ನಾಯಕಿ

ಸುಶೀಲಾ ಗೋಪಾಲನ್ ಇನ್ನಿಲ್ಲ



ಮಹಿಳಾ ಚಳುವಳಿ ತನ್ನ ವಿಸ್ತಾರವನ್ನು ಕಂಡುಕೊಳ್ಳುತ್ತಿರುವಾಗಲೇ ಹಲವಾರು ಹಿರಿಯ ಸಂಗಾತಿಗಳನ್ನು ಕಳೆದುಕೊಳ್ಳುತ್ತಿರುವುದು ನೋವಿನ ಸಂಗತಿ. ಕಳೆದ 19 ಡಿಸೆಂಬರ್ 2001ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಹಿರಿಯ ನಾಯಕಿ, ವರ್ಗದ ಹೋರಾಟದಲ್ಲಿ ಸುಶೀಲಾರದು ಅವಿಸ್ಮರಣೀಯ ಕೊಡುಗೆ. ಅಂತೆಯೇ ಭಾರತದ ಮಹಿಳಾ ಚಳುವಳಿಯ ಇತಿಹಾಸದಲ್ಲಿ ಸುಶೀಲಾರ ಛಾಪು ಅತ್ಯಂತ ಗಾಢವಾದದ್ದು. ಮಹಿಳೆಯರ ಹಕ್ಕುಗಳಿಗೆ ಮುಂಚೂಣಿಯಲ್ಲಿದ್ದರು. ಮಹಿಳಾ ಚಳುವಳಿ ರಾಜಕೀಯದಿಂದ ಆಚೆ ಇರಬೇಕೆಂಬ ದುರುದ್ದೇಶಪೂರಿತ ವಾದವನ್ನಿಟ್ಟು ಹಲವು ಪ್ರಯತ್ನಗಳು ನಡೆದಾಗ ಅದರ ವಿರುದ್ಧ ಪ್ರಜ್ಞಾಪೂರ್ವಕ ಹೋರಾಟ ಮಾಡಿದವರು ಸಂಗಾತಿ ಸುಶೀಲಾ.

ಸಮರ್ಥ ನಾಯಕ

ನಾಡಿನ ಕಾರ್ಮಿಕರ ಸಂಘಟನೆಯ ಮೂಲಕ ಅವರು ವರ್ಗ ಮತ್ತು ಲಿಂಗ ಅಸಮಾನತೆಗಳ ವಿರುದ್ಧ ಇರುವ ನೇರ ಸಂಬಂಧವನ್ನು. ಅವರು ಅರ್ಥ ಮಾಡಿಕೊಂಡರು ಮತ್ತು ಆ ಅನುಭವವನ್ನು ಅವರು ಮಹಿಳಾ ಚಳುವಳಿಗೆ ಬೆಸೆದರು. ಜನವಾದಿ 1981ರಲ್ಲಿ ಪ್ರಾರಂಭವಾದಾಗ ಅದರ ಪ್ರಧಾನ ಕಾರ್ಯದರ್ಶಿ ಯಾಗಿ ಆಯ್ಕೆಯಾದ ಅವರು ರಾಷ್ಟ್ರದಾದ್ಯಂತ ಸಂಘಟನೆ ಬೆಳೆಯಲು ಸಹಕಾರಿಯಾದರು. 3 ಬಾರಿ ಪಾರ್ಲಿಮೆಂಟಿಗೆ ಆಯ್ಕೆಯಾದ ಸುಶೀಲಾ 1995ರಲ್ಲಿ ಕೇರಳದ ಕೈಗಾರಿಕಾ ಮತ್ತು ಸಮಾಜ ಕಲ್ಯಾಣ ಮಂತ್ರಿಯಾಗಿ ಆಯ್ಕೆಯಾದರು. ಎರಡೂ ಅತ್ಯಂತ ಜವಾಬ್ದಾರಿಯುತ ಇಲಾಖೆಗಳನ್ನು ಸಮರ್ಥವಾಗಿ ನಿಬಾಯಿಸಿದ ಹೆಗ್ಗಳಿಕೆ ಸುಶೀಲಾರದು. ಅವರ ನಾಯಕತ್ವದಲ್ಲಿ ರಾಜ್ಯದಲ್ಲಿ ತಂದ ಆಮದು ನೀತಿ, ಮಹಿಳೆ ಎಂಬ ಕಾರಣಕ್ಕಾಗಿ ಎಲ್ಲ ಹಂತಗಳಲ್ಲಿ ನಾವು ಎದುರಿಸುವ ಸಮಸ್ಯೆಗಳ ಬಗ್ಗೆ ಸ್ಪಷ್ಟವಾಗಿ ಹೇಳುತ್ತಿದ್ದ ಸುಶೀಲಾ, ಅದರ ವಿರುದ್ಧದ ಹೋರಾಟ ನಡೆಸುವ ಮನೋಸ್ಥೈರ್ಯ ಬೆಳೆಸಿಕೊಳ್ಳಬೇಕೆಂಬ ಕಿವಿಮಾತುಗಳನ್ನು ಮಹಿಳೆಯರಿಗೆ ಹೇಳುತ್ತಿದ್ದರು. ಅವರ ನಾಯಕತ್ವದಲ್ಲಿ ಜನವಾದಿ ಮಹಿಳಾ ಸಂಘಟನೆ ಮಹಿಳೆಯರ ಮೇಲಿನ ಹಿಂಸೆ ದೌರ್ಜನ್ಯಗಳ ವಿರುದ್ಧ ಹಲವು ಚಳುವಳಿಗಳನ್ನು ರೂಪಿಸಿತಲ್ಲದೇ, ಜಂಟಿ ಕಾರ್ಯಕ್ರಮಗಳನ್ನು ರೂಪಿಸಿತು.

1990ರಿಂದ 2001ರ ರಾಷ್ಟ್ರೀಯ ಸಮ್ಮೇಳನದವರೆಗೆ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಸುಶೀಲಾ ಕ್ರೂರ ರೋಗ ಕ್ಯಾನ್ಸರಿನಿಂದ 2 ವರ್ಷ ಬಳಲಿ ಕೊನೆಉಸಿರೆಳೆದಿದ್ದಾರೆ.

ನೆನಪಾದ ಸುಶೀಲಾ ಗೋಪಾಲನ್

ಮಹಿಳೆಯರ ಚಳುವಳಿ ತನ್ನ ವಿಸ್ತಾರವನ್ನು ಕಂಡುಕೊಳ್ಳುತ್ತಿರುವಾಗಲೇ ಹಲವಾರು ಹಿರಿಯ ಸಂಗಾತಿಗಳನ್ನು ಕಳೆದುಕೊಳ್ಳುತ್ತಿರುವುದು ಸಂಗತಿ. ಗೋದಾವರಿ ಪರುಳೇಕರ್, ವಿಮಲಾರಣದಿವೆ, ಗೀತಾಮುಖರ್ಜಿ ಮುಂತಾದ ಮಹಿಳೆಯರು ಎಡ ಚಳುವಳಿಗಳಲ್ಲಿ ವಿಶೇಷವಾಗಿ ಮಹಿಳಾ ವಿಮೋಚನಾ ಸಮರದ ಹಾದಿಯಲ್ಲಿ ಮೂಡಿಸಿದ ಹೆಜ್ಜೆ ಗುರುತುಗಳು ಅವಿಸ್ಮರಣೀಯ. ಇದೇ ದಾರಿಯಲ್ಲಿ ಕ್ರಮಿಸಿ ತಮ್ಮದೇ ಛಾಪು ಮೂಡಿಸಿ ಅಗಲಿದ ಮತ್ತೊಬ್ಬ ಧೀರೋದಾತ್ತ ಹೋರಾಟಗಾರ್ತಿ ಸುಶೀಲಾ ಗೋಪಾಲನ್.

ಕರ್ನಾಟಕದಲ್ಲಿ ಮಹಿಳಾ ಚಳುವಳಿಯನ್ನು

ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷೆ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯೆ ಕಾಂ। ಸುಶೀಲಾ ಗೋಪಾಲನ್ ನಮ್ಮನ್ನಗಲಿದ್ದಾರೆ. ಡಿಸೆಂಬರ್ 29, 1929ರಲ್ಲಿ ಕೇರಳದ ತ್ರಿಚೂರು ಜಿಲ್ಲೆಯ ಇಂಚುಮುಡಿ ಹಳ್ಳಿಯಲ್ಲಿ ಶ್ರೀಮಂತ ಕುಟುಂಬದಲ್ಲಿ ಜನಿಸಿದ ಸುಶೀಲಾ ಆಯ್ಕೆ ಮಾಡಿಕೊಂಡಿದ್ದು ಹೋರಾಟದ ಬದುಕನ್ನು. ಚಿಕ್ಕವರಿದ್ದಾಗಲೇ ಅವರಿಗೆ ಹೋರಾಟದ ಸ್ಫೂರ್ತಿಯನ್ನು ನೀಡಿದ್ದು ಅವರ ತಾಯಿ. ತಮ್ಮ ಕುಟುಂಬದಲ್ಲಿ ತನಗಾದ ಅನ್ಯಾಯದ ವಿರುದ್ಧ ಸಿಡಿದೆದ್ದು ಮಕ್ಕಳೊಂದಿಗೆ ತನ್ನ ತೌರೂರಿಗೆ ತೆರಳಿದ್ದು ತಾಯಿಯ ಸೋದರ ಕರುಣಾಕರನ್ ಕಮ್ಯುನಿಸ್ಟ್ ನಾಯಕರಾಗಿದ್ದರು. ಅವರ ಪ್ರಭಾವದಿಂದ ಸುಶೀಲಾರ ರಾಜಕೀಯ ಜೀವನ ಒಂದು ರೂಪ ಪಡೆಯಿತೆನ್ನಬಹುದು. ಸ್ವಾತಂತ್ರ ಹೋರಾಟ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳು ಸುಶೀಲಾರ ಬದುಕಿನ ಮೇಲೆ ಅತ್ಯಂತ ಗಾಢ ಪರಿಣಾಮ ವನ್ನು ಬೀರಿದ ಹಿನ್ನೆಲೆಯಲ್ಲಿ ತನ್ನ ವಿದ್ಯಾರ್ಥಿ ದೆಸೆಯಲ್ಲಿಯೇ ಕ್ರಾಂತಿಕಾರಿ ಜೀವನವನ್ನು ಆಯ್ಕೆ ಮಾಡಿಕೊಂಡರು. ಹದಿಹರೆಯ ದಲ್ಲಿಯೇ ನಾಡಿನ ಕಾರ್ಮಿಕರನ್ನು ಸಂಘಟಿಸುವ ಕೆಲಸಕ್ಕೆ ಇಳಿದ ಸುಶೀಲಾ ವಿದ್ಯಾರ್ಥಿಗಳನ್ನು ಸಂಘಟಿಸಿದರೆಂಬ ಕಾರಣಕ್ಕೆ ಕಾಲೇಜಿನಿಂದ ಹೊರಹಾಕಲ್ಪಟ್ಟರು.

ಭೂಗತ ನಾಯಕರೊಂದಿಗೆ ಕೊಂಡಿ

ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ಭೂಗತರಾಗಿದ್ದ ಹಲವಾರು ನಾಯಕರ ಮಧ್ಯೆ ಸಂಪರ್ಕ ಕೊಂಡಿಯಾಗಿ ಕೆಲಸಮಾಡಿದವರು ಸುಶೀಲಾ, ಆ ಸಂದರ್ಭದಲ್ಲಿ ಅವರು ಭೇಟಿಯಾದದ್ದು ಕಾಂ। ಎ.ಕೆ. ಗೋಪಾಲನ್ ರವರನ್ನು 1952ರಲ್ಲಿ ಅವರೊಂದಿಗೆ ಸುಶೀಲಾರ ಮದುವೆಯಾಯಿತು. ತನ್ನ 18ನೇ ವಯಸ್ಸಿನಲ್ಲಿಯೇ ಕಮ್ಯುನಿಸ್ಟ್ ಪಕ್ಷದ ಹಲವಾರು ಅಸಂಘಟಿತ ಕಾರ್ಮಿಕರಿಗೆ, ಅದರಲ್ಲೂ ಮಹಿಳಾ ಕಾರ್ಮಿಕರಿಗೆ ಹಲವು ಸೌಲಭ್ಯಗಳನ್ನು ನೀಡಿತೆಂದರೆ ಅತಿಶಯೋಕ್ತಿಯಲ್ಲ.

ಅವರ ಪ್ರಯತ್ನದಿಂದ ಕೇರಳದಲ್ಲಿ ಮಹಿಳಾ ಆಯೋಗಕ್ಕೆ ಸಂಪುಟ ದರ್ಜೆಸಚಿವರ ಸ್ಥಾನಮಾನ ದೊರಕಿದೆ. ಈ ರೀತಿಯಲ್ಲಿ ವಿವಿಧ ಆಯಾಮಗಳನ್ನು ಹೊಸೆದು ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಸಾಮರ್ಥ್ಯದ ರಾಷ್ಟ್ರೀಯ ಮಟ್ಟದ ನಾಯಕಿ ಅವರು.

ಸಂಘಟನೆಯನ್ನು ಬೆಳೆಸಲು ಕಾರ್ಯಕರ್ತರ ಸರಿಯಾದ ಬೆಳವಣಿಗೆ ಅತ್ಯಗತ್ಯ ಎಂದು ನಂಬಿದ್ದ ಸುಶೀಲಾ ಆ ನಿಟ್ಟಿನಲ್ಲಿ ಸದಾ ಪ್ರಯತ್ನ ನಡೆಸುತ್ತಿದ್ದರು. ಕರ್ನಾಟಕದಲ್ಲಿ ಸಂಘಟನೆ ಹಲವು ಏಳು ಬೀಳುಗಳನ್ನು ಕಂಡಾಗ ಅದಕ್ಕೆ ಸರಿಯಾದ ಮಾರ್ಗದರ್ಶನ ನೀಡಿದವರು ಸುಶೀಲಾ ಅವರ ಮಾರ್ಗದರ್ಶನ, ನಿರ್ದೇಶನಗಳು ಇಂದು ಜನವಾದಿ ರಾಜ್ಯದಲ್ಲಿ ಒಂದು ಹಂತಕ್ಕೆ ಬರಲು ಮುಖ್ಯ ಕಾರಣ. ಕಾರ್ಯಕರ್ತರನ್ನು ಅವರ ಹೆಸರಿನಿಂದ ನೆನಪಿಸಿಕೊಳ್ಳುವ, ಅವರ ಸಮಸ್ಯೆಗಳ ಬಗ್ಗೆ ವ್ಯಕ್ತಿಗತವಾಗಿ ವಿಚಾರಿಸುವ ಹೃದಯಸ್ಪರ್ಶಿ ಗುರುತಿಸಲು ನಮಗೇನಾದರು ಸಾಧ್ಯವಾಗಿದ್ದರೆ ಅದರ ಹಿಂದೆ ಸುಶೀಲಾರವರ ಅಪಾರ ಕೊಡುಗೆಯಿರುವುದನ್ನು ಮರೆಯುವಂತಿಲ್ಲ. ಅವರ ಆಸಕ್ತಿ, ಪ್ರೇರಣೆ, ಸ್ಫೂರ್ತಿಯಿಂದ ಉದಯಿಸಿದ ಕರ್ನಾಟಕದ ಮಹಿಳಾ ಸಂಘಟನೆಯು ಜನರ ನಡುವೆ ಗುರುತಿಸಿ ಕೊಳ್ಳುತ್ತಿರುವ ಹಂತದಲ್ಲೇ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರ ಸಮ್ಮೇಳನ ಬೆಂಗಳೂರಿನಲ್ಲಿ 18ರ ಜೂನ್‌ನಲ್ಲಿ ಜರುಗಿತ್ತು. ಸುಶೀಲಾರವರ ಹೃನ್ಮನಗಳಿಗೆ ಸಂತಸವನ್ನು ತಂದಿತ್ತು. ಅತ್ಯಂತ ಚೇತೋಹಾರಿಯಾಗಿ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ನಲ್ಮೆಯ ಸಂಗಾತಿಗೆ ಅದೇ ಕೊನೆಯ ಸಮ್ಮೇಳನವೆಂದು ನಿರೀಕ್ಷಿಸಲು ಯಾರಿಗೂ ಸಾಧ್ಯವಿರಲಿಲ್ಲ.




ರಾಜ್ಯದ ಮಹಿಳಾ ಕಾರ್ಯಕರ್ತರನ್ನು ಎದೆಗಪ್ಪಿಕೊಂಡು ಭಾವೋದ್ವೇಗ ತುಂಬಿದ್ದ ಆ ಸಂಗಾತಿ ಸಂಘಟನೆಗಾಗಿ ದುಡಿಯುವ ಬದ್ಧತೆಯನ್ನು ಮತ್ತಷ್ಟು ಪ್ರೇರೇಪಿಸಿದ್ದು ಯಾರಿಗೆ ತಾನೆ ನೆನಪಿಲ್ಲ. ದೇಶದುದ್ದಗಲಕ್ಕು ಭಾವನೆಗಳ ಬೀಜ ಬಿತ್ತಿ, ಚಳುವಳಿಗಳ ದಳಗಳನ್ನಾಗಿ ಸಂಗಾತಿಗಳನ್ನು ಮೊಕಳೆಯೊಡೆಸಿ ಅದೆಷ್ಟು ಜನರ ಮಧ್ಯೆ ಕಾಂ। ಸುಶೀಲಾ ಅಮರರಾಗಿಲ್ಲ. ಇವರ ಅಗಲಿಕೆ ಕೇವಲ ಮಹಿಳಾ ಚಳುವಳಿಗಷ್ಟೇ ನಷ್ಟ ಎಂದು ಭಾವಿಸಿದರೆ ಅದೊಂದು ದೊಡ್ಡ ತಪ್ಪು. ಏಕೆಂದರೆ, "ಸಮಾಜದ ವಿಮೋಚನೆಯಾಗದೆ ಮಹಿಳಾ ವಿಮೋಚನೆ ಸಾಧ್ಯವಿಲ್ಲವೆಂಬ" ವೈಚಾರಿಕತೆಯ ಹಿನ್ನೆಲೆಯಲ್ಲಿ ಇಡೀ ದುಡಿಯುವ ಜನರ ವಿಮೋಚನೆಗಾಗಿ ಪಣತೊಟ್ಟು ಕೆಲಸ ಮಾಡಿದವರು ಸುಶೀಲಾ ಬದುಕಿನುದ್ದಕ್ಕೂ ಎಲ್ಲ ಶೋಷಿತರನ್ನು ಪ್ರತಿನಿಧಿಸಿದವರು ಸಂಗಾತಿ

ಅಫಘಾನಿಸ್ತಾನದಲ್ಲಿ ಹೊಸ ಸರ್ಕಾರ-ಹೊಸ ನಿರೀಕ್ಷೆ

ಅಫಘಾನಿಸ್ತಾನದಲ್ಲಿ ಹೊಸ ಸರಕಾರ ಬಂದಿದೆ. ತಾಲಿಬಾನ್ ಸರ್ಕಾರ ಪತನವಾಗಿ ಶಾಂತಿ ಸ್ಥಾಪನೆಯ ನಿರೀಕ್ಷೆ ಇದೆ. ಅಫಘಾನಿಸ್ತಾನದ ಜನತೆಗೆ, ನೆರೆಹೊರೆಯ ಜನತೆ ಇದನ್ನು ಯಾವ ರೀತಿಯಲ್ಲಿ ನೋಡಬಹುದು ಎಂದು ಅರ್ಥಮಾಡಿಕೊಳ್ಳುವುದು ಅಗತ್ಯ.

ಅಫಘಾನಿಸ್ತಾನದಲ್ಲಿ ಆದ ಸರ್ಕಾರದ ಬದಲಾವಣೆ ಹಲವು ಸಕಾರಾತ್ಮಕ ಅಂಶಗಳನ್ನು ಹೊಂದಿದೆ. ಇದು ಅಫಘಾನಿಸ್ತಾನದ ಜನತೆಗೂ, ನೆರೆಹೊರೆಯ ಜನತೆಗೂ, ಶಾಂತಿಪರ ಪ್ರಗತಿ ಬಯಸುವ ವಿಶ್ವ ಜನತೆಗೂ ಸಮಾಧಾನ ತರುವ ಅಂಶಗಳು. ಅಫಘಾನಿಸ್ತಾನದ ಹೊಸ ಮಧ್ಯಂತರ ಸರ್ಕಾರ ಆ ದೇಶದ ಎಲ್ಲಾ ದೇಸಿ ಜನಾಂಗಗಳ ಬೆಂಬಲ ಹೊಂದಿದೆ ಎಂಬುದು ಅತ್ಯಂತ ಮಹತ್ವದ ಅಂಶ. ಮಧ್ಯಂತರ ಸರ್ಕಾರದ ರಚನೆ ಶಾಂತಿಯುತವಾಗಿ ಭಾರಿ ಒಳಜಗಳಗಳಿಲ್ಲದೆ ಆಯಿತು ಎಂಬುದೂ ಸಮಾಧಾನ ತರುವ ಇನ್ನೊಂದು ಅಂಶ. ಇದಲ್ಲದೆ ಅಫಘಾನಿಸ್ತಾನದ ಜನತೆ, ಮಹಿಳೆಯರು ಸೇರಿದಂತೆ ಎಲ್ಲಾ ಪ್ರಮುಖ ಜನವಿಭಾಗಗಳು, ಅಫಘಾನಿಸ್ತಾನದ ಹೊರಗಿರುವ ಅಫಘಾನರು -


ಮಧ್ಯಂತರ ಸರ್ಕಾರದ ನಾಯಕ ಹಮಿದ್ ಕರ್ಜಾಯಿ

ಹೀಗೆ ಈ ಸರ್ಕಾರಕ್ಕೆ ವ್ಯಾಪಕ ಜನ ಬೆಂಬಲವಿದೆ ಎಂಬುದು ಮುಖ್ಯ ಅಂಶ. **ಹೊಸ ಸರ್ಕಾರ ಅಫಘಾನಿಸ್ತಾನ ಪುನಃ ಜಾತ್ಯಾತೀತ ದೇಶ ಆಗುತ್ತದೆ ಎಂದು ಘೋಷಿಸಿರುವುದು ಇನ್ನೊಂದು ಅತ್ಯಂತ ಮಹತ್ವದ ಅಂಶ. ಹೊಸ ಸರ್ಕಾರ ಭಾರತದ ಜತೆ ಉತ್ತಮ ಸಂಬಂಧ ಸ್ಥಾಪಿಸಲು ಬಯಸಿರುವುದೂ ಉತ್ತಮ ಬೆಳವಣಿಗೆ.** ಹೊಸ ಸರ್ಕಾರ 'ಜನ-ಗಣ-ಮನ' ದಂತೆ ಹಲವು ದೇಸಿ-ಜನಾಂಗಗಳು ಧರ್ಮ, ಮತದ ಜನತೆಯ ದೇಶ ಅಫಘಾನಿಸ್ತಾನ ಎಂದು ಹಾಡ್ಯಸುವ ರಾಷ್ಟ್ರಗೀತೆ ರಚಿಸಿದ್ದು, ಅದಕ್ಕೆ ಸಂಗೀತ ಅಳವಡಿಸಲು ಭಾರತದ ಸಹಾಯ ಕೇಳಿರುವುದು ಇದರ ದ್ಯೋತಕ. ಹೊಸ ಸರ್ಕಾರ ಅಲಿಪ್ತ ವಿದೇಶ ನೀತಿ ಸಹ ಅಂಗೀಕರಿಸುವ ಸೂಚನೆ ಇದೆ.

ಅಮೆರಿಕ ಮತ್ತು ಪಾಕಿಸ್ತಾನ ತಾವೇ ಹುಟ್ಟು ಹಾಕಿದ್ದ ತಾಲಿಬಾನ್ ಸರ್ಕಾರವನ್ನು ಪತನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರೂ, ಮಧ್ಯಂತರ ಸರ್ಕಾರದ ರಚನೆಯಲ್ಲಿ ಅವರ ಎಲ್ಲಾ ನಿರೀಕ್ಷೆಗಳು ಈಡೇರದೇ ಹೋದದ್ದು ಪ್ರಮುಖ ಬೆಳವಣಿಗೆ.

ಉತ್ತರ ಮೈತ್ರಿಕೂಟದ ಜತೆ ಅಷ್ಟೇ ಪ್ರಬಲವಾದ ಘಟಕವಾಗಿ ಮಾಜಿ ರಾಜ ಜಾಹಿರ್ ಶಾಹಾ ಇರಬೇಕು ಎಂದು ಅಮೆರಿಕ ಬಯಸಿದ್ದರೆ, ಪಾಕಿಸ್ತಾನ 'ಮಂದಗಾಮಿ' ತಾಲಿಬಾನ್ ಹೆಸರಲ್ಲಿ ತನ್ನ ಬೆಂಬಲಿಗರು ಸಹ ಸರಕಾರದಲ್ಲಿ ಪಾತ್ರವಹಿಸಬೇಕು ಎಂದು ಬಯಸಿತ್ತು. ಹೊಸ ಮಧ್ಯಂತರ ಸರ್ಕಾರ ತಾಲಿಬಾನ್‌ನ ಯಾವುದೇ ಪ್ರತಿನಿಧಿತ್ವ ಇಲ್ಲವೇ, ಜಾಹಿರ್‌ಶಾಹನ ಕೆಲವೇ ಪ್ರತಿನಿಧಿಗಳ ಜತೆ ರಚನೆಯಾಯಿತು.

ಇವೆಲ್ಲ ಸಕಾರಾತ್ಮಕ ಅಂಶಗಳು ಇದ್ದಾಗ್ಯೂ ಅಫಘಾನಿಸ್ತಾನದ ಪರಿಸ್ಥಿತಿ ಚಿಂತಾಜನಕವಾಗಿದೆ. ಅದರ ನಿರ್ನಾಮವಾದ ಆರ್ಥಿಕ, ಮತ್ತು ಮೂಲರಚನೆಗಳನ್ನು ಪುನಃ ನಿರ್ಮಿಸಬೇಕಿದೆ. ಇದಕ್ಕೆ ದೇಶದ ಒಳಗೆ ಐಕ್ಯತೆ ಮತ್ತು ಅಂತರ್‍ರಾಷ್ಟ್ರೀಯ ಬೆಂಬಲ ಬೇಕಾಗಿದೆ. ಆರು ತಿಂಗಳ ನಂತರ ಅಫಘಾನಿಸ್ತಾನದಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳು ನಡೆಯಬೇಕಾಗಿದೆ. ಈ ರಾಜಕೀಯ ಪ್ರಕ್ರಿಯೆಯಿಂದ ಪ್ರತಿನಿಧಿ ಸರ್ಕಾರ ಹೊರಹೊಮ್ಮಬೇಕು. ಅಫಘಾನಿಸ್ತಾನದ ಜನತೆ ಮತ್ತು ವಿಶ್ವದ ಶಾಂತಿಪರ-ಪ್ರಗತಿಪರ ಜನತೆ ಎಚ್ಚರದಿಂದ ಇದ್ದರೆ ಇವೆಲ್ಲ ಆಗಬಹುದು ಎಂಬ ಆಶಾಭಾವನೆ ಈಗಿನ ಬೆಳವಣಿಗೆಗಳಿಂದ ಹೊಮ್ಮಿದೆ.

ಡಿಸೆಂಬರ್ ಧಾಳಿ.... ಸರಕಾರಕ್ಕೀಗ ಅಗ್ನಿಪರೀಕ್ಷೆ

ಪುಟ 5 ರಿಂದ

ಕಕ್ಕಾಬಿಕ್ಕಿಯಾಗಿ ತಾನು ಹೇಳಬೇಕೆಂದಿದ್ದನ್ನೆಲ್ಲಾ ಹೇಳಿದ್ದೇನೆ ಎಂದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು.

ಇವುಗಳಲ್ಲಿ ಅತ್ಯಂತ ಬೇಜವಾಬ್ದಾರಿ ಮಾತೆಂದರೆ 'ಬೆನ್ನಟ್ಟಿ ಹೋಗುವುದು'. ಅಂದರೆ ನಮ್ಮ ಸಶಸ್ತ್ರ ಪಡೆಗಳು ಅವರ ಬೆನ್ನಟ್ಟಿ ಪಾಕ್ ಆಕ್ರಮಿತ ಕಾಶ್ಮೀರದೊಳಗೆ ಪ್ರವೇಶಿಸಿ ಅವರನ್ನು ಹೊರಗೆಳೆಯಲು ಪ್ರಯತ್ನಿಸುವುದು ಮತ್ತು ಅವರ ತರಬೇತಿ ಠಾಣೆಗಳನ್ನು ನಾಶ ಮಾಡುವುದು. ಆಳುವ ಪಕ್ಷದಲ್ಲಿ ಉನ್ನತ ಮುಖಂಡರಿಂದ ಹಿಡಿದು ಕೆಳಗಿನವರೆಗೆ ಎಲ್ಲರೂ ಈ ಮಾತನಾಡಿದ್ದಾರೆ. ಮಾಧ್ಯಮದಲ್ಲಿ ಈ ಬಗ್ಗೆ ತೀವ್ರ ಟೀಕೆ ಮತ್ತು ಸೇನಾಪಡೆಗಳ ಹಿರಿಯ ಅಧಿಕಾರಿಗಳು ಈ ವಿಚಾರವೇ ನಿರರ್ಥಕ ಎಂದ ಮೇಲೆ ಬಿಜೆಪಿ ಮುಖಂಡರು ಈ ಬೇಜವಾಬ್ದಾರಿ ಮಾತುಗಳನ್ನು ಬಿಟ್ಟಿದ್ದಾರೆ. ಸೇನೆಗೆ ಈ ಬಗ್ಗೆ ಚೆನ್ನಾಗಿ ಗೊತ್ತಿರುತ್ತದೆ. ಏಕೆಂದರೆ ರಾಜಕೀಯ ಮುಖಂಡರು ನಿಜವಾಗಿ ಈ ಬಗ್ಗೆ ನಿರ್ಧರಿಸಿದರೆ ಅದನ್ನು ಜಾರಿಗೆ ತರಬೇಕಾದವರು ಸೇನಾ ಪಡೆಗಳೇ ತಾನೆ?

ಅಥವಾ ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿಗಳ ಸಲಹೆಯಿಂದಾಗಿ ಇರಬಹುದೇ? ಅವರ ಸಲಹೆಯೇ 'ಬೆನ್ನಟ್ಟಿ' ಹೋಗುವ ವಿಚಾರವನ್ನು ಕೈ ಬಿಡುವಲ್ಲಿ ನಿರ್ಣಾಯಕವಾಯಿತೇ?

ಭಯೋತ್ಪಾದನೆಯ ವಿರುದ್ಧ ಕಟ್ಟುನಿಟ್ಟಿನ ಕ್ರಮ ಬೇಡ ಎಂದು ಯಾರೂ ಹೇಳುತ್ತಿಲ್ಲ. ಆದರೆ 'ಬೆನ್ನಟ್ಟಿ' ಹೋಗುವುದರಿಂದ ಅದು ಖಂಡಿತಾ ಸಾಧ್ಯವಿಲ್ಲ. ಮಿಲಿಟರಿ ದುಸ್ಸಾಹಸದಿಂದ ಭಯೋತ್ಪಾದನಾ ಸಂಘಟನೆಗಳನ್ನು ಮುಗಿಸಿ ಬಿಡುವುದು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಈ ಮೊದಲೇ ಎಚ್ಚರಿಸಿದೆ. **ಯಾವುದೇ ಮಿಲಿಟರಿ ಕಾರ್ಯಾಚರಣೆ ಇಡೀ ಉಪಖಂಡದಲ್ಲಿ ಪೂರ್ಣ ಪ್ರಮಾಣದ ಯುದ್ಧದ ಕಿಡಿ ಹಚ್ಚುತ್ತದೆ.** ಭಾರತ ಮತ್ತು ಪಾಕಿಸ್ತಾನ ಎರಡೂ ಈಗ ಪರಮಾಣು ಶಕ್ತಿಗಳು ಎಂಬುದನ್ನು ನೆನಪಿಡಬೇಕು. [illegible] ಪರಮಾಣು ಯುದ್ಧದತ್ತ ಸಾಗುವುದಿಲ್ಲ ಎಂದು ಹೇಳುವಂತಿಲ್ಲ.

ವಿವೇಕಯುತ ದಾರಿ

ಬೆನ್ನಟ್ಟಿ ಹೋಗುವ ಬಗ್ಗೆ ಮಾತಾಡುವ ಬದಲು ಅವರು **ಭಯೋತ್ಪಾದಕರು ಮತ್ತು ಅವರ ಬೆಂಬಲಿಗರ ಬಗ್ಗೆ ಎಲ್ಲಾ ಸಾಕ್ಷ್ಯಾಧಾರಗಳನ್ನು ಅಮೆರಿಕಾವೂ ಸೇರಿದಂತೆ ವಿಶ್ವದ ಮುಂದೆ, ವಿಶ್ವಸಂಸ್ಥೆಯ ಮುಂದೆ ಇಡಬಹುದು.** ಈ ಮೂಲಕ ಪಾಕಿಸ್ತಾನ ತನ್ನ ಮಣ್ಣಿನಿಂದ ಕಾರ್ಯ ನಿರ್ವಹಿಸುವ, ತಾನು ಹಣ ಸಹಾಯ ನೀಡುವ ಭಯೋತ್ಪಾದಕ ಸಂಘಟನೆಗಳ ವಿರುದ್ಧ ಕಾರ್ಯಾಚರಣೆ ಮಾಡುವಂತೆ ಒತ್ತಡ ತರಲು ಸಾಧ್ಯ. ಈಗಿನ ಸಂದರ್ಭದಲ್ಲಿ ದೇಶದ ಹಿತಾಸಕ್ತಿ ಕಾಪಾಡುವ ವಿವೇಕಯುತ ದಾರಿ ಇದೊಂದೇ. ಈ ಮೂಲಕ ವಿಶ್ವ ಸಮುದಾಯಕ್ಕೆ ನಮ್ಮ ನ್ಯಾಯಯುತ ನಿಲುವಿನ ಬಗ್ಗೆ ಮನವರಿಕೆ ಮೂಡಿಸಬಹುದು. ಆದರೆ ಇಂತಹ ಒಂದು ದಾರಿ ಬಿಜೆಪಿಗೆ ತನ್ನ ಸಂಕುಚಿತ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಭಾವೋದ್ರೇಕ ಹರಡಿಸಲು ಅವಕಾಶ ನೀಡುವುದಿಲ್ಲ ಎಂಬುದು ಬೇರೆ ಮಾತು.

ಸರಕಾರದ ಹೀನಾಯ ವಿಫಲತೆ

ಭಾರತ ಇಂದು ಜಮ್ಮು-ಕಾಶ್ಮೀರದಲ್ಲಿ ಮತ್ತು ಈಶಾನ್ಯ ಭಾಗದಲ್ಲಿ ತೀವ್ರ ಭಯೋತ್ಪಾದಕ ಧಾಳಿಗಳನ್ನು ಎದುರಿಸುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ. ನಮ್ಮ ಭದ್ರತಾ ಸಿಬ್ಬಂದಿಯ ಅಮೂಲ್ಯ ಜೀವಗಳನ್ನು ಕಳಕೊಂಡಿದ್ದೇವೆ. ಮುಗ್ಧ ನಾಗರಿಕರು ಕೊಲ್ಲಲ್ಪಟ್ಟಿದ್ದಾರೆ. ಮಕ್ಕಳು ಅನಾಥರಾಗಿದ್ದಾರೆ. ಮಹಿಳೆಯರು ವಿಧವೆಯರಾಗಿದ್ದಾರೆ. ನಮ್ಮ ಜನತೆ ಹೇಳಲಾರದ ಸಂಕಟ ಅನುಭವಿಸುತ್ತಿದ್ದಾರೆ.

ಅಮೆರಿಕದ ಅಫಘಾನ್ ಯುದ್ಧದ ನಂತರ ಭಯೋತ್ಪಾದನೆಯ ಬೆದರಿಕೆ ಹೆಚ್ಚಿದೆಯೆಂಬುದೂ ನಿಜ. ಕಾಬೂಲ್ ಉತ್ತರೀಯ ಕೂಟದ ವಶವಾದ ಮೇಲೆ ಸದ್ಯಕ್ಕಂತೂ ಜನರಲ್ ಮುಷರ್ರಫ್ ಆಟ ಸೋತಿದೆ. ಆಂತರಿಕವಾಗಿ ಮೂಲಭೂತವಾದಿಗಳ ಸಿಟ್ಟನು ಆತ ಎದುರಿಸುತಿದಾರೆ. ಆದರಿಂದ ತನ್ನ ಏನಾದರೂ ಹತಾಶ ಹೆಜ್ಜೆಯಿಟ್ಟರೆ ಆಶ್ಚರ್ಯವಿಲ್ಲ. ಅತ್ತ ತಮ್ಮದೇ ದೇಶದಿಂದ ಓಡಿ ಬಂದಿರುವ ತಾಲಿಬಾನ್ ಸೈನಿಕರು ಸದ್ಯ 'ನಿರುದ್ಯೋಗಿ'ಗಳು. ಅವರನ್ನು ಜಮ್ಮು-ಕಾಶ್ಮೀರದಲ್ಲಿ ಗಲಭೆ ಸೃಷ್ಟಿಸಲು ಬಳಸಿಕೊಳ್ಳಬಹುದು. ಆದ್ದರಿಂದ ಭಾರತಕ್ಕೆ ಇದೊಂದು ಕಷ್ಟದ ಸಮಯ. ಯಾವುದೇ ಆತುರದ ಕ್ರಮ ಕೈಗೊಂಡು ವಿಶ್ವದಲ್ಲಿ ನಾವು ಏಕಾಂಗಿಯಾಗದಂತೆ ಸರಕಾರ ಎಚ್ಚರ ವಹಿಸಬೇಕು.

ಆದೇ ವೇಳೆ ಸರಕಾರ ದೃಢ ರಾಜಕೀಯ ಕ್ರಮಗಳ ಮೂಲಕ ಭಯೋತ್ಪಾದನೆಯ, ಉಗ್ರಗಾಮಿತನದ ಮೂಲ ಕಾರಣಗಳನ್ನು ಎದುರಿಸುವಲ್ಲಿ, ತೊಂದರೆಗೊಳಗಾದ ಜನಗಳ ವಿಶ್ವಾಸ ಗೆಲ್ಲುವಲ್ಲಿ ಮತ್ತು ರಾಷ್ಟ್ರ-ವಿರೋಧಿ ಶಕ್ತಿಗಳನ್ನು ದೂರತಳ್ಳುವಲ್ಲಿ ಸಂಪೂರ್ಣ ವಿಫಲಗೊಂಡಿದೆ. ಹೀಗೆ ಇಂದಿನ ಕಾಂಗ್ರೆಸ್ ಸರಕಾರ ಮಾಡಿದ ತಪ್ಪನ್ನೇ ಇಂದು ಪುನರಾವರ್ತಿಸುತ್ತಿದೆ. ವಿಶೇಷವಾಗಿ ಉತ್ತರ ಪ್ರದೇಶದ ಚುನಾವಣೆಗಳ ಹಿನ್ನೆಲೆಯಲ್ಲಿ ಆಳುವ ಪಕ್ಷ ಭಾವೋದ್ರೇಕ ಎಬ್ಬಿಸಿ, ಅಲ್ಪಸಂಖ್ಯಾತರ ಮೇಲೆ ಗುರಿಯಿಡಲು ಪ್ರಯತ್ನಿಸುತ್ತಿದೆ. ಡಿಸೆಂಬರ್ 13 ರ ಧಾಳಿಗಳ ನಂತರವೂ ಬಿಜೆಪಿ ಅದನ್ನೇ ಮಾಡುತ್ತಿದೆ.

POTO ಇದ್ದಾಗಲೇ ಧಾಳಿ

ಈ ಆಟದ ಭಾಗವಾಗಿಯೇ ಬಿಜೆಪಿ POTO (ಭಯೋತ್ಪಾದನಾ ತಡೆ ಸುಗ್ರೀವಾಜ್ಞೆ)ಗೆ ಅನುಕೂಲವಾದ ವಾತಾವರಣ ನಿರ್ಮಿಸಿ ಅದಕ್ಕೆ ಸಂಸತ್ತಿನ ಅಂಗೀಕಾರ ಪಡೆಯಲು ಪ್ರಯತ್ನಿಸಿದೆ. ಸಂಸತ್ತು ಈ ಸುಗ್ರೀವಾಜ್ಞೆಗೆ ಅಂಗೀಕಾರ ನೀಡಿದ್ದರೆ ಈ ಧಾಳಿ ನಡೆಯುತ್ತಿರಲಿಲ್ಲ ಎಂದು ಆಂಧ್ರ ಪ್ರದೇಶದ ಬಿಜೆಪಿಯ ಒಬ್ಬ ಸಂಸತ್ ಸದಸ್ಯ ಜಿತೇಂದ್ರ ರೆಡ್ಡಿ ಹೇಳಿರುವುದಾಗಿ ವರದಿಯಾಗಿದೆ. POTO ಈಗಾಗಲೇ ಕಳೆದೆರಡು ತಿಂಗಳಿಂದ ಜಾರಿಯಲ್ಲಿದೆ ಎಂಬ ವಿಷಯ ಆ ಮನುಷ್ಯನಿಗೆ ತಿಳಿದಿಲ್ಲ. ಸರಳ ಸಂಗತಿಯೆಂದರೆ POTO ಇದ್ದರೂ ಡಿಸೆಂಬರ್ 13 ರ ಧಾಳಿ ನಡೆದಿದೆ. ಆದ್ದರಿಂದ ಇದನ್ನು ಕಾನೂನಾಗಿ ಮಾಡಿದರೆ ಭಯೋತ್ಪಾದಕ ಧಾಳಿಗಳನ್ನು ತಡೆಯಬಹುದು ಎಂಬುದು ಭೋಳೆತನ. ಹಿಂದಿನ ಟಾಡಾ ಭಯೋತ್ಪಾದಕರನ್ನು

ಮೂರ್ಖರಾಗಿಸಲು ಪ್ರಯತ್ನಿಸುತ್ತಿದ್ದಾರೆ?

ಡಿಸೆಂಬರ್ 18 ರಂದು ಲೋಕಸಭೆಯಲ್ಲಿ ಹೇಳಿಕೆ ನೀಡುತ್ತಾ ಅಡ್ವಾಣಿ ತಮ್ಮ ಸರಕಾರ ಧಾಳಿಯನ್ನು ವಿಫಲಗೊಳಿಸಿತು ಎಂದು ಮತ್ತೊಮ್ಮೆ ಬೆನ್ನು ತಟ್ಟಿಕೊಂಡರು. ಒಂದು ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ, ಆತ್ಮವಿಶ್ವಾಸಪೂರ್ಣ ಹಾಗೂ ನಿರಂತರ ಪ್ರಗತಿ ಸಾಧಿಸುತ್ತಿರುವ ಭಾರತದ, ಸಮಯ ಹೋದಂತೆ ಅಂತರ್‍ರಾಷ್ಟ್ರೀಯ ಸಮುದಾಯದಲ್ಲಿ ತನ್ನ ಸ್ಥಾನಮಾನವನ್ನು ನಿಚ್ಚಳವಾಗಿ ಎತ್ತರಿಸಿಕೊಳ್ಳುತ್ತಿರುವ ಭಾರತದ ವಾಸ್ತವತೆಯನ್ನು ಒಪ್ಪಿಕೊಳ್ಳಲು ಪಾಕಿಸ್ತಾನಕ್ಕೆ ಸಾಧ್ಯವಾಗುತ್ತಿಲ್ಲ ಎಂದರು. **ಹೀಗೆ ಸದಾ ಧರ್ಮನಿರಪೇಕ್ಷತೆಯ ವಿರುದ್ಧ ಎಗರಾಡುವ ಒಂದು ಪಕ್ಷದ ಪ್ರತಿನಿಧಿ ಈಗ ಭಾರತೀಯ ಧರ್ಮನಿರಪೇಕ್ಷತೆಯ ಕೀರ್ತಿಯನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ;** ಪ್ರಜಾಪ್ರಭುತ್ವ-ವಿರೋಧಿ ಕೃತ್ಯಗಳಿಗೆ ಕುಪ್ರಸಿದ್ಧರಾದವರು ಪ್ರಜಾಪ್ರಭುತ್ವದ ಮಾತಾಡುತ್ತಿದ್ದಾರೆ; ಸರಕಾರ ಅದು ತನ್ನ ಆಳ್ವಿಕೆಯಲ್ಲಿ 'ನಿಚ್ಚಳವಾಗಿ ಎತ್ತರಿಸುತ್ತದೆ' ಎಂದು ಹೇಳಿಕೊಳ್ಳುತ್ತಿದೆ!

ಭಯೋತ್ಪಾದನೆಗೆ ದೃಢ ವಿರೋಧ. ಆದರೆ...

ಅದೇನೇ ಇರಲಿ, ಮುಖ್ಯ ಅಂಶ ಬೇರೆಯೇ ಆಗಿದೆ. ಸಂಸತ್ತಿನಲ್ಲಿ ಚರ್ಚೆಗಳು ತೋರಿಸಿದಂತೆ ಇಡೀ ದೇಶ ಭಯೋತ್ಪಾದನೆ ಮತ್ತು ಉಗ್ರಗಾಮಿತ್ವವನ್ನು ದೃಢವಾಗಿ ವಿರೋಧಿಸುತ್ತದೆ. ಆದರೆ ಅದು ಯಾವುದೇ ಆತಂಕದ ಕ್ರಮದ ಪರವಾಗಿ ಅಲ್ಲ. ಸರಕಾರ ಭಯೋತ್ಪಾದನೆಯ ಮೂಲಾಧಾರವನ್ನು ಎದುರಿಸಲು, ನಮ್ಮ ಐಕ್ಯತೆ ಮತ್ತು ಸಮಗ್ರತೆ ಹಾಗೂ ದಕ್ಷಿಣ ಏಷ್ಯಾದ ಶಾಂತಿ ಮತ್ತು ಪ್ರಗತಿಗೆ ಬೆದರಿಕೆಯೊಡ್ಡಿರುವ ಎಲ್ಲಾ ಪೀಡೆಯನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡಲು ದೃಢ ಕ್ರಮಗಳನ್ನು ತಗೊಂಡರೆ ಅದಕ್ಕೆ ಯಾರದ್ದೂ ಆಕ್ಷೇಪವಿಲ್ಲ. ಆದರೆ ಹೀಗೆ ಮಾಡಲು ಸರಕಾರ ನಿಷ್ಪಕ್ಷಪಾತದಿಂದ ಸಂಕುಚಿತ ನಿಲುವು ಬಿಟ್ಟು ವರ್ತಿಸಬೇಕು. ಡಿಸೆಂಬರ್ 13 ರ ನಂತರದ ಸನ್ನಿವೇಶ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಪ್ರಾಮಾಣಿಕತೆಯನ್ನು ಪರೀಕ್ಷೆಗೊಡ್ಡಿದೆ. ಈ ಪರೀಕ್ಷೆಯಲ್ಲಿ ಸೋತರೆ ಅದು ತನ್ನನ್ನು ತಾನೇ ದೂಷಿಸಿಕೊಳ್ಳಬೇಕಾಗುತ್ತದೆ.

ಐಎಂಎಫ್ ಉಪದೇಶಗಳಿಗೆ ಇನ್ನೊಂದು ಬಲಿ

ಅರ್ಜೆಂಟಿನಾ ಆರ್ಥಿಕ ಕುಸಿತ-ಅಧ್ಯಕ್ಷ ಪರಾರಿ

ಇತ್ತೀಚಿನವರೆಗೆ ಐಎಂಎಫ್ ನಿಂದ 'ವಿಕಾಸಶೀಲ ದೇಶಗಳಿಗೆ ಮಾಡೆಲ್' ಎಂದು ಹೊಗಳಿಸಿಕೊಂಡಿದ್ದ ಅರ್ಜೆಂಟಿನಾದ ಆರ್ಥಿಕತೆ ಕುಸಿದಿದೆ. ಎರಡು ದಿನಗಳ ಬೀದಿ ಕಾಳಗದ ನಂತರ ಅಧ್ಯಕ್ಷ ತನ್ನ ಪಟ್ಟ ಬಿಟ್ಟು ಓಡಿಹೋಗಬೇಕಾಗಿದೆ. ಅರ್ಜೆಂಟಿನಾದ ವಿದೇಶಿ ಸಾಲದ ಭಾರ ಎಷ್ಟು ಹೆಚ್ಚಾಗಿದೆಯೆಂದರೆ, ಅದು ಸಾಲ ಪಾವತಿ ನಿಲ್ಲಿಸುವ ಘೋಷಣೆ ಮಾಡಬೇಕಾಗಿ ಬಂದಿದೆ. ಇವೆಲ್ಲಾ 80 ರದಶಕದಿಂದಲೂ, ಇನ್ನೂ ಹೆಚ್ಚಾಗಿ ಇತ್ತೀಚಿಗಿನ ವರ್ಷಗಳಲ್ಲಿ ಐಎಂಎಫ್ ಉಪದೇಶದಂತೆ ಆರ್ಥಿಕ ನೀತಿಗಳನ್ನು ಜಾರಿ ಮಾಡಿದ್ದರ ಫಲ. ಅರ್ಜೆಂಟಿನಾದ ದುರ್ಗತಿ ಎಲ್ಲಾ ವಿಕಾಸಶೀಲ ದೇಶಗಳಿಗೆ ಪಾಠವಾಗಬೇಕು. ಸಾಮ್ರಾಜ್ಯಶಾಹಿ ಜಾಗತೀಕರಣದ ಕುರುಡು ಭಕ್ತರ ಕಣ್ಣು ತೆರೆಸಬೇಕು.

ಕಳೆದ ವಾರ ಅರ್ಜೆಂಟಿನಾದ ಆರ್ಥಿಕ ಕುಸಿದಿದೆ. ರಾಜಧಾನಿ ಬ್ಯೂನಸ್ ಏರಿಸ್‌ನಲ್ಲಿ ಎರಡು ದಿನಗಳ ಕಾಲ ನಡೆದ ಪ್ರತಿಭಟನೆ, ಹಿಂಸಾಚಾರ, ಲೂಟಿಗಳಲ್ಲಿ 26 ಜನ ಸತ್ತರು. ನೂರಾರು ಜನ ಗಾಯಗೊಂಡರು. ಸಾರ್ವಜನಿಕ ಪ್ರತಿಭಟನೆಯ ತೀವ್ರತೆ ಕಂಡು ಅಧ್ಯಕ್ಷ ಫರ್ನಾಂಡೋ ಡಿ ಲಾರುವಾ ರಾಜೀನಾಮೆ ಕೊಟ್ಟು, ಅಧ್ಯಕ್ಷೀಯ ಅರಮನೆಯ ಛಾವಣಿಯಿಂದ ಹೆಲಿಕಾಪ್ಟರ್‌ನಲ್ಲಿ ಓಡಿ ಹೋದ. ಮೂರು ತಿಂಗಳ ಮಟ್ಟಿಗೆ ಹಂಗಾಮಿ ಅಧ್ಯಕ್ಷರೊಬ್ಬನನ್ನು ನೇಮಿಸಲಾಗಿದೆ. ಮೂರು ತಿಂಗಳೊಳಗೆ ಇನ್ನೊಬ್ಬ ಅಧ್ಯಕ್ಷರನ್ನು ದೇಶ ಆರಿಸಬೇಕು.

ಕಳೆದ ನಾಲ್ಕು ವರ್ಷಗಳಿಂದ ಐಎಂಎಫ್-ನಿರ್ದೇಶಿತ ನೀತಿಗಳ ಫಲವಾಗಿ ಆರ್ಥಿಕ ಹಿಂಜರಿತ ಅನುಭವಿಸುತ್ತಿದೆ. ಅರ್ಜೆಂಟಿನಾದ ಸಾಲ 135 ಶತಕೋಟಿ ಡಾಲರುಗಳಿಗೆ ಏರಿದೆ. ಇದು ಅರ್ಜೆಂಟಿನಾ ಐಎಂಎಫ್ ಸಾಲ ಮೊದಲಬಾರಿಗೆ ತೆಗೆದುಕೊಂಡಾಗ (1982 ರಲ್ಲಿ) ಇದ್ದದ್ದಕ್ಕಿಂತ ಸುಮಾರು ಮೂರು ಪಟ್ಟು. ನಿರುದ್ಯೋಗ ಶೇಕಡಾ 18 ರಷ್ಟು ಆಗಿದೆ. 90 ರ ದಶಕದ ಆರಂಭದಲ್ಲೇ ಹೆಚ್ಚಿನ ಸಾರ್ವಜನಿಕ ಸೇವೆಗಳನ್ನು (ಶಿಕ್ಷಣ, ಆರೋಗ್ಯ, ಸಾಗಾಣಿಕೆ, ವಿದ್ಯುತ್ ಇತ್ಯಾದಿ) ಕಡಿತಗೊಳಿಸಿ ಖಾಸಗೀಕರಿಸಲಾಗಿತ್ತು. ಇದ್ದಬದ್ದ ಸೇವೆಗಳು ಬಡವರಿಗೆ ನಿಲುಕಲಾರದಷ್ಟು ದುಬಾರಿಯಾಗಿದೆ. ಸರಾಸರಿ ನಿಜವೇತನ (ಹಣದುಬ್ಬರ ಗಣನೆಗೆ ತೆಗೆದುಕೊಂಡರೆ) 1974 ರ ಮಟ್ಟದ ಅರ್ಧಕ್ಕೆ ಕುಸಿದಿದೆ.

**ವಿದೇಶಿ ಸಾಲ ನುಂಗಿದ
ರಿಸರ್ವ್ ಬ್ಯಾಂಕ್ ಗವರ್ನರ್**

ಐಎಂಎಫ್ ನಿರ್ದೇಶಿತ ನೀತಿಗಳು ಹಿಂದೆ ಉತ್ತಮ ಬೆಳವಣಿಗೆ ಕಂಡಿದ್ದ, ಜೀವನ ಮಟ್ಟ ಹೊಂದಿದ್ದ ಅರ್ಜೆಂಟಿನಾವನ್ನು ಈ ದುಸ್ಥಿತಿಗೆ ತಂದಿದೆ. ಅರ್ಜೆಂಟಿನಾ ಭಾರತದಷ್ಟು ವಿಸ್ತೀರ್ಣ, ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ಕೃಷಿಭೂಮಿ, ತೈಲ ನಿಕ್ಷೇಪ ಮತ್ತು ಕಡಿಮೆ ಜನಸಂಖ್ಯೆ ಸಾಂದ್ರತೆ (ಭಾರತದ ವಿಸ್ತೀರ್ಣಕ್ಕೆ 3.6 ಕೋಟಿ ಜನ) ಅರ್ಜೆಂಟಿನಾದ ಅವನತಿ 1978 ರಲ್ಲಿ ಆರಂಭವಾಯಿತು. 1978-1983 ರ ಅವಧಿಯಲ್ಲಿ ಆಳಿದ ಕುಖ್ಯಾತ ಮಿಲಿಟರಿ ಸರ್ವಾಧಿಕಾರಿ ಜನರಲ್ ವಿಡೆಲಾರ ಸರ್ಕಾರ ಕೇವಲ ಐದು ವರ್ಷಗಳಲ್ಲಿ ದೇಶದ ವಿದೇಶಿ ಸಾಲವನ್ನು 8 ಶತಕೋಟಿ ಡಾಲರಿನಿಂದ 43 ಶತಕೋಟಿ ಡಾಲರಿಗೆ ಏರಿಸಿತ್ತು. ಈ ಭಾರಿ ಸಾಲ ದೇಶದ ಬೆಳವಣಿಗೆ ಚಟುವಟಿಕೆಗಳಿಗೆ ಹೋಗುವ ಬದಲು ನೇರವಾಗಿ ವಿದೇಶಿ ಬ್ಯಾಂಕ್‌ಗಳಿಗೆ ಅರ್ಜೆಂಟಿನಾದ ಹಲವು ಪ್ರತಿಷ್ಠಿತ ರಾಜಕೀಯ ಮತ್ತು ಆರ್ಥಿಕ ನಾಯಕರುಗಳ ಕಂಪನಿಗಳ ಹೆಸರಲ್ಲಿ ಹೋಯಿತು. ಈ ಸಾಲಕ್ಕೆ ಅರ್ಜೆಂಟಿನಾ ಸರ್ಕಾರ ಗ್ಯಾರಂಟಿ ಕೊಟ್ಟಿತ್ತು. ಈ ಗೋಲ್‌ಮಾಲ್‌ಗೆ ಆಗಿನ ಜನರಲ್ ಉಡೆಲ್ ಸರ್ಕಾರವಲ್ಲದೆ, ಆಗಿನ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿದ್ದ ಡೊಮಿಂಗೊ ಕವಾಲೋ ನೇರ ಜವಾಬ್ದಾರರು ಎಂದು ಆಮೇಲೆ ಈ ಬಗ್ಗೆ ತನಿಖೆ ನಡೆಸಿದ ಕಮಿಷನ್ ತನ್ನ ವರದಿಯಲ್ಲಿ ಹೇಳಿದೆ.

1982 ರಲ್ಲಿ ವಿದೇಶಿ ಸಾಲದ ಬಿಕ್ಕಟ್ಟು ತೀವ್ರವಾದಾಗ ಅರ್ಜೆಂಟಿನಾ ಐಎಂಎಫ್ ಸಾಲದ ಮೊರೆ ಹೊಕ್ಕಿತು. ಆಗಿನಿಂದ ಅರ್ಜೆಂಟಿನಾ ಸತತವಾಗಿ ಐಎಂಎಫ್ ನಿರ್ದೇಶಿತ ನೀತಿಗಳನ್ನು ಪಾಲಿಸುತ್ತಾ ದುಸ್ಥಿತಿಗೆ ಇಳಿಯುತ್ತಾ ಬಂದಿವೆ. 1991-95 ರ ಅವಧಿಯಲ್ಲೇ ಅರ್ಜೆಂಟಿನಾದ ಹಲವು ಸಾರ್ವಜನಿಕ ಆಸ್ತಿಗಳನ್ನು ಖಾಸಗೀಕರಿಸಿ, ಹೆಚ್ಚಿನ ಸಾರ್ವಜನಿಕ ಸೇವೆಗಳನ್ನು ಕಡಿತಗೊಳಿಸಲಾಯಿತು. ಈ ಅವಧಿಯಲ್ಲಿ ಇನ್ನೊಬ್ಬ ಕುಖ್ಯಾತ ಅಧ್ಯಕ್ಷ ಕಾರ್ಲೋಸ್ ಮೆನೆಮ್ ಅಧಿಕಾರದಲ್ಲಿದ್ದ. ಆತ ಹಾಗೂ ಇತರ ನಾಲ್ಕು ಮಂತ್ರಿಗಳ ಅಂತರ್ರಾಷ್ಟ್ರೀಯ ಶಸ್ತ್ರಾಸ್ತ್ರ ಕಳ್ಳ ಸಾಗಾಣಿಕೆಯ ಗೋಲ್‌ಮಾಲ್ ವ್ಯವಹಾರದಲ್ಲಿ ಆಪಾದಿತರಾಗಿದ್ದು ಜೈಲಿನಲ್ಲಿದ್ದರು ಇತ್ತೀಚಿನವರೆಗೆ.. ಮೆನೆಮ್‌ನ ಆರ್ಥಿಕ ಮಂತ್ರಿಯಾಗಿದ್ದವರನ್ನು ಮಾಜಿ ರಿಸರ್ವ್ ಬ್ಯಾಂಕ್ ಗವರ್ನರ್ ಡೊಮಿಂಗೊ ಕವಾಲೊ!

ಕೈಕೊಟ್ಟ ಹಣಕಾಸು ಬೋರ್ಡು ಪದ್ಧತಿ

ಕಳೆದ ಒಂದು ದಶಕದಿಂದ ಐಎಂಎಫ್ ಒತ್ತಡದಿಂದ ಸರ್ಕಾರ ಜಾರಿಗೆ ತಂದ ಹಣಕಾಸು ಬೋರ್ಡು ಪದ್ಧತಿ ಈಗಿನ ಬಿಕ್ಕಟ್ಟಿಗೆ ನೇರ ಕಾರಣ ಎನ್ನಲಾಗಿದೆ. ಈ ಪದ್ಧತಿ ಪ್ರಕಾರ ಪೆಸೊ ಮತ್ತು ಡಾಲರ್ ವಿನಿಮಯ ದರವನ್ನು ನಿಗದಿಗೊಳಿಸಲಾಗಿತ್ತು. ಇದು ಹಣದುಬ್ಬರ ನಿಯಂತ್ರಣಕ್ಕೆ ಅಗತ್ಯ ಎಂದು ಹೇಳಲಾಗಿತ್ತು. ಆದರೆ ಈ ಪದ್ಧತಿಯನ್ನು ಜಾರಿಗೆ ತರಲು ಸಾರ್ವಜನಿಕ ವೆಚ್ಚದಲ್ಲಿ ಭಾರಿ ಕಡಿತ ಮಾಡಲಾಯಿತು. ಇದರ ಪರಿಣಾಮವಾಗಿ ಅರ್ಜೆಂಟಿನಾ ರಫ್ತು ಕಡಿಮೆಯಾಯಿತು. ವಿದೇಶಿ ಸಾಲ ಏರಿತು. ಜೀವನಮಟ್ಟ ಕುಸಿದದ್ದರಿಂದ ಜನ ದಂಗೆ ಎದ್ದರು. ಅರ್ಜೆಂಟಿನಾ ತನ್ನ ಸಾಲ ಪಾವತಿ ನಿಲ್ಲಿಸಬೇಕಾಗುತ್ತದೆ ಎಂಬ ಸ್ಥಿತಿಗೆ ಬಂತು. ಈ ಸ್ಥಿತಿಯ ಕಾರಣ ಐಎಂಎಫ್ ತನ್ನ ಸಾಲದ ಕಂತನ್ನು ನಿಲ್ಲಿಸಿತು. ಬಿಕ್ಕಟ್ಟಿನ ತತ್‌ಕ್ಷಣದ ಕಾರಣ ಐಎಂಎಫ್‌ನ ಈ ಕ್ರಮ. ಈಗ ಐಎಂಎಫ್ (ತನ್ನದೇ 'ಮಾದರಿ' ಹಣಕಾಸು ಬೋರ್ಡು ಪದ್ಧತಿ ಕೈ ಬಿಟ್ಟು) ಅರ್ಜೆಂಟಿನಾ ತನ್ನ 'ಪೆಸೊ'ವನ್ನು ಅಪಮೌಲ್ಯ ಮಾಡಬೇಕು ಎಂದು ಒತ್ತಾಯಿಸುತ್ತಿದೆ.

ಅರ್ಜೆಂಟಿನಾದ ಈ ಬಿಕ್ಕಟ್ಟು ಇನ್ನೂ ಲ್ಯಾಟಿನ್ ಅಮೆರಿಕಾದ ಇತರ ದೇಶಗಳ ಆರ್ಥಿಕವನ್ನು ತಟ್ಟಿಲ್ಲ. ಅರ್ಜೆಂಟಿನಾದ ಸಾಲ ಪಾವತಿ ನಿಲುಗಡೆಯ ನೀತಿಯನ್ನು ಸಾಮ್ರಾಜ್ಯಶಾಹಿ ಆರ್ಥಿಕದ ಸುದ್ದಿ ಮಾಧ್ಯಮಗಳು ಹೆಚ್ಚು ಪ್ರಚಾರ ನೀಡದೆ ಮುಚ್ಚಿ ಹಾಕಿವೆ. ಅರ್ಜೆಂಟಿನಾ ಬಿಕ್ಕಟ್ಟಿನ ಸುದ್ದಿ ಎರಡು-ಮೂರು ದಿನಗಳ ನಂತರ ಈ ಸುದ್ದಿ ಮಾಧ್ಯಮಗಳಿಂದ ಮಾಯವಾಗಿದೆ. ಸಾಮ್ರಾಜ್ಯಶಾಹಿಗೆ ಅರ್ಜೆಂಟಿನಾ ಕೆಟ್ಟ ಸುದ್ದಿ. ಆದರೆ ಅರ್ಜೆಂಟಿನಾದ ತೀವ್ರ ಆರ್ಥಿಕ-ರಾಜಕೀಯ ಬಿಕ್ಕಟ್ಟು ಲ್ಯಾಟಿನ್ ಅಮೆರಿಕಾದ ಇತರ ದೇಶಗಳ ಆರ್ಥಿಕವನ್ನು ತಟ್ಟದೆ ಹೋಗುವುದಿಲ್ಲ.

ಅರ್ಜೆಂಟಿನಾದ ಈ ಆರ್ಥಿಕ ದುಸ್ಥಿತಿ-ಬಿಕ್ಕಟ್ಟು ಎಲ್ಲಾ ವಿಕಾಸಶೀಲ ದೇಶಗಳಿಗೆ ಐಎಂಎಫ್‌ನ ನೀತಿಗಳನ್ನು ಕಣ್ಣುಮುಚ್ಚಿ ಜಾರಿಗೆ ತರುವುದರ ಪರಿಣಾಮ ತೋರಿಸುವ ಪಾಠ. ಇನ್ನಾದರೂ ನಮ್ಮ ದೇಶದ ಸಾಮ್ರಾಜ್ಯಶಾಹಿ ಜಾಗತೀಕರಣದ ಕುರುಡುಭಕ್ತರು ತಮ್ಮ ಕಣ್ಣು ತೆರೆಯಬೇಕು.

ಪ್ಯಾಲಿಸ್ಟೇನಿಯರ ಮೇಲೆ ಬರ್ಬರ ಯುದ್ಧ

ಪ್ಯಾಲಿಸ್ಟೇನಿನ ಭೂಪ್ರದೇಶಗಳ ಮೇಲೆ ಬರ್ಬರ ಯುದ್ಧವನ್ನೆ ತನ್ನ ಧಾಳಿಗಳ ಮೂಲಕ ಇಸ್ರೇಲ್ ನಡೆಸಿದೆ. ಈ ವರಗೆ ಪ್ಯಾಲಿಸ್ಟೇನಿ ಶಾಲೆಗಳು, ವಿದ್ಯಾರ್ಥಿ ಹಾಸ್ಟೆಲ್, ಹೆರಿಗೆ ಆಸ್ಪತ್ರೆಗಳ ಮೇಲೆ ಬರ್ಬರ ದಾಳಿ ನಡೆಸುತ್ತಿದ್ದ ಇಸ್ರೇಲ್ ಇತ್ತಿಚಿಗೆ, ಪ್ಯಾಲಿಸ್ಟೇನ್ ವಿಮೋಚನಾ ರಂಗದ ನಾಯಕ ಯಾಸೆರ್ ಅರಾಫತ್ ಮನೆ ಹಾಗೂ ಕಛೇರಿಯ ಮೇಲೆ ಬಾಂಬ್ ದಾಳಿ ನಡೆಸಿದೆ. ಈ ದಾಳಿಯೊಂದಿಗೆ ಇದುವರೆಗೆ ನಡೆದಿದ್ದ ಎಲ್ಲಾ "ಶಾಂತಿ ಮಾತುಕತೆಗಳನ್ನು" ಹಾಗೂ ಒಪ್ಪಂದಗಳನ್ನು ನಿರಾಕರಿಸಿರುವ ಇಸ್ರೇಲ್, ಪ್ಯಾಲಿಸ್ಟೇನ್ ' ಅಧ್ಯಕ್ಷ ಯಾಸೆರ್ ಅರಾಫತ್‌ರೊಂದಿಗೆ ಯಾವುದೇ ಸಂದಾನ ಅಥವ ಮಾತುಕತೆಯನ್ನು ತಳ್ಳಿಹಾಕಿದೆ.

ಕಳೆದ ಅರ್ಧ ಶತಮಾನದಿಂದ ಸಾಮ್ರಾಜ್ಯಶಾಹಿ ನೇತೃತ್ವದ ಅಂತರ ರಾಷ್ಟ್ರೀಯ ಪಿತೂರಿಯಿಂದಾಗಿ, ಪ್ಯಾಲಿಸ್ಟೇನಿಯರಿಗೆ, ತಮ್ಮ ತಾಯಿನಾಡಿನ ಪ್ರಾಥಮಿಕ ಮೂಲಭೂತ ಹಕ್ಕನ್ನು ನಿರಾಕರಿಸಲಾಗಿದೆ. ಇಸ್ರೇಲ್‌ನ ಸೈನ್ಯವು ನಿರಂತರ ಶೋದನೆಯನ್ನು ನಡೆಸುತ್ತಾ ನೂರಾರು ಜನರನ್ನು ಕೊಲ್ಲುತ್ತಾ, ಇತರರನ್ನು ಬಂಧಿಸುತ್ತಿದೆ. ಈ ಪ್ರದೇಶದಲ್ಲಿನ ಶಾಂತಿ ಪ್ರಕ್ರಿಯೆಗಳನ್ನು ಸಾರಾಸಗಟಾಗಿ ನಿಷ್ಕ್ರಿಯ ಗೊಳಿಸುವ ಭಯಾನಕ ಪರಿಸ್ಥಿತಿ ಇಸ್ರೇಲ್‌ನ ಈ ದಾಳಿಗಳಿಂದ ಉಂಟಾಗಿದೆ.




ಇಸ್ರೇಲ್ ಧಾಳಿಗೆ ಹತ್ತಿಉರಿಯುತ್ತಿರುವ ಪ್ಯಾಲಿಸ್ಟೇನ್

ಪ್ಯಾಲಿಸ್ಟೇನಿಯರನ್ನು ಸಣ್ಣ ಪ್ರದೇಶಕ್ಕೆ ಸೀಮಿತಗೊಳಿಸಿ,ಅದರ ಸುತ್ತಾ ತನ್ನ ಪ್ರದೇಶಗಳನ್ನು ನಿರ್ಮಿಸಿಕೊಳ್ಳಲು, ಇಸ್ರೇಲ್ ಹವಣಿಸುತ್ತಿರುವಂತೆ ಕಾಣುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿಯು ಸಹಾ 'ಅಪರ್ ದೀಡ್ ಆಳ್ವಿಕೆ'ಯಡಿ ಕರಿ ಜನರನ್ನು 'ಬನ್‌ತುಸ್ಥಾನಗಳಿಗೆ' ಸೀಮಿತಗೊಳಿಸಿ, ಆ ಪ್ರದೇಶಗಳನ್ನು ಸುತ್ತುವರಿಯಲಾಗುತ್ತಿತ್ತು.

ಈ ಹಿಂದೆ ಗಲಭೆ ಭುಗಿಲೆದ್ದಿದ್ದ, ಹಾಗೂ ಅನಂತರದ ಶಾಂತಿ ಮಾತುಕತೆ ಒಪ್ಪಂದದ, ಸೆಪ್ಟೆಂಬರ್ 2000ದ ಹಿಂದಿನ ಪರಿಸ್ಥಿತಿಯನ್ನು ಮರುಸ್ಥಾಪಿಸುವ ಹಿನ್ನೆಲೆಯಲ್ಲಿ, ಎಲ್ಲಾ ರೀತಿಯ ಹಿಂಸಾಚಾರ, ಧಾಳಿ, ವಿನಾಶ, ಪ್ರಚೋಧನೆ ನಿಲ್ಲಿಸುವಂತೆ, ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯವನ್ನು ಅಮೇರಿಕಾ, ಡಿಸೆಂಬರ್ 15 ರಂದು 'ವಿಟೋ' ಮೂಲಕ ರದ್ದು ಮಾಡಿದೆ. ಶೀತಲ ಸಮರದ ಅಂತ್ಯದ ನಂತರ, ಅಂದರೆ 1990ರ ಮೇ ನಂತರ, ಅಮೇರಿಕಾ 6 ಬಾರಿ ತನ್ನ ವಿಟೋ'ವನ್ನು ಚಲಾಯಿಸಿದೆ. ಈ ಎಲ್ಲಾ 6 ಬಾರಿಯ ವಿಟೋ ಚಲಾವಣೆಯು ಇಸ್ರೇಲ್‌ನ ಪರವಾಗಿಯೇ ಅದನ್ನು ಚಲಾಯಿಸಿದೆ ಪ್ಯಾಲೆಸ್ಟೈನ್ ನಾಗರೀಕರಿಗೆ ರಕ್ಷಣೆ ಒದಗಿಸುವ ನಿರ್ಣಯವನ್ನು ವಿರೋಧಿಸಿ ಅಮೇರಿಕಾ ಚಲಾಯಿಸಿದ ವೆಟೋ, ಇತ್ತಿಚಿನದಾಗಿದೆ. ಇದನ್ನೂ ಸಹ ಇಸ್ರೇಲ್ ವಿರೋಧಿಸಿತ್ತು.

ಯಾಸರ್ ಅರಾಫತ್‌ರವರು ಕರೆ ನೀಡಿರುವ ಕದನ ವಿರಾಮ ಹಾಗೂ ಪ್ಯಾಲೆಸ್ಟೇನಿಯರ ಆತ್ಮಹತ್ಯಾ ದಾಳಿಗಳನ್ನು ನಿಲ್ಲಿಸುವ ಸೂಚನೆಗೆ, ಇತರೆ ಅರಬ್ ರಾಷ್ಟ್ರಗಳು ಬೆಂಬಲ ಸೂಚಿಸಿವೆ. ಇದರಿಂದಾಗಿ ಶಾಂತಿ ಮಾತುಕತೆ ಪ್ರಾರಂಭಿಸಲು ಮುಕ್ತ ಅವಕಾಶ ಒದಗಿಬಂದಿತ್ತು. ಆದರೆ ಇಸ್ರೇಲ್ ಅದನ್ನು ಸಾರಾಸಗಟಾಗಿ ನಿರಾಕರಿಸಿದೆ.

14 ತಿಂಗಳುಗಳ ಕಾಲದ ಎರಡನೆ "ಇಂತಿಫಾದ್" ಮುಂದುವರಿದಿದೆ. 'ದಾಳಿಗೆ ಗುರಿಯಾಗಬಲ್ಲ ಹಾಗೂ ಹುತಾತ್ಮರಾಗಲಿರುವ ಜನತೆಗೆ ಉಳಿದಿರುವ ಅವಕಾಶವೆಂದರೆ, ತಮ್ಮನ್ನು



ತಾವು ರಕ್ಷಿಸಿಕೊಳ್ಳುವುದು ಮಾತ್ರ" ಎಂದು ಅರಾಫತ್ ನುಡಿದಿದ್ದಾರೆ.

ಪ್ಯಾಲಿಸ್ಟೇನಿಯರಿಗೆ ತಮ್ಮ 'ತಾಯಿನಾಡಿನ' ಹಕ್ಕನ್ನು ಕಾತರಿಗೊಳಿಸುವ ವಿಶ್ವಜನಾಭಿಪ್ರಾಯ ಗಟ್ಟಿಗೊಳ್ಳಬೇಕು. ಸೆಪ್ಟೆಂಬರ್ 11ರ ನಂತರದ ವಿಶ್ವ ಪರಿಸ್ಥಿತಿಯನ್ನು ಬಳಸಿ, ಇಡೀ ಜನತೆಗೆ ತಮ್ಮ 'ತಾಯಿ ನಾಡಿನ' ಪ್ರಾಥಮಿಕ ಮೂಲಭೂತ ಹಕ್ಕನ್ನು, ನಿರಾಕರಿಸಲು ಅಮೇರಿಕನ್ ಸಾಮ್ರಾಜ್ಯಶಾಹಿ ಹಾಗೂ ಅದರ ಮಧ್ಯ ಪೂರ್ವದಲ್ಲಿನ ಮಿತ್ರ ಇಸ್ರೇಲ್ ಯತ್ನಿಸುತ್ತಿವೆ. ಇದಕ್ಕೆ ಅವಕಾಶ ಮಾಡಿಕೊಡಬಾರದು.




ಮೌಲ್ಯಗಳ ಸಂಘರ್ಷದ ಸಂಕೇತ ಭಾವನಾತ್ಮಕ 'ಕಭೀ ಖುಷಿ ಕಬೀ ಗಮ್'

ಹಮ್ ಆಪ್ ಕೆ ಹೈ ಕೌನ್, ಹಮ್ ಸಾಥ್ ಸಾಥ್ ಹೈ, ಜಾಡಿನಲ್ಲೆ ಮತ್ತೊಂದು ಸಿನಿಮಾ ತೆರೆ ಕಂಡಿದೆ. ಭಿನ್ನತೆಯೆಂದರೆ ಅವುಗಳಲ್ಲಿ ಇಲ್ಲದ ಸೂಪರ್ ಸ್ಟಾರ್ ಅಮಿತಾಬ್ ಹಾಗೂ ಅವರ ತಾರಾ ಪತ್ನಿ ಜಯಾ ಬಚ್ಚನ್ ಈ ಸಿನಿಮಾದಲ್ಲಿದ್ದಾರೆ. ವಿಶೇಷವೆಂದರೆ ಅಂದಿನ ಕಾಲದ ಸೂಪರ್ ಜೋಡಿ ಜಯಾ ಅಮಿತಾಬ್ ಇದರಲ್ಲಿ ತಂದೆ-ತಾಯಿ ಪಾತ್ರ ವಹಿಸಿದ್ದಾರೆ, ವಯಸ್ಸಿಗೆ ತಕ್ಕಂತ ಪಾತ್ರ. ಇವರೊಟ್ಟಿಗೆ ಶಾರುಖ್, ಕಾಜೋಲ್, ಹೃತಿಕ್, ಕರೀನಾ ಹಾಗೂ ರಾಣಿ ಮುಖರ್ಜಿ ಪಾತ್ರ ವಹಿಸಿದ್ದಾರೆ.

ಕುಚ್ ಕುಚ್ ಹೋತಾ ಹೈ ಹಾಡಿನ ಸಂಗೀತದ ಜಾಡನ್ನೆ ಹಿಡಿದು "ಇದೆಲ್ಲಾ ನಿಮ್ಮ ತಂದೆ-ತಾಯಿಗಳಿಗೆ ನಿಮ್ಮ ಪ್ರೀತಿಯ ಕುರಿತದ್ದು" ಎಂಬ ಸಾಲುಗಳೊಂದಿಗೆ ಪ್ರಾರಂಭವಾಗುವ ಈ ಸಿನಿಮಾ, ಸಿರಿವಂತ ರಾಯಚಂದ್ (ಅಮಿತಾಬ್) ಕುಟುಂಬದ ಸುಖ-ದುಃಖಗಳನ್ನು ಬಿಂಬಿಸುವ, ಕೌಟುಂಬಿಕ ಚಿತ್ರವಾಗಿ ಕಭೀ ಖುಷಿ ಕಭೀ ಗಮ್ ಮೂಡಿ ಬಂದಿದೆ. ಆಗರ್ಭ ಸಿರಿವಂತರು, ನೂರಾರು ಕಾರ್ಖಾನೆ, ವ್ಯಾಪಾರ ವಹಿವಾಟಿನ, ಸಾವಿರಾರು ಕೋಟಿ ಡಾಲರ್‌ಗಳ ರಾಯಚಂದ್ ಎಂಪೈರ್‌ನ ಇಬ್ಬರು ಮಕ್ಕಳು ರಾಹುಲ್ (ಶಾರೂಖ್) ಮತ್ತು ರೋಹನ್ (ಹೃತಿಕ್) ರಾಹುಲ್ ದತ್ತು ಪುತ್ರ, ರೋಹನ್ ಸ್ವಂತ ಮಗ. ಆದರೆ ಇದು ಮನೆಯ ಹಿರಿಯರನ್ನು ಹೊರತು ಪಡಿಸಿ ಬೇರೆ ಯಾರಿಗೂ ತಿಳಿದಿರುವುದಿಲ್ಲ. ಇಂತಹ ಸಿರಿವಂತರ ಮಗ ರಾಹುಲ್ ಲಂಡನ್‌ನಿಂದ ಎಂ.ಬಿ.ಎ ಮುಗಿಸಿ ಹಿಂತಿರುಗಿ, ರಾಯಚಂದ್ ಸಾಮ್ರಾಜ್ಯದ ಜವಾಬ್ದಾರಿ ವಹಿಸಿಕೊಳ್ಳುತ್ತಾ, ಸಾಮ್ರಾಜ್ಯದ ಘನತೆ ಗೌರವ, ಪರಂಪರೆ ಮರ್ಯಾದೆ ಎತ್ತಿ ಹಿಡಿಯುವುದಾಗಿ ಪ್ರತಿಜ್ಞೆ ಸ್ವಿಕರಿಸುತ್ತಾನೆ. ಬಹುತೇಕ ಮಕ್ಕಳು ಬಯಸುವಂತೆ ತನ್ನ ತಂದೆ ತಾಯಿಗೆಂದೂ ನೋವುಂಟು ಮಾಡಬಾರದೆಂಬ ಮಹದಾಸೆ ಹೊಂದಿರುತ್ತಾನೆ. ಆದರೆ ಸಹಜವಾಗಿ ಪ್ರತಿಯೊಬ್ಬ ಯುವಕನಲ್ಲೂ ಮೂಡಿಬರಬಹುದಾದಂತ ಪ್ರೀತಿ ಪ್ರೇಮ, ಅದರ ಪರಿಣಾಮವಾಗಿ ಅವ ಅಂಜಲಿ (ಕಾಜೋಲ್) ಯನ್ನು ಪ್ರೀತಿಸಿ ಮದುವೆಯಾಗುತ್ತಾನೆ. ಅಂಜಲಿ ದೆಹಲಿಯ ಚಾಂದನಿ ಚೌಕ್‌ನಲ್ಲಿ ಮಿಟಾಯಿ ಮಾಡಿ, ಮಾರುವ ಒಂದು ಪಂಜಾಬಿ ಕುಟುಂಬದ ಹಿರಿ ಮಗಳು. ರಾಯಚಂದ್ ಕುಟುಂಬದಲ್ಲಿ ಮನೆ ಕೆಲಸ ಮಾಡುವ ಮುಸ್ಲಿಂ ಮಹಿಳೆಯ ಫ್ಯಾಮಿಲಿ ಫ್ರೆಂಡ್ಸ್ ಅಂಜಲಿ ಕುಟುಂಬದವರು. ಆ ಮೂಲಕ ರಾಹುಲ್‌ಗೆ ಪರಿಚಯ. ಆಕೆಯ ಸಹಜತೆಗೆ ರಾಹುಲ್ ಮಾರಿಹೋಗುತ್ತಾನೆ. ತಂದೆಯ ಆಯ್ಕೆ ರಾಣಿ ಮುಖರ್ಜಿಯನ್ನು ತಿರಸ್ಕರಿಸಿ ಅಂಜಲಿಯನ್ನು ಮದುವೆಯಾಗಿದ್ದು, ಅವನು ದತ್ತು ಮಗನಾದ ಕಾರಣ, ಅಪ್ಪನ ಮಾತನ್ನ ದಿಕ್ಕರಿಸಿದ್ದಾನೆ, ಅವನಿಗೆ ಆ ಮನೆಯಲ್ಲಿ ಸ್ಥಳವಿಲ್ಲವೆಂದಾಗ, ಮನೆ ಬಿಟ್ಟು ಹೋಗಿ ಲಂಡನ್‌ನಲ್ಲಿ ನೆಲೆಸಿ, ಪತ್ನಿ, ನಾದಿನಿ ಪೂಜಾ (ಕರೀನಾ), ಮಗ ಹಾಗು ಮನೆ ಕೆಲಸದಾಕೆ ಮುಸ್ಲಿಂ ಮಹಿಳೆಯೊಂದಿಗೆ ಇರುತ್ತಾನೆ. ಅಂತಿಮವಾಗಿ ರೋಹನ್, ಶಿಕ್ಷಣ ಮುಗಿಸಿ ನಂತರ ಲಂಡನ್‌ಗೆ ಹೋಗಿ ಅಣ್ಣನನ್ನು ಒಲಿಸಿ ಕರೆತರಲು ಕುಟುಂಬವನ್ನು ಒಂದು ಮಾಡಲು ಪ್ರಯತ್ನಿಸುತ್ತಾನೆ. ಈ ಪ್ರಯತ್ನದ ನಡುವೆ ಪೂಜಾಳೊಂದಿಗಿದ್ದ, ಸ್ನೇಹ-ಪ್ರೇಮವಾಗಿ ಮಾರ್ಪಡುತ್ತದೆ. ಅಂತಿಮವಾಗಿ ಕುಟುಂಬ ಒಂದಾಗುತ್ತದೆ, ಇದೇ ಕಭೀ ಖುಷಿ ಕಭೀ ಗಮ್.

ಎಲ್ಲಾ ಪಾತ್ರಗಳಲ್ಲೂ, ಪ್ರತಿಯೊಬ್ಬರು ಉತ್ತಮ ನಟನೆ ತೋರಿರುವಾಗ, ಕೌಟುಂಬಿಕ ಚಿತ್ರವಾಗಿರುವ ಸಿನಿಮಾಗೆ, ಯುವಕರನ್ನು ಸೆಳೆಯಲು ಕರೀನಾಳ ಅರೆ ಬರೆ ಬಟ್ಟೆಯ ವಯ್ಯಾರ, ಹೃತಿಕ್‌ನೊಂದಿಗೆ ಅಗತ್ಯಕ್ಕಿಂತ ಹೆಚ್ಚು ಹಾಡು-ಕುಣಿತ, ಹಾಗೂ ರಾಣಿ ಮುಖರ್ಜಿಯೊಂದಿಗೆ ಶಾರೂಕ್ ಅಮಿತಾಬ್ ಕುಣಿತವನ್ನು ತುರುಕಲಾಗಿದೆ.

ಅಮಿತಾಬ್-ಜಯಾ, ಶಾರೂಕ್ ಕಾಜೋಲ್, ಹೃತಿಕ್ ಕರೀನಾ ಇತ್ಯಾದಿ ಅನೇಕ ಅಭಿರುಚಿಯೊಂದಿಗೆ, ಈ **ಸಿನಿಮಾ ನೋಡಲು ಹೋಗುವ ಪ್ರೇಕ್ಷಕರಿಗೆ, ಸಿನಿಮಾ ಇಂದಿನ ನಮ್ಮ**



ಭಾರತದಲ್ಲಿನ ವ್ಯವಸ್ಥೆಯಲ್ಲಿ ನಡೆದಿರುವ ಪಾಳೆಯಗಾರಿ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳ ಸಂಘರ್ಷವನ್ನು ಎಲ್ಲೋ ಸುಪ್ತವಾಗಿ ಸಂಕೇತಿಸುತ್ತದೆ. ಬಂಡವಾಳಗಾರನಾದರೂ ನಮ್ಮ ದೇಶದಲ್ಲಿನ ಬಂಡವಾಳಶಾಹಿಯಂತೆಯೆ, ತನ್ನ ಕಾಲುಗಳನ್ನು ಪಾಳೆಯಗಾರಿ ನೆಲದಲ್ಲಿ ಹೂತಿಸಿಕೊಂಡು ನಮ್ಮ ಪರಂಪರೆ, ನಮ್ಮ ಸಂಸ್ಕೃತಿ ಆಚಾರ ವಿಚಾರಕ್ಕೆ ಸರಿ ಹೊಂದದ ಹೆಣ್ಣು ಪೂಜಾ ಅವಳನ್ನು ಹೇಗೆ ರಾಯಚಂದ್ ಕುಟುಂಬದ ಸೊಸೆಯನ್ನಾಗಿಸಿಕೊಳ್ಳುವುದು, ಅದು ಸಾಧ್ಯವೇ ಇಲ್ಲ ಎನ್ನುತ್ತಾ ಮಗನನ್ನು ಎಷ್ಟೆ ಪ್ರೀತಿಸಿದರೂ, ಅವನ ಪ್ರಜಾಸತ್ತಾತ್ಮಕ ಹಕ್ಕನ್ನು ಕಸಿಯಲು ಯತ್ನಿಸುತ್ತಾನೆ. ತನ್ನ ಪಾಳೆಗಾರಿ ಸರ್ವಾಧಿಕಾರ ಸ್ಥಾಪಿಸಲು ಯತ್ನಿಸಿ ಮಗನನ್ನೆ ಕಳೆದುಕೊಳ್ಳುತ್ತಾನೆ. ಅಂತಿಮವಾಗಿ ತನ್ನದು ತಪ್ಪೆಂದು ಅರಿತು ಮಗ ಸೊಸೆಯನ್ನು ಸ್ವಿಕರಿಸುತ್ತಾನೆ. ಅವನ ಪಾಳೆಗಾರಿ ಮೌಲ್ಯ ಸೋಲೊಪ್ಪ ಬೇಕಾಗುತ್ತದೆ. ಅವನ ಸರ್ವಾಧಿಕಾರವನ್ನು ಸದಾ "ಸತಿ ಪರಮೇಶ್ವರ" "ಪರಮೇಶ್ವರ ತಪ್ಪನ್ನೆಂದು ಮಾಡಲಾರ" ಎಂಬ ಅಚಲ ನಂಬಿಕೆಯುಳ್ಳ ಆತನ ಹೆಂಡತಿ ನಂದಿನಿ (ಜಯಾ) ಕೊನೆಗೆ ತನ್ನ ಹಕ್ಕನ್ನು ಚಲಾಯಿಸಿ, ಮಗ ಸೊಸೆಯನ್ನು ಮನೆಯೊಳಗೆ ಕರೆತರುತ್ತಾಳೆ.

ಅಂತಹ ಶ್ರೀಮಂತ ಕುಟುಂಬದಲ್ಲಿ ಇಂತಹ ಘಟನೆ ಸಾಧ್ಯವೇ? ಇದು ಅವಾಸ್ತವ! ಎಂದರೂ ಇಂತಹ ಮೌಲ್ಯಗಳ ಸಂಘರ್ಷ ನಿರಂತರವಾಗಿ ಪ್ರೀತಿ ಪ್ರೇಮ ವಿವಾಹಗಳ ಮೂಲಕ ನಮ್ಮ ಸಮಾಜದಲ್ಲಿ ಸಾಮಾನ್ಯ ಕುಟುಂಬದಲ್ಲಿ ನಡೆದೆ ಇವೆ ಎಂಬುದಂತೂ ವಾಸ್ತವ. ಭಾವನಾತ್ಮಕವಾಗಿ ಸಂಭಾಷಣೆಗಳು, ಇಂತಹ ಮೌಲ್ಯಗಳ ಸಂಘರ್ಷದ ಭಾಗವಾಗಿರುವವರನ್ನು ತನ್ನೊಂದಿಗೆ ಸೆಳೆದೊಯ್ಯುತ್ತದೆ ಮಾತ್ರವಲ್ಲ, ಅಲ್ಲಲ್ಲಿ ಕಣ್ತುಂಬಿ ಬರುತ್ತದೆ. ಭಾವನಾತ್ಮಕವಾದರೂ ಸುಪ್ತ ಆಶಯಗಳಲ್ಲೊ ಒಂದು ಕಡೆ, ಪ್ರಜಾಸತ್ತಾತ್ಮಕ ಆಶಯಗಳಿಗೆ ಹಕ್ಕುಗಳಿಗೆ ಅವಕಾಶ ಒದಗಿಸದ ಪಾಳೆಯಗಾರಿ ಮೌಲ್ಯಗಳಲ್ಲಿ ಕಾಲಿರಿಸಿ ಬಂಡವಾಳಶಾಹಿ ಬೆಳವಣಿಗೆಯ ಕನಸು, ಸುಖ, ಆಶಯ ನನಸಾಗದೆಂಬ ಈಡೇರದೆಂಬ ಸಂಕೇತವನ್ನು ಈ ಕಬಿ ಖುಷಿ ಕಬೀ ಗಮ್ ನೀಡ ಬಯಸಿದೆ. ಒಂದು ವೇಳೆ ಮಗ ಹಿಂತಿರುಗಿ ಬರದಿದ್ದರೆ, ಅವನೊಂದಿಗೆ ಎರಡನೆ ಮಗನೂ ಹೋಗಿದ್ದರೆ, ಅಪ್ಪ ಅವರನ್ನು ಸ್ವೀಕರಿಸದಿದ್ದರೆ ರಾಯಚಂದ್ ಎಂಪೈರ್‌ನ ಭವಿಷ್ಯವೇನಾಗುತ್ತಿತ್ತು?ಅಷ್ಟರ ಮಟ್ಟಿಗೆ ಇದು ರಾಜಿಯೇ ? ಸಿನಿಮಾ ನೋಡಿದರೆ ಉತ್ತರಿಸಿ!

- ಕೆ.ಎನ್. ಉಮೇಶ್

ಕೊಡಗಿಗೆ ಕೊಳ್ಳಿ ಇಟ್ಟ ಖಾವಿ ಪಡೆಗಳು

ಪುಟ 7 ರಿಂದ

ಬಾಂಬ್ ಹಾಕುವುದಾಗಿ ಬೆದರಿಸಿದ್ದಾರೆ. ಅಲ್ಲಿ ಪೋಲೀಸ್ ವರಿಷ್ಠಾಧಿಕಾರಿ ಉಮೇಶ್ ಕುಮಾರ್, ಜಿಲ್ಲಾಧಿಕಾರಿ ಇದ್ದರೂ ಅದನ್ನು ನಿಯಂತ್ರಿಸಲಾಗಲಿಲ್ಲ. ಆರಂಭದಲ್ಲಿ ವಿನಂತಿಸುವ 'ಡ್ಯೂಟಿ' ಮಾತ್ರ ಮಾಡಿದರು ಅವರು. ಆದರೆ ಈ ದುಷ್ಟ ನಾಯಕರು ಇವರನ್ನು, ಕಾನೂನನ್ನು ಲೆಕ್ಕಕ್ಕೇ ಇಡಲಿಲ್ಲ ಎಂಬುದು ಗಂಭೀರ ವಿಚಾರ.

ಸರ್ಕಾರ ಶಾಮೀಲು

ಈ ಡಿಸೆಂಬರ್ 6 ರ ಸಭೆಯೂ ಸಹ ಇದೆ ಸಂಚಿನ ಸರಮಾಲೆಯಲ್ಲಿದ್ದು ಎಂಬುದಕ್ಕೆ ಅನುಮಾನವೇ ಇಲ್ಲ. ಈ ಚಿಡ್ಡಿಗಳು ಹೇಳಿದಂತೆ ರಂಜಾನ್ ನಡೆಯಲು ಬಿಡಬಾರದು ಎಂಬುದು ಹಾಗೆ ನಿಗದಿತ ಯೋಜನೆಯಂತೆ ಪೂರ್ವಸಿದ್ಧರಾಗಿ ಇಡೀ ಜಿಲ್ಲೆಯನ್ನೇ ಹೊತ್ತಿ ಉರಿಸಿದ್ದು ಎಲ್ಲರ ಕಣ್ಣೆದುರು ಇದೆ. ಇದಕ್ಕೆಲ್ಲಾ ಪೋಲೀಸ್ ಅಧಿಕಾರಿಗಳು 'ಶಕ್ತಿ ಸಮೂಹ'ದ ಪತ್ರಿಕಾ ಪಡೆ ಬಹಳ ವ್ಯವಸ್ಥಿತವಾಗಿ ಸುಳ್ಳು ಸುದ್ದಿ ಹಬ್ಬಿಸಿ ತಮ್ಮದೇ ಸೇವೆ ಮಾಡಿದ್ದು ಇತರೆ ಕೆಲವರು ಇದಕ್ಕೆ ದನಿಗೂಡಿಸಿದ್ದಾರೆ.

ಈ ದುಷ್ಟ ಯೋಜನೆ ರೂಪಿಕೊಂಡಿರುವುದರಲ್ಲಿ ಕೇವಲ ಕೊಡಗಿನ ನಾಯಕ ಮಣಿಗಳು ಪಾತ್ರವಷ್ಟೇ ಇರಲಾರದು. ರಾಜ್ಯದ ಅದರಲ್ಲೂ ಪಕ್ಕದ ಜಿಲ್ಲೆಗಳು ಹಾಗೂ ಕೇರಳದ ಕ್ರಿಮಿನಲ್ ತಂಡಗಳ ಸ್ಪಷ್ಟ ಕೈವಾಡ ಕಾಣುತ್ತಿದೆ. ಇಡೀ ಘಟನೆಯ ತನಿಖೆ ನಿಷ್ಪಕ್ಷಪಾತವಾಗಿ ನಿಷ್ಟುರುವಾಗಿ ನಡೆದರೆ ಸಂಚುಗಳು ಬಯಲಾಗುತ್ತವೆ.



ಇಂತಹ ಘಟನೆ ನಡೆಸಿದ್ದು ಯಾಕೆ? ಎಂಬ ಪ್ರಶ್ನೆ. ದೇಶದಲ್ಲಿ ಬಿಜೆಪಿ ತನ್ನ ದುರಾಡಳಿತ, ಜನವಂಚನೆ, ದೇಶದ್ರೋಹಿ ನೀತಿಗಳಿಂದ ಜನತೆಯಿಂದ ದೂರ ಸರಿಯುತ್ತಿದೆ. ಅತೃಪ್ತಿ ಹೆಚ್ಚುತ್ತಿದೆ. ಇತ್ತೀಚಿಗಿನ



ರಾಜ್ಯಗಳ ಚುನಾವಣೆಗಳಲ್ಲಿ ಬಿಜೆಪಿ ನೆಲ ಕಚ್ಚುತ್ತಿದೆ. ಕರ್ನಾಟಕದಲ್ಲಿಯೂ ರಾಜ್ಯದ ಅಧಿಕಾರ ಹಿಡಿ ಯುವುದಿರಲಿ, ಪಂಚಾಯತ್, ಸ್ಥಳೀಯ ಚುನಾವಣೆಗಳಲ್ಲಿ ಧೂಳಿಪಟವಾಗಿದೆ. ವಿನಾಶದ ಆರ್ಥಿಕ ನೀತಿ, ಉತ್ತರ ಪ್ರದೇಶದ ಚುನಾವಣೆಗಳು, ಕೇಂದ್ರ ಸರ್ಕಾರದ ಹಗರಣಗಳ ಎದುರಲ್ಲಿ ಬಚಾವಾಗಲು ಅನ್ಯ ವಿಷಯಗಳಿಗೆ ಮೊರೆ ಹೋಗದೇ ವಿಧಿಯಿಲ್ಲ. ಹೀಗಾಗಿ ಕೋಮು ದ್ವೇಷವನ್ನೇ ಆಶ್ರಯಿಸುತ್ತಿದೆ. ವಿಶೇಷವಾಗಿ ಕೊಡಗಿನಲ್ಲಿಯೂ ಬಿಜೆಪಿ ಹಿಂದಿದ್ದ ಎಲ್ಲಾ 3 ಶಾಸಕರ ಪೈಕಿ ಈಗ ಕೇವಲ ಒಬ್ಬರನ್ನು ಹೊಂದಿದೆ. ಮಡಿಕೇರಿಯಲ್ಲಿ 3 ನೇ ಸ್ಥಾನಕ್ಕೆ ತಳ್ಳಿಸಿಕೊಂಡಿದೆ. ಬಿಜೆಪಿ ಜಿಲ್ಲಾ ಪಂಚಾಯತ್‌ನಲ್ಲಿ ಕೇವಲ ಒಂದೇ ಸ್ಥಾನ. ಮತ್ತು ಕಾಫಿ ಬೆಳೆಗಾರರ ಬಗ್ಗೆ ಏನೇನೇ ಕಛೇರಿ ಕಟ್ಟಿ, ಒಂದೆರೆಡು ವರುಷ ತಾಳಿ ಎಂದು ಉಪದೇಶಿಸಿದ್ದ ಅದರ ಬಣ್ಣ ಬಯಲಾಗುತ್ತಿದೆ. ಸಚಿವ ಧನಂಜಯ ಕುಮಾರನನ್ನು ಅದರ ಹಿಂಬಾಲಕರನ್ನು ಜನ ಪ್ರಶ್ನಿಸುತ್ತಿದ್ದಾರೆ. ಅತೃಪ್ತಿ ಹೆಚ್ಚುತ್ತಿದೆ. ಇಂತಹ ಸ್ಥಿತಿಯಿಂದ ಪಾರಾಗಲು ಬಿಜೆಪಿ- ಆರ್‌ಎಸ್‌ಎಸ್‌ಗಳು ಕೋಮು ವಿಭಜನೆಗಾಗಿ ಯತ್ನಿಸುತ್ತಿವೆ. ಅದರ ಭಾಗವೇ ಈ ಆಕ್ರಮಣ. ಇವರ ಬತ್ತಳಿಕೆಯಲ್ಲೇ ಇನ್ನೆಂತಹ ಭಯಾನಕ ಅಸ್ತ್ರಗಳಿವೆಯೇ ಊಹಿಸಲೂ ಅಸಾಧ್ಯ. ಇಂತಹವುಗಳನ್ನು ಎಲ್ಲಾ ಧರ್ಮನಿರಪೇಕ್ಷಿತ ಶಕ್ತಿಗಳು ಒಗ್ಗೂಡಿ ಬಗ್ಗು ಬಡಿಯದೇ ಅನ್ಯ ಮಾರ್ಗವಿಲ್ಲ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.